# ಶ್ರಮಿಕ ದೃಷ್ಟಿಕೋನ

ಸಂಪುಟ: 38 ಸಂಚಿಕೆ: 05

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ–ಕಮ್ಯುನಿಸ್ಟ್ ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ | SUCI(C) ಜುಲೈ 2025 ಬೆಲೆ: ರೂ. 7/–


**ಒಳ ಪುಟಗಳಲ್ಲಿ.............**


ಭಾರತೀಯ ರೈಲ್ವೆ ಖಾಸಗೀರಣವನ್ನು ವಿರೋಧಿಸಿ..................2
ಕೆಂಪು ನಾಡಿನ ಕರಾಳ ಕಥನ........................................3
ಏಕೀಕೃತ ಪಿಂಚಣಿ ಯೋಜನೆ – ಹೊಸ ವಿಧಾನದ ವಂಚನೆ....4
ಟ್ರಂಪ್ ಸುಂಕ ಯುದ್ಧ.................................................5
ಐಎಲ್‌ಓ ಸಮ್ಮೇಳನದಲ್ಲಿ ಎಐಯುಟಿಯುಸಿ..........................6
ಐಪಿಎಲ್ ಕ್ರಿಕೆಟ್: ಬೆಟ್ಟಿಂಗ್ ದಾವಾಗ್ನಿಯಲ್ಲಿ ಬೇಯುತ್ತಿದೆ........8


## ಸಾರ್ವಜನಿಕ ಶಿಕ್ಷಣ ಉಳಿಸಿ!

# ರಾಜ್ಯದ ಜನತೆಯ ಒಕ್ಕೊರಲ ಆಗ್ರಹ!!

ಬಡ ರೈತ – ಕಾರ್ಮಿಕರ, ದುಡಿಯುವ ವರ್ಗದ ಮಕ್ಕಳಿಗೆ ಆಶಾಕಿರಣವೇ ಸರ್ಕಾರಿ ಶಾಲೆಗಳು! ಆರ್ಥಿಕ ಸಂಕಷ್ಟದಿಂದ ಬಳಲುತ್ತಿರುವ ಕೋಟ್ಯಂತರ ಜನತೆಗೆ ಶಿಕ್ಷಣವೇ ಆಶಾಕಿರಣ. ತಮ್ಮ ಮಕ್ಕಳ ಉಜ್ವಲ ಭವಿಷ್ಯವನ್ನು ಬೆಳಗುವ ಹಣತೆಯೇ ನಮ್ಮ ಸರ್ಕಾರಿ ಶಾಲೆಗಳು ಎಂದವರು ನಂಬಿದ್ದಾರೆ. ಅಂತಹ ಶಾಲೆಗಳನ್ನು ಬೆಳೆಸುವುದು, ರಕ್ಷಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಬೇಕು. ಆದರೆ ಕರ್ನಾಟಕ ರಾಜ್ಯ ಸರ್ಕಾರವು "ಹಬ್ ಅಂಡ್ ಸ್ಪೋಕ್" ಹೆಸರಿನಲ್ಲಿ 6,000 ಕ್ಕೂ ಹೆಚ್ಚು ಶಾಲೆಗಳನ್ನು 'ವಿಲೀನ' ಗೊಳಿಸಲು ನಿರ್ಧರಿಸಿದೆ. 5 ಅಥವಾ 6 ಶಾಲೆಗಳನ್ನು 1 ಶಾಲೆಗೆ ವಿಲೀನಗೊಳಿಸುವುದು ಎಂದರೆ 5 ಶಾಲೆಗಳನ್ನು ಮುಚ್ಚುವುದು! ಈ ಸರಳ ಸತ್ಯ ಅರ್ಥವಾಗದೇ ಇರಲು ನಮ್ಮ ಜನರು ಮೂರ್ಖರಲ್ಲ! ಬಡ ಮಕ್ಕಳ ಭವಿಷ್ಯವನ್ನು ಸರ್ಕಾರವೇ ಕಸಿಯುತ್ತಿರುವುದು ಅಪ್ರಜಾತಾಂತ್ರಿಕ ಮತ್ತು ಅತ್ಯಂತ ಖೇದಕರ ಸಂಗತಿ. ಸರ್ಕಾರವು ತನ್ನ ನಿರ್ಧಾರವನ್ನು ಸಮರ್ಥಿಸಿಕೊಳ್ಳಲು ಹಲವು ಕಾರಣಗಳನ್ನು ನೀಡುತ್ತಿದೆ. ಈ ಸುಳ್ಳು ಕಾರಣಗಳನ್ನು ಬಯಲು ಮಾಡಿ ಜನ ಹೋರಾಟವನ್ನು ಬೆಳೆಸುವುದು ನಮ್ಮ ಮುಂದಿರುವ ಸವಾಲು.

### ಕಡಿಮೆ ದಾಖಲಾತಿಯ ಕುಂಟು ನೆಪ

ರಾಜ್ಯ ಸರ್ಕಾರವು 10 ಕ್ಕಿಂತ ಕಡಿಮೆ ದಾಖಲಾತಿ ಇರುವ ಸರ್ಕಾರಿ ಶಾಲೆಗಳನ್ನು "ವಿಲೀನಗೊಳಿಸಲಿದೆ" ಅಂದರೆ ಮುಚ್ಚಲಿದೆ ಎಂದು ರಾಜ್ಯದ ಪ್ರಮುಖ ಪತ್ರಿಕೆಗಳು ವರದಿ ಮಾಡಿವೆ. ಖಾಸಗಿ ಶಾಲೆಗಳಲ್ಲಿ ದಾಖಲಾತಿ ಹೆಚ್ಚುತ್ತಿರುವಾಗ, ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಏಕೆ ಇಳಿಮುಖವಾಗುತ್ತಿದೆ? ಇದಕ್ಕೆ ಕಾರಣಗಳು ಏನು? ಇದಕ್ಕೆ ಯಾರು ಹೊಣೆ? ಎಂಬ ಪ್ರಶ್ನೆಗಳಿಗೆ ಉತ್ತರವನ್ನು ನಾವು ಕಂಡುಕೊಳ್ಳಬೇಕಿದೆ.

ಯುನಿಫೈಡ್ ಡಿಸ್ಟ್ರಿಕ್ಟ್ ಇನ್ಫರ್ಮೇಷನ್ ಸಿಸ್ಟಮ್ ಫಾರ್ ಎಜುಕೇಶನ್ ಪ್ಲಸ್ (ಯುಡಿಐಎಸ್‌ಇ+) ವರದಿಯ ಪ್ರಕಾರ :

* 3,500 ಕ್ಕೂ ಹೆಚ್ಚು ಶಾಲೆಗಳಲ್ಲಿ ಬಳಕೆಗೆ ಯೋಗ್ಯ ಶೌಚಾಲಯದ ವ್ಯವಸ್ಥೆಯೇ ಇಲ್ಲ.

* 2,600 ಕ್ಕೂ ಹೆಚ್ಚು ಶಾಲೆಗಳಲ್ಲಿ ಗಂಡು ಮಕ್ಕಳಿಗೆ, 1,000 ಕ್ಕೂ ಹೆಚ್ಚು ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯವಿಲ್ಲ.

* 1,052 ಶಾಲೆಗಳಲ್ಲಿ ಕ್ರಿಯಾತ್ಮಕ ವಿದ್ಯುತ್ ಸೌಲಭ್ಯ ಹಾಗೂ 213 ಶಾಲೆಗಳಲ್ಲಿ ಕುಡಿಯುವ ನೀರಿನ ಪೂರೈಕೆ ಇಲ್ಲವಾಗಿದೆ.

ಹಲವು ಶಾಲೆಗಳ ಕಟ್ಟಡಗಳು ವರ್ಷಗಳಿಂದ ದುರಸ್ತಿ ಕಾಣದೇ ಛಾವಣಿಗಳು ಸೋರುತ್ತಿವೆ. ಸುಮಾರು 21, 255 ಕೊಠಡಿಗಳಿಗೆ ದೊಡ್ಡ ಪ್ರಮಾಣದ ದುರಸ್ತಿಯಾಗಬೇಕಿದೆ ಎಂದು ಇಲಾಖೆಯೇ ಹೇಳಿದೆ! ಇಂತಹ ಶೋಚನೀಯ ಪರಿಸ್ಥಿತಿಯಲ್ಲಿರುವ ಸರ್ಕಾರಿ ಶಾಲೆಗಳಿಗೆ ಪೋಷಕರು ತಮ್ಮ ಮಕ್ಕಳನ್ನು ಹೇಗೆ ತಾನೇ ನಿರ್ಭಯವಾಗಿ ಕಳುಹಿಸಲು ಸಾಧ್ಯ? ಸರ್ಕಾರಿ ಶಾಲೆಗಳು ಎದುರಿಸುತ್ತಿರುವ ಈ ಗಂಭೀರ ಸಮಸ್ಯೆಗಳನ್ನು ಪರಿಹರಿಸದೇ ಶಾಲೆಗಳನ್ನೇ ಮುಚ್ಚಲು ಹೊರಟಿರುವುದು 'ನೆಗಡಿ ಬಂದರೆ ಮೂಗನ್ನೇ ಕತ್ತರಿಸಿದಂತೆ'! ವಿಪರ್ಯಾಸವೆಂದರೆ ದಾಖಲಾತಿ ಸಂಖ್ಯೆ ಹೆಚ್ಚಿರುವ ಶಾಲೆಗಳ ಪರಿಸ್ಥಿತಿಯು ಇದಕ್ಕಿಂತ ಯಾವುದೇ ರೀತಿಯಲ್ಲೂ ಭಿನ್ನವಾಗಿಲ್ಲ.

* ಬಿಜಾಪುರದ ಒಂದು ಸರ್ಕಾರಿ ಶಾಲೆಯಲ್ಲಿ 160 ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ ಆದರೆ ಇಲ್ಲಿ ಇರುವ ಶಿಕ್ಷಕರು ಕೇವಲ ಇಬ್ಬರು.

* ದಾವಣಗೆರೆ ಜಿಲ್ಲೆಯ ಕಾರಿಗನೂರು ಗ್ರಾಮದ ಸರ್ಕಾರಿ ಶಾಲೆ. ಇದು ಕರ್ನಾಟಕದ ಮಾಜಿ ಮುಖ್ಯಮಂತ್ರಿ ಶ್ರೀಯುತ ಜೆ.ಎಚ್. ಪಟೇಲ್ ಅವರು ವ್ಯಾಸಂಗ ಮಾಡಿದ ಶಾಲೆ. ಇಲ್ಲಿ 600 ಕ್ಕೂ ಹೆಚ್ಚು ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಇದರ ಕಟ್ಟಡ ಅತ್ಯಂತ ಗಂಭೀರ ಪರಿಸ್ಥಿತಿಯಲ್ಲಿದೆ. ಚಾವಣಿ ಎಂದು ಕುಸಿದು ಬೀಳುತ್ತದೆ ಎಂಬ ಆತಂಕದ ಕ್ಷಣಗಣನೆ ಪೋಷಕರದ್ದಾಗಿದೆ.

* 7,821 ಏಕೋಪಾಧ್ಯಾಯ ಶಾಲೆಗಳನ್ನು ಹೊಂದಿರುವ ಹೆಗ್ಗಳಿಕೆ ನಮ್ಮ ರಾಜ್ಯದ್ದು.

* ಅತೀ ಮುಖ್ಯವಾಗಿ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ 59 ಸಾವಿರಕ್ಕೂ ಹೆಚ್ಚು ಶಿಕ್ಷಕರ ಹುದ್ದೆಗಳು ಖಾಲಿ ಇವೆ.

ಹಲವು ದಶಕಗಳಿಂದ ನಮ್ಮ ಸರ್ಕಾರಿ ಶಾಲೆಗಳ ಪರಿಸ್ಥಿತಿ ದಿನೇ ದಿನೇ ಹದಗೆಡುತ್ತಿದೆ. ಈ ಶಾಲೆಗಳನ್ನು ಉಳಿಸುವ, ಬೆಳೆಸುವ ಯಾವುದೇ ಇಚ್ಛಾ ಶಕ್ತಿಯನ್ನು ನಾವು ಆಳ್ವಿಕರಲ್ಲಿ ಕಾಣುತ್ತಿಲ್ಲ. ಬದಲಾಗಿ ಕ್ರಮೇಣವಾಗಿ ಸರ್ಕಾರಿ ಶಾಲೆಗಳನ್ನೇ ಇಲ್ಲವಾಗಿಸಿ, ಶಿಕ್ಷಣವನ್ನು ಸಂಪೂರ್ಣ ಖಾಸಗೀಕರಣಗೊಳಿಸುವ ಹುನ್ನಾರವೇ ಎದ್ದು ಕಾಣುತ್ತಿದೆ.

* ಕಡಿಮೆ ದಾಖಲಾತಿಯ ಕಾರಣದಿಂದ ಕಳೆದ 2 ವರ್ಷದಲ್ಲಿ 144 ಸರ್ಕಾರಿ ಶಾಲೆಗಳನ್ನು ಮುಚ್ಚಲಾಗಿದೆ. ಆದರೆ, ಎಂತಹ ವಿಪರ್ಯಾಸವೆಂದರೆ ಮುಚ್ಚಲ್ಪಟ್ಟ ಪ್ರತಿಯೊಂದು ಸರ್ಕಾರಿ ಶಾಲೆಯ ನಾಲ್ಕು ಕಿಲೋಮೀಟರ್ ವಿಸ್ತೀರ್ಣದಲ್ಲಿ 44 ಖಾಸಗಿ ಶಾಲೆಗಳು ಆರಂಭವಾಗಿವೆ! (10–2–2025, ಡೆಕ್ಕನ್ ಹೆರಾಲ್ಡ್ , ಹುಬ್ಬಳ್ಳಿ ಆವೃತ್ತಿ)

ಕಳೆದ 6 ವರ್ಷಗಳಲ್ಲಿ 3,600 ಖಾಸಗಿ ಶಾಲೆಗಳು ಹಾಗೂ ಪ್ರಸಕ್ತ ವರ್ಷದಲ್ಲಿ 470 ಖಾಸಗಿ ಶಾಲೆಗಳಿಗೆ ಪರವಾನಗಿ ನೀಡಿರುವುದೇ ಇದಕ್ಕೆ ಸಾಕ್ಷಿ! ಖಾಸಗಿ ಶಾಲೆಗಳಿಗೆ "ಗಿರಾಕಿಗಳನ್ನು" ಬಲವಂತವಾಗಿ ದಬ್ಬುವ ಉದ್ದೇಶದಿಂದಲೇ ಸರ್ಕಾರಿ ಶಾಲೆಗಳನ್ನು ಕತ್ತುಹಿಚುಕಿ ಸಾಯಿಸುವ "ವಿನೂತನ ಶಿಕ್ಷಣ ನೀತಿ"ಯನ್ನು ರಾಜ್ಯ ಸರ್ಕಾರ ಪಾಲಿಸುತ್ತಾ ಬಂದಿದೆ!

### ಸೋರುತಿಹುದು ಶಾಲೆಯ ಮಾಳಿಗೆ

ರಾಜ್ಯದ 21, 225 ಸಾವಿರ ಶಾಲೆಗಳ ಕೊಠಡಿಗಳು ದುರಸ್ತಿಗೆ ಬಂದಿವೆ! ಮಳೆ ಬಂದರೆ ಸೋರುವ ಕೊಠಡಿಗಳಲ್ಲೇ ತರಗತಿಗಳು ನಡೆಯುತ್ತಿವೆ. ಸುರಕ್ಷಿತ ಸ್ಥಳಗಳಲ್ಲಿ ಮಕ್ಕಳನ್ನು ಕೂರಿಸಿ ತರಗತಿ ನಡೆಸಲು ಶಿಕ್ಷಕರ ಪರದಾಟವಂತೂ ಹೇಳತೀರದು. ದೇಗುಲ, ಆಸ್ಪತ್ರೆ ಕಟ್ಟಡ, ಎಲ್ಲೆಂದರಲ್ಲಿ ತರಗತಿಗಳನ್ನು ನಡೆಸುವುದು ಸರ್ವೇಸಾಮಾನ್ಯವೆಂದರೆ ಉತ್ಪ್ರೇಕ್ಷೆಯಾಗಲಾರದು. ರಾಜ್ಯದ **ಎಜುಕೇಷನಲ್ ಹಬ್** ಎಂದು ಕರೆಸಿಕೊಳ್ಳುವ ಜಿಲ್ಲೆಗಳದ್ದೂ ಇದೇ ದುಸ್ಥಿತಿ. ಮಳೆಯಿಂದಾಗಿ ಸೋರುತ್ತಿರುವ ಶಾಲೆಗಳನ್ನು ದುರಸ್ತಿಗೊಳಿಸಿ ಎಂದು ಶಾಲಾ ಶಿಕ್ಷಕರೂ ಸರ್ಕಾರಕ್ಕೆ ಪತ್ರಗಳ ಮೇಲೆ ಪತ್ರಗಳನ್ನು ಬರೆದು ಮನವಿ ಮಾಡುತ್ತಿದ್ದಾರೆ. ಇಂತಹ ಮನವಿ ಬರೆದ ಶಿಕ್ಷಕರನ್ನು ಅಮಾನತ್ತುಗೊಳಿಸಿದೆ ನಮ್ಮ 'ಪ್ರಜಾತಾಂತ್ರಿಕ' ರಾಜ್ಯ ಸರ್ಕಾರ! ಇದು ಅತ್ಯಂತ ಖಂಡನೀಯ ಕ್ರಮ.

### ವಿದ್ಯಾರ್ಥಿಗಳ ಹಾಗೂ ಜನಸಾಮಾನ್ಯರ ಹೋರಾಟವೇ ಮುಂದಿನ ಏಕೈಕ ದಾರಿ

ಈಗಾಗಲೇ ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆಯು 'ಸಾರ್ವಜನಿಕ ಶಿಕ್ಷಣ ಉಳಿಸಿ' 'ಸರ್ಕಾರಿ ಶಾಲೆಗಳನ್ನು ರಕ್ಷಿಸಿ, ಬಲಪಡಿಸಿ' ಘೋಷವಾಕ್ಯದೊಂದಿಗೆ 50 ಲಕ್ಷ ಸಹಿ ಸಂಗ್ರಹ ಅಭಿಯಾನಕ್ಕೆ ಕರೆ ನೀಡಿದೆ. ರಾಜ್ಯವ್ಯಾಪಿ ನೂರಾರು ಸಾರ್ವಜನಿಕ ಕಾರ್ಯಕ್ರಮಗಳು, ಪೋಷಕರ ಸಭೆಗಳನ್ನು ನಡೆಸುವ ಮೂಲಕ ಪ್ರಬಲ ಚಳುವಳಿಯನ್ನು ಬೆಳೆಸುತ್ತಿದೆ. ಸಾವಿರಾರು ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳನ್ನು ಉಳಿಸಲು ಪೆನ್ನು, ಹಾಳೆ ಹಿಡಿದು ಯೋಧರಂತೆ ಎದ್ದು ನಿಂತು ಬೀದಿ ಬೀದಿ ತಿರುಗಿ 'ಸರ್ಕಾರಿ ಶಾಲೆಗಳು ನಮ್ಮ ಸ್ವತ್ತು' ಎಂಬ ತಮ್ಮ ಎಲ್ಲಾ ಉದಾತ್ತ ಭಾವನೆಗಳೊಂದಿಗೆ ಸಹಿ ಸಂಗ್ರಹಿಸಲು ಜನರ ಬಳಿ ಬರುತ್ತಿದ್ದಾರೆ. ಅಂದು ಶಿಕ್ಷಣಕ್ಕಾಗಿ ಹೋರಾಡಿದ ಎಲ್ಲಾ ಮಹಾನ್ ವ್ಯಕ್ತಿತ್ವಗಳ ತ್ಯಾಗ ಬಲಿದಾನಗಳಿಂದ ಶಿಕ್ಷಣ ಪಡೆಯುತ್ತಿದ್ದೇವೆ. ಅದೇ ಶಿಕ್ಷಣ ಪಡೆಯಲು ಇಂದು ವಿಪತ್ತು ಎದುರಾದಾಗ ನಮ್ಮ ಎಲ್ಲಾ ಶಕ್ತಿಯಿಂದ, ಸಾರ್ವಜನಿಕ ಶಿಕ್ಷಣ ಉಳಿಸುವ ಐತಿಹಾಸಿಕ ಜವಾಬ್ದಾರಿ ನಮ್ಮ ಹೆಗಲೇರಿದೆ. ಈ ನಿಟ್ಟಿನಲ್ಲಿ ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಉಳಿಸಲು ರಾಜ್ಯದ ಎಲ್ಲಾ ಜನತೆ, ವಿದ್ಯಾರ್ಥಿಗಳು, ಶಿಕ್ಷಣ ಪ್ರೇಮಿಗಳು ಒಕ್ಕೊರಲಿನಿಂದ ಮುಂದಾಗಬೇಕೆಂಬುದು ಈ ಘಳಿಗೆಯ ಕರೆಯಾಗಿದೆ.




**ಬಳ್ಳಾರಿ ಜಿಲ್ಲೆಯ ಕೋಳೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ, ಸರ್ಕಾರಿ ಸ್ಥಳದಲ್ಲಿ ಸ್ವಂತ ಕಟ್ಟಡ ಹಾಗೂ ಶುದ್ಧ ಕುಡಿಯುವ ನೀರು, ಶೌಚಾಲಯ ನಿರ್ಮಾಣ ಮಾಡಬೇಕೆಂದು ಎಐಡಿಎಸ್‌ಓ ನೇತೃತ್ವದಲ್ಲಿ ಪೋಷಕರು ಹಾಗೂ ವಿದ್ಯಾರ್ಥಿಗಳ ಬೃಹತ್ ಪ್ರತಿಭಟನೆ!**

## ಏರ್ ಇಂಡಿಯಾ ವಿಮಾನ ಅಪಘಾತದ ಕುರಿತು ಪತ್ರಿಕಾ ಹೇಳಿಕೆ:

ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್ ಅವರು ಅಹಮದಾಬಾದ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಸಂಭವಿಸಿದ ವಿನಾಶಕಾರಿ ವಿಮಾನ ಅಪಘಾತದಿಂದ ನೂರಾರು ಮಂದಿ ಸಾವಿಗೀಡಾದ ಬಗ್ಗೆ ನೀಡಿದ ಹೇಳಿಕೆಯಲ್ಲಿ ಗಾಢ ವೇದನೆ ಮತ್ತು ವ್ಯಥೆಯನ್ನು ವ್ಯಕ್ತಪಡಿಸಿದ್ದಾರೆ.

ಭಾರತೀಯ ರೈಲ್ವೆ ಹಾಗೂ ಇತರ ಸೇವಾ ಕ್ಷೇತ್ರಗಳಂತೆಯೇ, ವಿಮಾನಯಾನ ಕ್ಷೇತ್ರವನ್ನು ಸಹ ಏಕಸ್ವಾಮ್ಯ ಸಂಸ್ಥೆಗಳಿಗೆ ಹಸ್ತಾಂತರಿಸುತ್ತಿರುವ ಖಾಸಗೀಕರಣದ ಈ ಯುಗದಲ್ಲಿ, ನಿರ್ವಹಣೆಯ ಕೊರತೆ ಮತ್ತು ಅಪ್ಪಟ ನಿರ್ಲಕ್ಷ್ಯದ ಕಾರಣದಿಂದಾಗಿ ವಿಮಾನಯಾನವೂ ಅಪಘಾತಗಳಿಗೆ ಈಡಾಗುವ ಸ್ಥಿತಿಯನ್ನು ತಲುಪಿದೆ ಎಂದು ಅವರು ತಿಳಿಸಿದ್ದಾರೆ.

ಈ ವಿನಾಶಕಾರಿ ಅಪಘಾತದ ಕಾರಣಗಳನ್ನು ಕಂಡುಹಿಡಿಯಲು ಉನ್ನತ ಮಟ್ಟದ ನ್ಯಾಯಾಂಗ ತನಿಖೆ ನಡೆಸಬೇಕು ಮತ್ತು ಇದಕ್ಕೆ ಟಾಟಾ ಸಮೂಹ ಮತ್ತು ಡಿಜಿಸಿಎ (ವಿಮಾನಯಾನ ನಿಯಂತ್ರಣ ಪ್ರಾಧಿಕಾರ) ಜವಾಬ್ದಾರರಾಗಿರಬೇಕು. ಅಪರಾಧಿಗಳೆಂದು ಗುರುತಿಸಲ್ಪಟ್ಟ ಎಲ್ಲರಿಗೂ ನಿದರ್ಶನೀಯ ಶಿಕ್ಷೆ ವಿಧಿಸಬೇಕು ಎಂದೂ ಅವರು ಒತ್ತಿಹೇಳಿದ್ದಾರೆ.

ಅನೇಕ ಜನರ ಸಾವಿಗೆ ಯಾವುದೇ ಪರಿಹಾರವು ಸಾಕಾಗುವುದಿಲ್ಲವಾದರೂ, ವಿಮಾನಯಾನ ಸಂಸ್ಥೆಗಳು ಮತ್ತು ಕೇಂದ್ರ ಸರ್ಕಾರವು ಸತ್ತವರ ಕುಟುಂಬಗಳಿಗೆ ಮತ್ತು ಗಾಯಾಳುಗಳಿಗೆ ಸೂಕ್ತ ಪರಿಹಾರ ನೀಡಬೇಕು ಎಂದೂ ಸಹ ಅವರು ಹೇಳಿದ್ದಾರೆ.

# ಭಾರತೀಯ ರೈಲ್ವೆ ಖಾಸಗೀಕರಣ ವಿರೋಧಿಸಿ!

ಲೋಕಸಭೆಯಲ್ಲಿ 2024ರ ಡಿಸೆಂಬರ್ 12 ರಂದು ರೈಲ್ವೆ ತಿದ್ದುಪಡಿ ಮಸೂದೆ–2024 ಅಂಗೀಕೃತವಾಯಿತು. ಲೋಕಸಭೆಯಲ್ಲಿ ಮಸೂದೆಯನ್ನು ಮಂಡಿಸುವಾಗ ಕೇಂದ್ರ ರೈಲ್ವೆ ಸಚಿವರು ಅದನ್ನು ನೀತಿ ನಿಯಮಗಳನ್ನು ಸರಳಗೊಳಿಸುವ ದೃಷ್ಟಿಯಿಂದ ತರಲಾಗುತ್ತಿದೆ ಎಂದು ಹೇಳಿದರು. ಈ ಮಸೂದೆಗೆ ಭಾರತದಾದ್ಯಂತ ರೈಲ್ವೆ ಕಾರ್ಯಾಚರಣೆಗಳನ್ನು ಆಧುನೀಕರಣಗೊಳಿಸುವ ಮತ್ತು ಸುವ್ಯವಸ್ಥೆಗೊಳಿಸುವ ಉದ್ದೇಶವಿದೆ ಎಂದು ಹೇಳಿದರು. ಕ್ಷೇತ್ರ ಅಧಿಕಾರಿಗಳನ್ನು ಸಶಕ್ತಗೊಳಿಸುವ, ಸಾಮರ್ಥ್ಯವನ್ನು ಹೆಚ್ಚಿಸುವ ಹಾಗೂ ಸಹಕಾರಿ ಸಂಯುಕ್ತ ವ್ಯವಸ್ಥೆಯನ್ನು ಬಲಪಡಿಸುವ ಸಾಮರ್ಥ್ಯ ಈ ಮಸೂದೆಗೆ ಇದೆ ಎಂದು ಅವರು ಒತ್ತಿ ಹೇಳಿದರು. ಅವರು ರಾಜ್ಯ ಸರ್ಕಾರಗಳ ಅಥವಾ ಪಾರ್ಲಿಮೆಂಟಿನ ಅಧಿಕಾರಗಳು ಕಡಿಮೆಯಾಗುವುದಿಲ್ಲ ಎಂದರು. ರೈಲ್ವೆ ಮಂಡಳಿ, ವಲಯ, ವಿಭಾಗಗಳ ಗುಣಲಕ್ಷಣಗಳು, ವ್ಯಾಪ್ತಿ ಮತ್ತು ಉತ್ಪಾದನಾ ಘಟಕಗಳು ಬದಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಇದೇನೋ ನಿಜ. ಆದರೆ ಮಸೂದೆಯನ್ನು ಆಳವಾಗಿ ಅಧ್ಯಯನ ಮಾಡಿದಾಗ ಅದು ರೈಲ್ವೆಯ ಸಂಪೂರ್ಣ ಖಾಸಗೀಕರಣದ ನೀಲನಕ್ಷೆ ಹೊರತು ಬೇರೇನೂ ಅಲ್ಲ ಎನ್ನುವುದನ್ನು ಬಹಿರಂಗಪಡಿಸುತ್ತದೆ.

### ಖಾಸಗೀಕರಣ ಪರ ವಾದಗಳು

ಭಾರತೀಯ ರೈಲ್ವೆಯನ್ನು 1951 ರಲ್ಲಿ ರಾಷ್ಟ್ರೀಕರಣ ಮಾಡಲಾಯಿತು. ನಂತರ 42 ಖಾಸಗಿ ರೈಲ್ವೆ ಕಂಪನಿಗಳನ್ನು ರೈಲ್ವೆ ಸಚಿವಾಲಯದ ಕೆಳಗೆ ಒಂದು ಘಟಕದಡಿ ವಿಲೀನಗೊಳಿಸಲಾಯಿತು. ವಿವಿಧ ರೈಲ್ವೆ ಕಂಪನಿಗಳನ್ನು ಒಂದು ಒಕ್ಕೂಟದಡಿಯಲ್ಲಿ, ಅಂದರೆ ಕೇಂದ್ರ ಸರ್ಕಾರದ ಅಡಿಯಲ್ಲಿ ತಂದರೆ ರೈಲ್ವೆ ಜಾಲವನ್ನು ಉತ್ತಮವಾಗಿ ಸಂಯೋಜಿಸುವುದನ್ನು ಖಚಿತಪಡಿಸಬಹುದು ಎಂದು ಆಗ ಹೇಳಲಾಯಿತು. ಈ ಕ್ರಮವು ಸಾಮರ್ಥ್ಯ ಹೆಚ್ಚಿಸುವುದನ್ನು, ಸರಿಯಾದ ಸಮಯಕ್ಕೆ ಮೂಲಸೌಕರ್ಯಗಳ ಸರಬರಾಜನ್ನು ಖಚಿತಪಡಿಸುವ ಮತ್ತು ಇಂಜಿನ್, ಬೋಗಿ ಮುಂತಾದವುಗಳ ಆಮದನ್ನು ಕಡಿಮೆ ಮಾಡುವ ಉದ್ದೇಶವನ್ನು ಹೊಂದಿದೆ ಎಂದು ಆಗ ವಾದ ಮಾಡಲಾಗಿತ್ತು. ಆದರೆ ಈಗ ಬಂಡವಾಳಶಾಹಿ ಜಾಗತೀಕರಣದ ನಿರ್ದೇಶನಗಳನ್ನು ಅನುಸರಿಸುತ್ತಾ ಆ ಪ್ರಕ್ರಿಯೆಯನ್ನು ವಿರುದ್ಧ ದಿಕ್ಕಿನಲ್ಲಿ ತಿರುಗಿಸಲಾಗಿದೆ.

ಈಗಾಗಲೇ ಮುಖ್ಯವಾಹಿನಿಯ ಮಾಧ್ಯಮಗಳು, ಈಗಿನ ರೈಲ್ವೆ ಅಸಮರ್ಥವಾಗಿದೆ, ಅಪಘಾತಕ್ಕೆಡೆ ಮಾಡಿಕೊಡುತ್ತದೆ ಮತ್ತು ಸರ್ಕಾರಕ್ಕೆ ಅದನ್ನು ನಡೆಸುವಷ್ಟು ಆದಾಯ ಬರುವುದಿಲ್ಲ ಎಂದು ಹೇಳುತ್ತಾ ಖಾಸಗೀಕರಣವನ್ನು ಸಮರ್ಥಿಸುವ ಲೇಖನಗಳನ್ನು ಬರೆಯಲು ಆರಂಭಿಸಿವೆ.

### ಖಾಸಗೀಕರಣದ ಇತಿಹಾಸ

ವಾಸ್ತವ ಸಂಗತಿ ಎಂದರೆ ಬಹಳ ಹಿಂದೆಯೇ ಖಾಸಗೀಕರಣದ ಪ್ರಸ್ತಾವವನ್ನು ಹರಿಬಿಡಲಾಗಿದೆ. 1991 ರಲ್ಲಿ ಅಂದಿನ ಕಾಂಗ್ರೆಸ್ ಪಕ್ಷದ ಹಣಕಾಸು ಸಚಿವರು ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳಲ್ಲಿ ಮತ್ತು ಸಾರ್ವಜನಿಕ ಸೇವಾ ಸಂಸ್ಥೆಗಳಲ್ಲಿ ಹೂಡಿಕೆಯನ್ನು ಹಿಂತೆಗೆದುಕೊಳ್ಳುವ ಮೂಲಕ ಭಾರತೀಯ ಆರ್ಥಿಕತೆಯ ಉದಾರೀಕರಣದ ನೀತಿಯನ್ನು ಜಾರಿಗೆ ತಂದರು. ಸರ್ಕಾರವು ರೈಲ್ವೆ ಸೇವೆಯನ್ನು ಉತ್ತಮಪಡಿಸುವ ನೆಪವೊಡ್ಡಿ ಖಾಸಗೀಕರಣಕ್ಕೆ ಪೂರಕವಾದ ಶಿಫಾರಸ್ಸು ಮಾಡಲೆಂದು ಹಲವಾರು ಸಮಿತಿಗಳನ್ನು ಮತ್ತು ಆಯೋಗಗಳನ್ನು ರಚಿಸಿತು. 1994 ರಲ್ಲಿ ರಚಿಸಿದ ಪ್ರಕಾಶ್ ಟಂಡನ್ ಸಮಿತಿಯ ಶಿಫಾರಸ್ಸುಗಳ ಆಧಾರದ ಮೇಲೆ ರೈಲ್ವೆಯ ಸ್ವಂತ ಆಹಾರ ವ್ಯವಸ್ಥೆಯನ್ನು ಸರ್ಕಾರಿ ಸ್ವಾಮ್ಯ ಕಂಪನಿಯಾದ ಐಆರ್‌ಸಿಟಿಸಿಗೆ ವರ್ಗಾಯಿಸಲಾಯಿತು. ಅದಕ್ಕೆ ಪ್ರವಾಸೋದ್ಯಮ ಸೇವೆಗಳನ್ನು ವಹಿಸಲಾಯಿತು.

ನಂತರ ಸರಕು ಸಾಗಾಣಿಕೆ ಸಂಸ್ಥೆಯನ್ನು ರಚಿಸಲಾಯಿತು. ಅಲ್ಲಿಂದಾಚೆಗೆ ರೈಲ್ವೆ ಆಡಳಿತ ಕಚೇರಿಗಳಲ್ಲಿ, ನಿರ್ವಹಣಾ ವಿಭಾಗಗಳಲ್ಲಿ, ರಿಪೇರಿ ಮತ್ತು ಸ್ವಚ್ಛತಾ ಸೇವೆಗಳಲ್ಲಿ ಉದ್ಯೋಗಗಳನ್ನು ಖಾಸಗೀಕರಣಗೊಳಿಸುವ ಪ್ರಕ್ರಿಯೆ ಆರಂಭವಾಯಿತು. ಖಾಯಂ ಉದ್ಯೋಗಗಳ ರದ್ದತಿ ಮತ್ತು ಗುತ್ತಿಗೆ ಕಾರ್ಮಿಕರ ನೇಮಕಾತಿ ಶುರುವಾಯಿತು. ಹಲವಾರು ರೈಲ್ವೆ ಶಾಲೆ, ಆಸ್ಪತ್ರೆ, ಮುದ್ರಣಾಲಯ ಮುಂತಾದವುಗಳನ್ನು ಸಂಪೂರ್ಣವಾಗಿ ಮುಚ್ಚಲಾಯಿತು ಮತ್ತು ಖಾಸಗಿಯವರಿಗೆ ಹೊರಗುತ್ತಿಗೆ ನೀಡಲಾಯಿತು. ಏಳು ಉತ್ಪಾದನಾ ಘಟಕಗಳನ್ನು ಕಾರ್ಪೊರೇಟ್ ಕಂಪನಿಗಳಿಗೆ ನೀಡಲಾಯಿತು. ಇಂದಿನ ಬಿಜೆಪಿ ಆಳ್ವಿಕೆಯಲ್ಲಿ 2015 ರಲ್ಲಿ ವಿವೇಕ್ ದೆಬ್ರಾಯ್ ಸಮಿತಿಯನ್ನು ರಚಿಸಲಾಯಿತು. ಅದು ಭಯಾನಕ ಬದಲಾವಣೆಗಳನ್ನು ಶಿಫಾರಸ್ಸು ಮಾಡಿತು: ಖಾಸಗಿಯವರು ರೈಲುಗಳನ್ನು ಓಡಿಸಲು ಪ್ರೋತ್ಸಾಹ ಕೊಡುವ ಮೂಲಕ ಇಲ್ಲಿಯವರೆಗೂ ಪ್ರತ್ಯೇಕವಾಗಿ ಮಂಡಿಸಲಾಗುತ್ತಿದ್ದ ರೈಲ್ವೆ ಬಜೆಟ್ಟನ್ನು ಸಂಪೂರ್ಣವಾಗಿ ತೆಗೆದುಹಾಕುವುದು ಮತ್ತು ರೈಲ್ವೆ ಕಾರ್ಯಾಚರಣೆಯನ್ನು ವಿಕೇಂದ್ರೀಕರಣಗೊಳಿಸುವುದು ಅದರ ಶಿಫಾರಸ್ಸುಗಳು. ಇನ್ನು ಮುಂದೆ ಆಸ್ಪತ್ರೆ ಹಾಗೂ ಶಾಲೆಗಳ ನಡೆಸುವಿಕೆ, ಆಹಾರ ವ್ಯವಸ್ಥೆ, ಬೋಗಿ ಮತ್ತು ಅದರ ಬಿಡಿ ಭಾಗಗಳು, ಪೊಲೀಸ್ ವ್ಯವಸ್ಥೆ ಮುಂತಾದವುಗಳಿಂದ ರೈಲ್ವೇ ಆಡಳಿತ ಮಂಡಳಿ ದೂರವಿರುವುದಾಗಿ ಹೇಳಿದ್ದಾರೆ. 17 ರೈಲ್ವೆ ವಲಯಗಳಲ್ಲಿ, ಪ್ರತಿಯೊಂದರಲ್ಲೂ ನಾಲ್ಕು ಸಾವಿರ ಕಾರ್ಮಿಕರಿದ್ದ ಅಂಗಡಿಗಳನ್ನು ಮುಚ್ಚಲಾಗುವುದೆಂದು ನಿರ್ಧರಿಸಲಾಗಿದೆ. ದೊಡ್ಡ ವರ್ಕ್‌ಶಾಪ್‌ಗಳಲ್ಲಿ ಹೆಚ್ಚಿನವುಗಳನ್ನು ಖಾಸಗಿಯವರ ಮಡಿಲಿಗೆ ಹಾಕಲಾಗಿದೆ; ಇಲ್ಲವೇ ಮುಚ್ಚಲಾಗಿದೆ.

### ಇಂದಿನ ಪರಿಸ್ಥಿತಿ

ಈಗ ಬಿಜೆಪಿ ಸರ್ಕಾರವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಕೆಲವು ಮಾರ್ಗಗಳಲ್ಲಿ ರೈಲು ನಡೆಸಲು ಮತ್ತು ಆಹಾರ ಹಾಗೂ ಸ್ವಚ್ಛತೆಯ ಸೇವೆಗಳನ್ನು ಒದಗಿಸಲು ಖಾಸಗಿ ಕಂಪನಿಗಳಿಗೆ ಅವಕಾಶ ನೀಡಿದೆ. ಸಾರ್ವಜನಿಕ–ಖಾಸಗಿ ಸಹಭಾಗಿತ್ವದ ಮೂಲಕ ಕೆಲವು ರೈಲು ನಿಲ್ದಾಣಗಳನ್ನು ಸುಂದರಗೊಳಿಸಲಾಗಿದೆ. ಬೋಗಿ ಸ್ವಚ್ಛತೆಯಂತಹ ಸೇವೆಗಳನ್ನು ಮತ್ತು ಹಳಿ ನಿರ್ವಹಣೆಯಂತಹ ಬಹಳ ಪ್ರಮುಖ ಸೇವೆಯನ್ನು ಖಾಸಗಿ ಸಂಸ್ಥೆಗಳಿಗೆ ಹೊರಗುತ್ತಿಗೆ ನೀಡಲಾಗುತ್ತಿದೆ. ಸರಕು ಸಾಗಾಣಿಕೆಯನ್ನು ಸ್ವಲ್ಪಮಟ್ಟಿಗೆ ಖಾಸಗಿ ಕಂಪನಿಗಳಿಗೆ ತೆರೆದಿಡಲಾಗಿದೆ. ಸರ್ಕಾರಿ ಸ್ವಾಮ್ಯದ, ರೈಲ್ವೆ ಉಪಕರಣಗಳನ್ನು ತಯಾರಿಸುವ ರೈಲ್ವೆ ಉತ್ಪಾದನಾ ಘಟಕಗಳನ್ನು ಖಾಸಗೀಕರಣಗೊಳಿಸಲು ಪರಿಗಣಿಸಲಾಗುತ್ತಿದೆ.

ನೀತಿ ಆಯೋಗದ ಪ್ರಕಾರ, 2019 ರಲ್ಲಿ ರೈಲ್ವೆ ಸಚಿವಾಲಯವು ಪ್ರಯಾಣಿಕರ ರೈಲುಗಳನ್ನು ನಡೆಸಲು ಖಾಸಗಿಯವರನ್ನು ಒಳ ತರಲು ಮತ್ತು ಮೊದಲ ಹಂತದಲ್ಲಿ ಸುಮಾರು 150 ರೈಲುಗಳನ್ನು ತೆಗೆದುಕೊಳ್ಳಲು ನಿರ್ಧರಿಸಿದೆ. ಸರ್ಕಾರವು 50 ರೈಲು ನಿಲ್ದಾಣಗಳನ್ನು ಖಾಸಗಿಯವರಿಗೆ ವಹಿಸಲು ನೀಲನಕ್ಷೆ ತಯಾರಿಸಲು ಕಾರ್ಯಪಡೆಯನ್ನು ರಚಿಸುವ ಪ್ರಕ್ರಿಯೆಯಲ್ಲಿದೆ. ರಾಜಧಾನಿ, ಶತಾಬ್ದಿ ಸೂಪರ್ ಫಾಸ್ಟ್ ರೈಲುಗಳು ಚಲಿಸುವಂತಹ ಅತ್ಯಂತ ಲಾಭದಾಯಕ ರೈಲು ಮಾರ್ಗಗಳನ್ನು ಖಾಸಗಿಯವರಿಗೆ ಕೊಡುವ ಹುನ್ನಾರವಿದೆ. ಖಾಸಗಿ ಕಂಪನಿಯವರಿಗೆ ತಮಗಿಷ್ಟ ಬಂದ ಕಡೆಯಿಂದ ಎಂಜಿನ್ ಮತ್ತು ಇತರ ಭಾಗಗಳನ್ನು ಖರೀದಿಸುವ ಸ್ವಾತಂತ್ರ್ಯವಿದೆ. ಎಂಜಿನ್ ಪೈಲೆಟ್ ಹಾಗೂ ಗಾರ್ಡ್‌ಗಳನ್ನು ಹೊರತುಪಡಿಸಿ ಉಳಿದವರೆಲ್ಲರೂ ಖಾಸಗಿ ಉದ್ಯೋಗಿಗಳಾಗುತ್ತಾರೆ.

### ನಷ್ಟವೆನ್ನುವ ನೆಪ

ರೈಲ್ವೆಗೆ ನಷ್ಟವಾಗುತ್ತಿದೆ ಮತ್ತು ಕಾರ್ಯನಿರ್ವಹಣಾ ವೆಚ್ಚವು ಅಧಿಕವಾಗುತ್ತಿದೆ ಎನ್ನುವುದು ಖಾಸಗೀಕರಣ ಬೆಂಬಲಿಸಲು ಸರ್ಕಾರ ಕೊಡುತ್ತಿರುವ ಕುಂಟು ನೆಪ. ಇದಕ್ಕಿಂತ ಮಹಾ ಸುಳ್ಳು ಇನ್ನೊಂದಿಲ್ಲ. ಭಾರತೀಯ ರೈಲ್ವೆ 2024 ರ ಹಣಕಾಸು ವರ್ಷದಲ್ಲಿ 2,56,093 ಕೋಟಿ ರೂ.ಗಳನ್ನು ಗಳಿಸಿದೆ ಅದರಲ್ಲಿ 3,160 ಕೋಟಿ ರೂ. ನಿವ್ವಳ ಒಟ್ಟು ಆದಾಯ. ಭಾರತೀಯ ರೈಲ್ವೆಯು ಗಳಿಸುವ ಪ್ರತಿ 100 ರೂಪಾಯಿಯಲ್ಲಿ 98 ರೂ.ಗಳನ್ನು ಕಾರ್ಯನಿರ್ವಹಣೆಗೆ ಖರ್ಚು ಮಾಡುತ್ತದೆ ಎಂದು ಹೇಳುತ್ತದೆ. ಆದರೆ ವಾಸ್ತವ ಅಂಶವೆಂದರೆ, ಕಾರ್ಯನಿರ್ವಹಣಾ ವೆಚ್ಚ ಹೆಚ್ಚಲು ಕಡು ಭ್ರಷ್ಟಾಚಾರ ಮತ್ತು ಕಳ್ಳತನಗಳೇ ಕಾರಣ. ಇಷ್ಟಾಗಿಯೂ ರೈಲ್ವೆಯು ನಷ್ಟ ಅನುಭವಿಸುತ್ತಿಲ್ಲ.

### ಖಾಸಗೀಕರಣ ಮತ್ತು ಅದರ ಪರಿಣಾಮ

ಇದುವರೆಗೂ ರೈಲ್ವೆಯನ್ನು ಸಾರ್ವಜನಿಕ ಸೇವೆ ಎಂದು ನೋಡಲಾಗುತ್ತಿತ್ತು. ಆದರೆ ಈಗ ಅದನ್ನು ಲಾಭದಾಯಕ ಸೇವಾ ವಲಯವೆಂದು ಪರಿಗಣಿಸಲಾಗುತ್ತಿದೆ. ಪ್ರಯಾಣ ದರ ಮತ್ತು ಸರಕು ಸಾಗಾಣಿಕೆ ದರಗಳನ್ನು ನಿಯತವಾಗಿ ಹೆಚ್ಚಿಸಲಾಗುತ್ತಿದೆ; ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಕೇಂದ್ರ ಬಜೆಟ್ ಮಂಡಿಸುವ ಮುನ್ನವೇ ಆಡಳಿತಾತ್ಮಕ ವಿಧಾನದಿಂದ ದರ ಹೆಚ್ಚಿಸಲಾಗುತ್ತದೆ. ಖಾಸಗಿ ಹೂಡಿಕೆದಾರರು ಬಂದರಂತೂ ನಿರಂತರ ದರ ಏರಿಕೆಯಾಗುವುದು ಖಚಿತ.

ಈಗಾಗಲೇ ಹೆಚ್ಚಿನ ಪ್ರಯಾಣಿಕರಿಗೆ ರೈಲ್ವೆ ದರಗಳನ್ನು ಭರಿಸಲಾಗುತ್ತಿಲ್ಲ. ಹಿರಿಯ ನಾಗರಿಕರಿಗೆ ಕೊಡುತ್ತಿದ್ದ ರಿಯಾಯಿತಿಯಂತಹ ಹಲವು ಬಗೆಯ ರಿಯಾಯಿತಿಗಳನ್ನು ತೆಗೆದುಹಾಕಲಾಗಿದೆ. ರೀಫಂಡ್ ದರ ಮತ್ತು ಪ್ಲಾಟ್‌ಫಾರ್ಮ್ ಟಿಕೆಟ್ ದರ ದುಬಾರಿಯಾಗಿದೆ. ಪ್ರಯಾಣಿಕರ ಸಾಮಾನ್ಯ ರೈಲುಗಳಲ್ಲಿ ಯಾವುದೇ ಮೂಲಭೂತ ಸೌಕರ್ಯಗಳನ್ನು ಉತ್ತಮಪಡಿಸದೆ, ಸಮಯ ಮತ್ತು ನಿಲುಗಡೆಗಳಲ್ಲಿ ವ್ಯತ್ಯಾಸಗಳಿಲ್ಲದೆ, ಹೆಸರನ್ನು ಮಾತ್ರ ಎಕ್ಸ್ ಪ್ರೆಸ್ ಎಂದು ಬದಲಾಯಿಸಿ ಎಕ್ಸ್ ಪ್ರೆಸ್ ದರವನ್ನು ವಿಧಿಸಲಾಗಿದೆ. ಸಾಮಾನ್ಯ ಬೋಗಿಗಳನ್ನು ಕಡಿಮೆ ಮಾಡಿ ರಿಸರ್ವ್ ಬೋಗಿಗಳನ್ನು ಹೆಚ್ಚಿಸಲಾಗಿದೆ. ಜನಸಾಮಾನ್ಯರು ವಂದೇ ಭಾರತ್ ಸೂಪರ್ ಫಾಸ್ಟ್ ನಂತಹ ವಿಶೇಷ ರೈಲುಗಳಲ್ಲಿ ಪ್ರಯಾಣಿಸುವ ಕನಸು ಕಾಣಲೂ ಸಾಧ್ಯವಿಲ್ಲ. ಇದರ ದರಗಳು ಅಷ್ಟು ದುಬಾರಿ! ಸದ್ಯದಲ್ಲೇ ಬುಲೆಟ್ ರೈಲುಗಳು ಬರಲಿವೆ. ರೈಲ್ವೆ ಸಂಪೂರ್ಣವಾಗಿ ಖಾಸಗೀಕರಣವಾದರೆ ವಿಪರೀತ ದುಬಾರಿಯಾಗುವ ರೈಲ್ವೆ ದರಗಳಿಂದಾಗಿ ದೊಡ್ಡ ಸಂಖ್ಯೆಯ ಜನರು ರೈಲ್ವೆ ಸೇವೆಗಳಿಂದ ವಂಚಿತರಾಗುತ್ತಾರೆ. ಸಾಕಷ್ಟು ಪ್ರಯಾಣಿಕರು ಇರದಿದ್ದರೆ ರೈಲುಗಳನ್ನು ರದ್ದುಗೊಳಿಸಬಹುದು.

ಸರ್ಕಾರವು ರೈಲ್ವೆಗೆ ಸೇರಿದ (ಭಾರತದ ನಗರಗಳ ಹೃದಯ ಭಾಗದಲ್ಲಿರುವ) ಫ್ಲಾಟ್‌ಫಾರ್ಮ್ ಮುಂದಿರುವ ಖಾಲಿ ಜಾಗ, ಶಾಲೆ, ಆಸ್ಪತ್ರೆ ಸಿಬ್ಬಂದಿಗಳ ಕ್ವಾರ್ಟರ್ಸ್ ಮತ್ತು ಅಧಿಕಾರಿಗಳ ಬಂಗಲೆಗಳನ್ನು ಖಾಸಗಿ ಮನೆತನಗಳಿಗೆ ಕೊಡಲು ನಿರ್ಧರಿಸಿದೆ. ಏಕಸ್ವಾಮ್ಯ ಮನೆತನಗಳಿಗೆ ಎಲ್ಲಾ ಭೂಮಿಯನ್ನು ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಹಾಕುವ ಉದ್ದೇಶವಿದೆ.

ಇತ್ತೀಚೆಗೆ ಅಪಘಾತಗಳು ಹೆಚ್ಚಾಗಲು ಕಾರಣವಾಗಿರುವ ತುಂಬಾ ರಾಜಿ ಮಾಡಿಕೊಂಡ ಕ್ಷೇತ್ರವೆಂದರೆ ಸುರಕ್ಷತೆ. ಸುರಕ್ಷತಾ ಕ್ರಮಗಳನ್ನು, ಹಳಿ ನಿರ್ವಹಣೆಯನ್ನು ಉತ್ತಮಪಡಿಸಲು ಯಾವ ಪರಿಣಾಮಕಾರಿ ಕ್ರಮಗಳನ್ನೂ ತೆಗೆದುಕೊಂಡಿಲ್ಲ. ಏಕೆಂದರೆ ಅವುಗಳನ್ನು ಖಾಸಗಿಯವರು ನಿರ್ವಹಿಸುತ್ತಾರೆ. ಕಳೆದ ಐದು ವರ್ಷಗಳಲ್ಲಿ 351 ಜನರು ಸತ್ತಿದ್ದಾರೆ ಮತ್ತು 970 ಜನರು ಗಾಯಗೊಂಡಿದ್ದಾರೆ. ಇದು 17 ರೈಲ್ವೆ ವಲಯಗಳಿಂದ ಬಂದ ಭಾರತೀಯ ರೈಲ್ವೆಯು ನೀಡಿದ ಮಾಹಿತಿ ಪ್ರಕಾರ.

ರೈಲ್ವೆಯ ಖಾಸಗೀಕರಣ ಮತ್ತು ಹೊರಗುತ್ತಿಗೆಯಿಂದಾಗಿ 22 ಲಕ್ಷವಿದ್ದ ಉದ್ಯೋಗಿಗಳ ಸಂಖ್ಯೆ 12 ಲಕ್ಷಕ್ಕೆ ಇಳಿದಿದೆ. ಈಗ 30 ವರ್ಷಗಳ ಸೇವೆ ಮಾಡಿದ ಅಥವಾ 55 ವರ್ಷ ದಾಟಿದ 3 ಲಕ್ಷ ರೈಲ್ವೆ ಉದ್ಯೋಗಿಗಳನ್ನು ಕೆಲಸದಿಂದ ತೆಗೆಯಲು ಆರಂಭಿಸಿದ್ದಾರೆ. ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದ ಮಾಹಿತಿಯಂತೆ, 14.75 ಲಕ್ಷ ಗ್ರೂಪ್ 'ಸಿ' ಹುದ್ದೆಗಳಲ್ಲಿ 3.1 ಲಕ್ಷ ಮತ್ತು 18,881 ಗೆಜೆಟೆಡ್ ಅಧಿಕಾರಿಗಳ ಹುದ್ದೆಗಳಲ್ಲಿ 3,018 ಹುದ್ದೆಗಳು ಖಾಲಿ ಬಿದ್ದಿವೆ. ಆದರೆ ಸರ್ಕಾರಗಳು ಖಾಸಗೀಕರಣದ ದೃಷ್ಟಿಯಿಂದ ಬೇಕೆಂದೇ ಇವುಗಳನ್ನು ತುಂಬುತ್ತಿಲ್ಲ. ಸ್ವಾತಂತ್ರ್ಯ ಬಂದ ಮೇಲೆ, ದೇಶವು ಅತಿ ಹೆಚ್ಚು ಪ್ರಮಾಣದಲ್ಲಿ ನಿರುದ್ಯೋಗವನ್ನು ಎದುರಿಸುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ರೈಲ್ವೆ ಖಾಸಗೀಕರಣವು ಉರಿಯುವ ಗಾಯಕ್ಕೆ ಉಪ್ಪು ಸವರಿದಂತೆ.

### ವಾಸ್ತವವನ್ನು ಮುಚ್ಚಿಡಲಾಗಿದೆ

ರೈಲ್ವೆ ತಿದ್ದುಪಡಿ ಮಸೂದೆಯು ಸಂಪೂರ್ಣ ಖಾಸಗೀಕರಣಕ್ಕೆ ರಹದಾರಿಯಲ್ಲ ಎಂದು ಹೇಳುತ್ತಾ ಸರ್ಕಾರವು ಜನರನ್ನು ಮರಳು ಮಾಡುತ್ತಿದೆ. ಅದು ಖಾಸಗೀಕರಣದ ದುಷ್ಪರಿಣಾಮಗಳನ್ನು ಬಚ್ಚಿಡುತ್ತಿದೆ. ಅದೇನೇ ಇರಲಿ, ನಮ್ಮ ದೇಶದ ಹಾಗೂ ಇತರ ದೇಶಗಳ ಜೀವನಾನುಭವವು ಇಂತಹ ಹೇಳಿಕೆಗಳು ಸಂಪೂರ್ಣವಾಗಿ ಸುಳ್ಳು ಎನ್ನುವುದನ್ನು ತೋರಿಸಿಕೊಟ್ಟಿವೆ. ಖಾಸಗಿ ಹೂಡಿಕೆದಾರರ ಕೈಗೆ ಹೋದ ಮೇಲೆ ಹಲವಾರು ರೈಲ್ವೆ ಸಂಬಂಧಿತ ಸೇವೆಗಳ ಗುಣಮಟ್ಟವು ಕುಸಿದಿದೆ. ಸರ್ಕಾರವು ಭಾರತೀಯ ರೈಲ್ವೆಯನ್ನು ಆಧುನೀಕರಣಗೊಳಿಸಲು ಬೇಕಾದಷ್ಟು ಹಣವಿಲ್ಲ. ಆದ್ದರಿಂದ, ಹೂಡಿಕೆಗೆ ಆಕರ್ಷಕ ಕೊಡುಗೆಗಳಿಂದ ಭಾರತೀಯ ಮತ್ತು ವಿದೇಶಿ ಖಾಸಗಿ ಬಂಡವಾಳಗಳನ್ನು ಆಕರ್ಷಿಸಬೇಕಾಗಿದೆ ಎಂದು ಹೇಳುತ್ತಿದೆ. ಆದರೆ ಹಣಕಾಸು ಸಚಿವಾಲಯಕ್ಕೆ ಸಾರ್ವಜನಿಕ ಉದ್ದಿಮೆಯ ಬ್ಯಾಂಕುಗಳಿಗೆ ಮರು ಬಂಡವಾಳ ಹೂಡಲು, ದೊಡ್ಡ ಕಾರ್ಪೊರೇಟ್ ಕಂಪನಿಗಳ ಮತ್ತು ಶ್ರೀಮಂತರ ತೆರಿಗೆ ಬಾಕಿಯನ್ನು ಮನ್ನಾ ಮಾಡಲು ಅಥವಾ ಬಂಡವಾಳಶಾಹಿ ವರ್ಗಕ್ಕೆ ಕಳೆದ ಒಂದು ದಶಕದಲ್ಲಿ 16 ಲಕ್ಷ ಕೋಟಿ ಸಾಲ ಮನ್ನಾ ಮಾಡಲು ಯಾವ ಸಮಸ್ಯೆಯೂ ಇಲ್ಲ.

ಇಲ್ಲಿ ಬ್ರಿಟಿಷ್ ರೈಲ್ವೆ ಖಾಸಗೀಕರಣದ ಅನುಭವ ಬಹಳ ಮುಖ್ಯ. ಬ್ರಿಟಿಷ್ ರೈಲ್ವೆಯನ್ನು ಖಾಸಗೀಕರಣಗೊಳಿಸಿದ ಮೇಲೆ ಖಾಸಗಿ ರೈಲು ನಡೆಸುವವರು ಸರ್ಕಾರದ ಸಬ್ಸಿಡಿಗಳನ್ನೆಲ್ಲಾ ನುಂಗಿ ನೀರು ಕುಡಿದು ಅಗಾಧ ಲಾಭವನ್ನು ಪಡೆದುಕೊಂಡರೆ, ಪ್ರಯಾಣಿಕರು ಅತಿ ಹೆಚ್ಚು ಪ್ರಯಾಣ ದರವನ್ನು ತೆರಬೇಕಾಯಿತು. ಬ್ರಿಟನ್ನಿನಲ್ಲಿ ನಡೆದ ಸಮೀಕ್ಷೆಯ ಪ್ರಕಾರ, ಶೇ.75 ರಷ್ಟು ಜನರಿಗೆ ರೈಲ್ವೆಯನ್ನು ಮತ್ತೆ ರಾಷ್ಟ್ರೀಕರಣ ಮಾಡಬೇಕೆಂಬ ಅಭಿಪ್ರಾಯವಿದೆ. ಅರ್ಜೆಂಟೈನಾ 2015 ರಲ್ಲಿ ರೈಲ್ವೆ ಖಾಸಗೀಕರಣವನ್ನು ಹಿಂತೆಗೆದುಕೊಂಡು ಹೊಸದಾಗಿ ಸಾರ್ವಜನಿಕ ರೈಲ್ವೆ ಕಂಪನಿಯನ್ನು ಸೃಷ್ಟಿಸಿತು.

4ನೇ ಪುಟಕ್ಕೆ...

## ಸಂಡೂರು ಅಕ್ರಮ ಗಣಿಗಾರಿಕೆ

# ಕೆಂಪು ನಾಡಿನ ಕರಾಳ ಕಥನ!

ಬಳ್ಳಾರಿ ಜಿಲ್ಲೆಯಲ್ಲಿ ಪ್ರಮುಖವಾಗಿ ಸಂಡೂರು ಮತ್ತು ಹೊಸಪೇಟೆ ತಾಲೂಕುಗಳಲ್ಲಿ ಕಬ್ಬಿಣ ಅದಿರಿನ ನಿಕ್ಷೇಪಗಳು ಇವೆ. ಸಂಡೂರು ತಾಲ್ಲೂಕಿನಲ್ಲಿ ಮಾತ್ರ ಮ್ಯಾಂಗನೀಸ್ ಅದಿರಿನ ನಿಕ್ಷೇಪಗಳಿವೆ. ಇಲ್ಲಿ ಲಭ್ಯವಿರುವ ಕಬ್ಬಿಣದ ಅದಿರು ಅತ್ಯಂತ ಉತ್ಕೃಷ್ಟ ಮಟ್ಟದ್ದಾಗಿದೆ. ದೇಶದ ಶೇಕಡ 25% ರಷ್ಟು ಅಂದರೆ ಅಂದಾಜು 1,148 ಮಿಲಿಯನ್ ಟನ್‌ಗಳಷ್ಟು ಕಬ್ಬಿಣದ ನಿಕ್ಷೇಪಗಳಿವೆ. ಅಂದಾಜು 7.83 ಮಿಲಿಯನ್ ಟನ್‌ಗಳಷ್ಟು ಮ್ಯಾಂಗನೀಸ್ ಅದಿರಿನ ನಿಕ್ಷೇಪಗಳಿವೆ. ಆದರೆ 'ದೀಪದ ಕೆಳಗೆ ಕತ್ತಲು' ಅನ್ನುವ ರೀತಿಯಲ್ಲಿ ತನ್ನೊಡಲ ಬಗೆದು ಪರರಿಗೆ ಉಣಬಡಿಸುತ್ತಿರುವ ಸಂಡೂರು ಹಾಗೂ ಇನ್ನಿತರ ಪ್ರದೇಶಗಳ ಜನತೆ ಹಾಗೂ ಪ್ರಕೃತಿ ತತ್ತರಿಸಿ ಹೋಗಿವೆ ಹಾಗೂ ಇವುಗಳ ಬಗ್ಗೆ ಯಾವುದೇ ಪಕ್ಷದ ಸರ್ಕಾರವಿರಲಿ ತೋರುತ್ತಿರುವ ಉದ್ದೇಶಪೂರ್ವಕವಾದ ನಿಷ್ಕಾಳಜಿಗೆ ಆ ಭಾಗದ ಇಂದಿನ ಹಾಗೂ ಮುಂದಿನ ಪೀಳಿಗೆ ಭಾರೀ ಬೆಲೆ ತೆರುತ್ತಿದೆ. ಈ ಕರಾಳ ಕಥನದ ಸಂಕ್ಷಿಪ್ತ ರೂಪ ಈ ಲೇಖನ.

ಬಳ್ಳಾರಿ ಜಿಲ್ಲೆಯಲ್ಲಿ ಕಬ್ಬಿಣ ಅದಿರಿನ ಮತ್ತು ಮ್ಯಾಂಗನೀಸ್ ಅದಿರಿನ ಗಣಿಗಾರಿಕೆ ಸ್ವಾತಂತ್ರ್ಯ ಪೂರ್ವದಿಂದಲೂ ಇವೆ. ಸ್ವಾತಂತ್ರ್ಯದ ನಂತರ 1993 ರವರೆಗೆ ಕಬ್ಬಿಣ ಅದಿರಿನ ಗಣಿಗಾರಿಕೆ ಬಹುತೇಕವಾಗಿ ಶ್ರಮಾಧಾರಿತವಾಗಿತ್ತು. ಭಾರೀ ಗಾತ್ರದ ಯಂತ್ರಗಳಿರಲಿಲ್ಲ. ಗಣಿ ಮಾಲೀಕರು ನೇರವಾಗಿ ಅದಿರನ್ನು ಬೇರೆ ದೇಶಕ್ಕೆ ರಫ್ತು ಮಾಡುವಂತಿರಲಿಲ್ಲ. ಗಣಿ ಉತ್ಪಾದನೆ ಮತ್ತು ರಫ್ತು ಮಾಡುವ ಎಲ್ಲಾ ವಹಿವಾಟು ಸಂಪೂರ್ಣವಾಗಿ ಮೈನ್ಸ್ ಮತ್ತು ಮಿನರಲ್ಸ್ ಟ್ರೇಡಿಂಗ್ ಕಾರ್ಪೋರೇಷನ್ (MMTC) ಸರ್ಕಾರಿ ಸಂಸ್ಥೆ ಮುಖಾಂತರವೇ ನಡೆಯುತ್ತಿತು. ಆದರೆ ದೇಶದಲ್ಲಿ ಖಾಸಗೀಕರಣ, ಉದಾರೀಕರಣ ಹಾಗೂ ಜಾಗತೀಕರಣ ನೀತಿಗಳು ಬಂದ ನಂತರ 1993ರಲ್ಲಿ ರಾಷ್ಟ್ರೀಯ ಮಿನರಲ್ ಕಾಯ್ದೆ 1993ನ್ನು ಜಾರಿಗೊಳಿಸಿ ಕ್ರಮೇಣವಾಗಿ, ಅದಿರಿನ ವಹಿವಾಟಿನಲ್ಲಿ MMTC ಪಾತ್ರವನ್ನು ಕನಿಷ್ಠಗೊಳಿಸಿ ಖಾಸಗಿ ಮಾಲೀಕರಿಗೆ ಸಂಪೂರ್ಣ ಹಕ್ಕನ್ನು ನೀಡಲಾಯಿತು. ನಂತರ 2000 ಇಸವಿಯಲ್ಲಿ ಕರ್ನಾಟಕ ಸರ್ಕಾರ ಕರ್ನಾಟಕ ರಾಜ್ಯದ ಗಣಿಗಾರಿಕೆ ನೀತಿಯನ್ನು ಜಾರಿಗೊಳಿಸಿ, ಖಾಸಗಿ ಗಣಿ ಕಂಪನಿಗಳಿಗೆ ಹೊರ ದೇಶಗಳಿಗೆ ರಫ್ತು ಮಾಡಲು ಪೂರ್ಣ ಅಧಿಕಾರವನ್ನು ನೀಡಲಾಯಿತು.

### ಬಳ್ಳಾರಿ ಜಿಲ್ಲೆಯ 'ಊಟಿ' ಸಂಡೂರಿನ ಲೂಟಿ!

'ಬಿಸಿಲು ಕಾಲ ಮತ್ತು ಅರೆಬಿಸಿಲು ಕಾಲ,' ಈ ರೀತಿ ಇಲ್ಲಿರುವುದು ಕೇವಲ ಎರಡೇ ಕಾಲ ಎಂದು ಖ್ಯಾತಿ ಪಡೆದ ಬಿಸಿಲ ನಾಡು ಬಳ್ಳಾರಿಗೆ ಅಪವಾದ ಎಂಬಂತೆ ಸಂಡೂರು ಇತ್ತು. ಹಸಿರು ಹೊದ್ದು ನಿಂತ ಗುಡ್ಡ ಬೆಟ್ಟಗಳು, ಅಪರೂಪದ ವೃಕ್ಷ ಸಂಕುಲಗಳು, ವನ್ಯ ಜೀವಿಗಳು, ಗಿರಿ ಶ್ರೇಣಿಗಳ ಮಧ್ಯದಿಂದ ಮೂಡುವ ಮೋಡಗಳು, ಮಳೆಯ ಸಿಂಚನ, ಮನಸ್ಸಿಗೆ, ಜೀವಕ್ಕೆ, ಜೀವನಕ್ಕೆ ತಂಪು ನೀಡುತ್ತಿದ್ದ ಪ್ರಕೃತಿ ಇವೆಲ್ಲವುಗಳಿಂದ ಬಳ್ಳಾರಿ ಜಿಲ್ಲೆಗೆ ಸಂಡೂರು ಮುಕುಟಪ್ರಾಯವಾಗಿತ್ತು.

90ರ ದಶಕದಿಂದ ಕ್ರಮೇಣವಾಗಿ ಪ್ರಾರಂಭವಾದ ಯಾಂತ್ರೀಕೃತ ಗಣಿಗಾರಿಕೆ 2005ರ ವೇಳೆಗೆ ಸಂಪೂರ್ಣವಾಗಿ ಯಾಂತ್ರೀಕರಣಗೊಂಡಿತು. ಶ್ರಮಾಧಾರಿತ ಗಣಿಗಾರಿಕೆಯಲ್ಲಿ ದಿನಕ್ಕೆ ಸರಾಸರಿ 100 ಟನ್‌ಗಳಷ್ಟು ಕಬ್ಬಿಣ ಅದಿರು ಹೊರತೆಗೆಯಲು ನೂರಾರು ಕಾರ್ಮಿಕರ ಅವಶ್ಯಕತೆ ಇತ್ತು. ಹಾಗಾಗಿ ಶ್ರಮಾಧಾರಿತ ಗಣಿಗಾರಿಕೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರಿಗೆ ಉದ್ಯೋಗ ಲಭಿಸುತ್ತಿತ್ತು. ಪರಿಸರ ಮಾಲಿನ್ಯವೂ ಈಗಿನಂತೆ ಬಾರಿ ದೊಡ್ಡ ಪ್ರಮಾಣದಲ್ಲಿರಲಿಲ್ಲ. 2000 ಇಸವಿಯ ನಂತರ ಗಣಿಗಾರಿಕೆಯ ಸ್ವರೂಪವು ಸಂಪೂರ್ಣ ಬದಲಾಯಿತು. ಗಣಿಕಾರ್ಮಿಕರ ಬದಲು ಯಂತ್ರಗಳು ಬಂದವು. ಸಾವಿರಾರು ಕಾರ್ಮಿಕರ ಬದಲು, ಇಂದು ಕೇವಲ 25 ಜನ ಯಂತ್ರ ಚಾಲಕರು ಮತ್ತು ಸಹಾಯಕರು ಇದ್ದರೆ ದಿನವೊಂದಕ್ಕೆ ಸರಾಸರಿ 4000 ಟನ್ ಅದಿರನ್ನು ಹೊರತೆಗೆದು ಮಾರಾಟಕ್ಕೆ ಸಿದ್ಧಗೊಳಿಸಬಹುದಾಗಿದೆ. ಇದರಿಂದ ಒಂದೆಡೆ ಗಣಿಗಳಲ್ಲಿ ಉದ್ಯೋಗ ಅವಕಾಶಗಳು ಕಡಿಮೆಯಾದವು. ಇನ್ನೊಂದೆಡೆ ಉತ್ಪಾದನೆಯ ಪ್ರಮಾಣ ಹತ್ತಾರುಪಟ್ಟು ಹೆಚ್ಚಿತು. ದೊಡ್ಡ ಪ್ರಮಾಣದಲ್ಲಿ ಭಾರೀ ಗಾತ್ರದ ಲಾರಿಗಳಲ್ಲಿ ಅದಿರಿನ ಸಾಗಾಣಿಕೆ ಹೆಚ್ಚಿ, ರಸ್ತೆಗಳು ಹಾಳಾಗಿ ಎಲ್ಲಾ ವಿಧದ ಮಾಲಿನ್ಯವೂ ಹೆಚ್ಚಿತು. ಸ್ಫೋಟಗಳ ಸದ್ದು, ಲಾರಿಗಳ ಆರ್ಭಟಕ್ಕೆ ಮನೆ ಸೇರಿದರೂ ನೆಮ್ಮದಿ ಕಾಣದಾಗಿದೆ. ಜನತೆಯ ಆರೋಗ್ಯದ ಮೇಲೆಯೂ ದುಷ್ಪರಿಣಾಮ ಬೀರಿ, ಗಣಿಬಾಧಿತ ಪ್ರದೇಶಗಳ ಜನತೆ ಕ್ಯಾನ್ಸರ್, ಕ್ಷಯ ಹಾಗೂ ಗಂಭೀರವಾದ ಶ್ವಾಸಕೋಶದ ಕಾಯಿಲೆಗಳಿಂದ ಬಳಲುತ್ತಿದ್ದಾರೆ. ಎಲ್ಲೆಡೆ ಧೂಳಿನ ಕಣಗಳು ಹರಡಿ ರೈತರ ಬೆಳೆ ಹಾಳಾಗಿ ನಿರೀಕ್ಷಿತ ಫಸಲು ಬರುತ್ತಿಲ್ಲ. ರೈತನ ಜಾನುವಾರುಗಳು, ಕುರಿಗಳು ಕಾಯಿಲೆಗಳಿಗೆ ತುತ್ತಾಗಿವೆ. ಹಳ್ಳ-ಕೊಳ್ಳಗಳ ನೀರು ಮಲಿನವಾಗಿದೆ. ಜನನಿಬಿಡ ಊರು ಮತ್ತು ನಗರಗಳ ಸುತ್ತಲೂ ಗಣಿ ಆಧಾರಿತ ಮೆದು ಕಬ್ಬಿಣ ಕಾರ್ಖಾನೆಗಳು ಹುಟ್ಟಿಕೊಂಡು ಜನತೆಗೆ ಶುದ್ಧ ಗಾಳಿ, ಶುದ್ಧ ನೀರು ಗಗನ ಕುಸುಮಗಳಾಗಿವೆ. ಗಣಿ ಗಡಿಯಲ್ಲಿರುವ ಸಂಡೂರಿನ ಕಮತೂರು ಗ್ರಾಮವಂತೂ ಕನಲಿ ಹೋಗಿದೆ. ನಿಸರ್ಗದ ತಪ್ಪಲಲ್ಲಿ ಇದ್ದ ಈ ಗ್ರಾಮ ಈಗ ಗಣಿಧೂಳನ್ನೇ ಉಸಿರಾಡಬೇಕಿದೆ. ಗಣಿಯಲ್ಲಿ ನಡೆಯುವ ಸ್ಫೋಟಗಳು ನಿದ್ದೆ ಕೆಡಿಸುತ್ತಿವೆ. ಪರಿಹಾರದ ಬದಲು ಈ ಗ್ರಾಮವನ್ನೇ ಎತ್ತಂಗಡಿ ಮಾಡುವ ಹುನ್ನಾರ ನಡೆದಿದೆ. ಅಷ್ಟೇ ಅಲ್ಲ, ಸಂಡೂರು ತಾಲ್ಲೂಕಿನ ನಂದಿಹಳ್ಳಿ, ಭುಜಂಗನಗರ, ನಾರಾಯಣಪುರ, ಸುಶೀಲಾನಗರ, ಸಿದ್ಧಾಪುರ, ಸೇನಿ ಬಸಪ್ಪ ಕ್ಯಾಂಪ್ ಇತ್ಯಾದಿ ಹಲವಾರು ಹಳ್ಳಿಗಳ ಜನಜೀವನ ಅಸ್ತವ್ಯಸ್ತವಾಗಿದೆ.

ಇಂದು ಸಂಡೂರಿನ ಗಿರಿ ಶ್ರೇಣಿಗಳತ್ತ ಒಮ್ಮೆ ದೃಷ್ಟಿ ಹಾಯಿಸಿದರೆ, ಹಸಿರು ಬಸಿದು, ತಲೆಯೊಡೆದು ರಕ್ತ ಸುರಿಯುತ್ತಿರುವ ರೀತಿಯಲ್ಲಿ ಕಾಣಿಸುತ್ತಿವೆ. ಬೋಳಾದ ಗುಡ್ಡಗಳು ಮಾನವನ ಅತಿ ಲಾಲಸೆಗೆ ಮೂಕ ಸಾಕ್ಷಿಯಾಗಿ ಮೌನವಾಗಿ ರೋಧಿಸುತ್ತಿರುವಂತೆ ಭಾಸವಾಗುತ್ತಿದೆ. ಬಳ್ಳಾರಿ ಜಿಲ್ಲೆಯ 'ಊಟಿ'ಯ ಲೂಟಿ ಇನ್ನೂ ನಿಂತಿಲ್ಲ.

### ಕಾಂಚಾಣ ರಾಜಕಾರಣ

ಸರ್ಕಾರ ಗಣಿಗಾರಿಕೆಯನ್ನು ಸಂಪೂರ್ಣವಾಗಿ ಖಾಸಗೀಕರಣಗೊಳಿಸಿದ ನಂತರ ಗಣಿ ಮಾಲೀಕರಿಗೆ ಭಾರಿ ದೊಡ್ಡ ವರವಾಯಿತು. ಏಕೆಂದರೆ, ಗಣಿ ಮಾಲೀಕರು ಪ್ರತಿ ಒಂದು ಟನ್ ಗಣಿ ಉತ್ಪನ್ನಕ್ಕೆ ಕೇವಲ ರೂ. 25 ರಾಜಧನವನ್ನು ಸರ್ಕಾರದ ಬೊಕ್ಕಸಕ್ಕೆ ಸಲ್ಲಿಸುತ್ತಿದ್ದರು. ಇತ್ತೀಚೆಗೆ ಅದು ಸ್ವಲ್ಪ ಹೆಚ್ಚಾಗಿರಬಹುದು. ಆದರೆ 2000ದ ಮೊದಲ ದಶಕದಲ್ಲಿ ಚೀನಾ ದೇಶದಿಂದ ಅದಿರಿನ ಬೇಡಿಕೆ ಗಣನೀಯವಾಗಿ ಹೆಚ್ಚಿದ್ದರಿಂದ, ಒಂದು ಟನ್ ಅದಿರಿನ ಬೆಲೆ ರೂ. 250–300 ರಿಂದ ರೂ. 8,000–10,000ಕ್ಕೆ ಏರಿಕೆಯಾಯಿತು. ಗಣಿ ಮಾಲೀಕರು ಈ ಅವಕಾಶ ಉಪಯೋಗಿಸಿಕೊಂಡು, ಎಲ್ಲಾ ನಿಯಮ-ನಿಬಂಧನೆಗಳನ್ನು ಗಾಳಿಗೆ ತೂರಿ, ಗಣಿಗಳಲ್ಲಿ ದಿನವೊಂದಕ್ಕೆ ಸಾವಿರಾರು ಟನ್‌ಗಳಷ್ಟು ಅದಿರನ್ನು ಬಗೆದು ತೆಗೆದು ರಫ್ತು ಮಾಡಿ ಭರ್ಜರಿ ಲಾಭ ಪಡೆದುಕೊಂಡರು. ಈ ಲೂಟಿ ಹಣ ರಾಜ್ಯ ರಾಜಕೀಯದ ಮೇಲೂ ರುದ್ರನರ್ತನವನ್ನು ಮಾಡತೊಡಗಿತು.

2008ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತ ಬರದಿದ್ದ ಸಂದರ್ಭದಲ್ಲಿ ರಾಜ್ಯ ರಾಜಕಾರಣ 'ಆಪರೇಷನ್ ಕಮಲ' ಎಂಬ ಹೊಸ ದಾರಿಯನ್ನು ಕಂಡುಕೊಂಡಿದ್ದು ಈ 'ಕೆಂಪು ನೆಲದ ಕಪ್ಪು ಹಣ'ದಿಂದಾಗಿಯೇ. ಹಲವು ಶಾಸಕರನ್ನು ಖರೀದಿಸಿ ಶ್ರೀ ಯಡಿಯೂರಪ್ಪ ನೇತೃತ್ವದ ಸರ್ಕಾರವನ್ನು ರಚಿಸುವಲ್ಲಿ ಬಳ್ಳಾರಿಯ ಗಣಿಧಣಿಗಳು ಪ್ರಮುಖ ಪಾತ್ರ ವಹಿಸಿದರು ಎನ್ನುವ ಅಂಶ ಇಡೀ ದೇಶದಲ್ಲಿ ಮನೆ ಮಾತಾಯಿತು. ಅಕ್ರಮ ಗಣಿಗಾರಿಕೆ ಎರಡು ವರ್ಷಗಳ ಕಾಲ ಯಾವುದೇ ನಿರ್ಬಂಧವಿಲ್ಲದೇ ಮುಕ್ತವಾಗಿ ನಡೆದರೂ, ರಾಜ್ಯ ಬಿಜೆಪಿ ಸರ್ಕಾರ ಮತ್ತು ಕೇಂದ್ರ ಕಾಂಗ್ರೆಸ್ ಸರ್ಕಾರ ಅಕ್ರಮವನ್ನು ನಿಯಂತ್ರಿಸುವಲ್ಲಿ ಸಂಪೂರ್ಣ ವಿಫಲವಾದವು. ಇದೇ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆ, ರಿಪಬ್ಲಿಕ್ ಆಫ್ ಬಳ್ಳಾರಿ ಎನ್ನುವ ಕುಖ್ಯಾತಿ ಪಡೆದುಕೊಂಡಿತು. ಯಾವುದೇ ಎಗ್ಗುಸಿಗ್ಗಿಲ್ಲದೇ ರಾಜಕಾರಣಿಗಳು ಕ್ಯೂ ನಿಂತು ತಮ್ಮ ಹಣದ ಥೈಲಿ ತುಂಬಿಸಿಕೊಳ್ಳುವ 'ಲಾಲಸೆ ರಾಜಕಾರಣ'ಕ್ಕೆ ಇಳಿದರು. ಅಲ್ಲಿಯವರೆಗೂ ಸಾವಿರ-ಲಕ್ಷದ ಲೆಕ್ಕದಲ್ಲಿದ್ದ ಅಕ್ರಮ ವ್ಯವಹಾರಗಳೆಲ್ಲವೂ ಕೋಟಿಯ ಲೆಕ್ಕಕ್ಕೆ ಜಿಗಿದವು. ಓಟಿನ ರೇಟು ಜಾಸ್ತಿಯಾಗಿ, ಪ್ರಜಾಪ್ರಭುತ್ವ ಮೂಕವಾಗಿ ರೋದಿಸುತ್ತಾ ಹಿನ್ನೆಲೆಗೆ ಸರಿಯಿತು. ರಾಜಕಾರಣ ಸಾಂಸ್ಕೃತಿಕವಾಗಿ, ನೈತಿಕವಾಗಿ ಮತ್ತಷ್ಟು ಪ್ರಪಾತಕ್ಕೆ ಕುಸಿಯುವಂತಾಯಿತು. ಜನರ ಮೈಗೆ ಕೆಂಪುಧೂಳು ಮೆತ್ತಿಕೊಂಡಿದ್ದರೂ, ಜಿಲ್ಲೆಯ ರಾಜಕಾರಣದಲ್ಲಿ ಬಿಳಿಬಟ್ಟೆ, ಬಿಳಿಬೂಟು, ಕಣ್ಣಿಗೆ ಕೂಲಿಂಗ್ ಗ್ಲಾಸ್ ಹಾಗೂ ಕೈಯಲ್ಲಿ ಮೊಬೈಲ್‌ನೊಂದಿಗೆ ಹೊಸ ಯುವಪಡೆ ಅವತಾರವೆತ್ತಿದರು. ಬೈಕುಗಳ ಜಾಗದಲ್ಲಿ ಬೊಲೆರೋಗಳು ಬಂದವು. ಪ್ರಾಮಾಣಿಕರಾದ ಹಿರಿಯರು ರಾಜಕಾರಣದಿಂದ ಹಿಂದೆ ಸರಿದರು. ಜನರೂ ಕೂಡ ಈ ವಿಸ್ಮಯಗಳನ್ನು ಮೂಗಿನ ಮೇಲೆ ಬೆರಳಿಟ್ಟು ನೋಡುತ್ತಾ, ಚಹಾದಂಗಡಿಗಳಲ್ಲಿ ಹೊಸ ರಾಜಕಾರಣವನ್ನು ವರ್ಣಿಸುತ್ತಾ ಮೈ ಮರೆತರು. ಅಷ್ಟೊತ್ತಿಗೆ ಈ ಅಕ್ರಮ ಗಣಿಗಾರಿಕೆ ಎನ್ನುವ ಕ್ಯಾನ್ಸರ್ ಇಡೀ ಜಿಲ್ಲೆಯನ್ನು ಆಕ್ರಮಿಸಿ ಮರಣ ಮೃದಂಗವನ್ನು ಬಾರಿಸಿಯಾಗಿತ್ತು.

### ಕರಿಮೋಡಗಳಂಚಿಂದ ಕೋಲ್ಮಿಂಚು!

ಈ ಪರಿಸ್ಥಿತಿಯ ನಡುವೆಯೂ ಈ ಭಾಗದಲ್ಲಿ ಜನಸಂಗ್ರಾಮ ಪರಿಷತ್, ರೈತ ಸಂಘಟನೆಗಳು, ಎಸ್‌ಯುಸಿಐ(ಸಿ), ಎಐಯುಟಿಯುಸಿ ಯಂತಹ ಹಲವು ಸಂಘಟನೆಗಳು ಹಾಗೂ ಸಂಡೂರು ಭಾಗದ ಹಲವಾರು ಯುವಜನರು ಕುರುಡು ಕಾಂಚಾಣದ ಆರ್ಭಟದ ನಡುವೆ ಸೆಡ್ಡು ಹೊಡೆದು ನಿರಂತರವಾಗಿ ತಮ್ಮಿಂದಾದಷ್ಟು ಸೆಣೆಸುತ್ತಿದ್ದಾರೆ. ಅಕ್ರಮ ಗಣಿಗಾರಿಕೆಯನ್ನು ನಡೆಸಲು ಅನುಮತಿಸುವ ಸಲುವಾಗಿ, ಹಲವು ಜನಸಭೆಗಳನ್ನು ನಡೆಸಿ ಬಾಡಿಗೆ ಜನರನ್ನು ಕರೆದು ತಂದು ಜನಬೆಂಬಲದ ನಾಟಕ ಮಾಡಲು ಪ್ರಯತ್ನಿಸಿದರೂ, ಈ ಭಾಗದ ಜನತೆ ಸ್ವಯಂಪ್ರೇರಿತವಾಗಿ ಈ ಸಭೆಗಳಲ್ಲಿ ಭಾಗವಹಿಸಿ ಪ್ರತಿಭಟಿಸಿದ್ದಾರೆ. ಇದು ಜನರ ನೈಜ ಕಾಳಜಿಯನ್ನು ತೋರಿಸುತ್ತದೆ.

ಜೊತೆಗೆ 'ಸಮಾಜ ಪರಿವರ್ತನಾ ಸಮುದಾಯ' ದ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಎಸ್.ಆರ್. ಹಿರೇಮಠರವರು ಅವರು ಕಾನೂನು ಹೋರಾಟವನ್ನೂ ಕೈಗೆತ್ತಿಕೊಂಡು, ಅಕ್ರಮ ಗಣಿಗಾರಿಕೆ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಿದರು. ಅಂದಿನ ಲೋಕಾಯುಕ್ತ ಜಸ್ಟೀಸ್ ಶ್ರೀ. ಸಂತೋಷ್ ಹೆಗಡೆಯವರ ನೇತೃತ್ವದಲ್ಲಿ ತನಿಖೆ ನಡೆದು ಅರಾಜಕ ಗಣಿಗಾರಿಕೆಯ ಹಲವು ಅಕ್ರಮಗಳು, ಕರಾಳ ಮುಖಗಳು ಹಾಗೂ ಪ್ರಕೃತಿ, ಪರಿಸರ, ಜನಜೀವನದ ಮೇಲಾದ ದುಷ್ಪರಿಣಾಮಗಳ ಬಗ್ಗೆ ವರದಿಯಾಯಿತು. ನಂತರ ಸರ್ವೋಚ್ಚ ನ್ಯಾಯಾಲಯವು ಇದರ ಬಗ್ಗೆ ತನಿಖೆ ನಡೆಸಿ ವರದಿ ಒಪ್ಪಿಸಲು ಸೆಂಟ್ರಲ್ ಎಂಪವರ್‌ಮೆಂಟ್ ಕಮಿಟಿ (ಸಿಇಸಿ)ಯನ್ನು ನೇಮಿಸಿತು. ಅಕ್ರಮ ಗಣಿಗಾರಿಕೆಯ ಪರಿಣಾಮದ ಅಗಾಧತೆ ಹಾಗೂ ಗಂಭೀರತೆಯನ್ನು ಅರ್ಥ ಮಾಡಿಕೊಂಡು ಸುಪ್ರೀಂಕೋರ್ಟ್ 'ಗಣಿಬಾಧಿತ ಪ್ರದೇಶಗಳ ಪರಿಸರ ಪುನಶ್ಚೇತನ ಯೋಜನೆ' (ಸಿಇಪಿಎಂಐಝಡ್) ಅನ್ವಯ 'ವಿಶೇಷ ಉದ್ದೇಶದ ನಿಧಿ' (ಎಸ್‌ಪಿವಿ) ಸ್ಥಾಪಿಸಬೇಕು ಎಂದು ಸಿಇಸಿ ಶಿಫಾರಸ್ಸು ಮಾಡಿತು. ಇದನ್ನು ಸುಪ್ರೀಂಕೋರ್ಟ್ 2013 ರಲ್ಲಿ ನೀಡಿದ ತೀರ್ಪಿನಲ್ಲಿ ಸಮ್ಮತಿಸಿತು. ಇದರ ಪರಿಣಾಮವಾಗಿ, ಗಣಿ ಮಾಲೀಕರ ಮೇಲೆ ಎಸ್‌ವಿಪಿ ಮೂಲಕ ತೆರಿಗೆ ವಿಧಿಸಿ 'ಕರ್ನಾಟಕ ಗಣಿ ಪರಿಸರ ಪುನರುಜ್ಜೀವನ ನಿಗಮ' (ಕೆಎಂಇಆರ್‌ಸಿ) ಸ್ಥಾಪಿಸಲು ನಿರ್ಧರಿಸಲಾಯಿತು. ಕೋರ್ಟ್ ಆದೇಶದ ಪ್ರಕಾರ 'ಎಸ್‌ಪಿವಿ' ಗೆ ಗಣಿ ಗುತ್ತಿಗೆದಾರರು ಅದಿರು ಮಾರಾಟದ ಶೇ.10 ರಷ್ಟು ಪಾವತಿಸಬೇಕು. ಮನಸಿಗೆ ಬಂದಂತೆ ಅಕ್ರಮ ನಡೆಸಿದ ಆರೋಪಕ್ಕೊಳಗಾದ 'ಸಿ' ಕೆಟಗರಿ ಗಣಿಗಳ ಅದಿರು ಹರಾಜಿನ ಸಂಪೂರ್ಣ ಹಣ ಇದಕ್ಕೆ ಸಂದಾಯವಾಗಬೇಕು. 'ಅವಿಭಜಿತ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಅಕ್ರಮ ಗಣಿಗಾರಿಕೆ ನಡೆಸುವ ಮೂಲಕ ಪರಿಸರವನ್ನು ಸಿಕ್ಕಾಪಟ್ಟೆ ನಾಶ ಮಾಡಲಾಗಿದೆ. ಹೀಗಾಗಿ, ಪರಿಸರ ಪುನರುಜ್ಜೀವನದ ಕೆಲಸವೂ ಅಸಾಧಾರಣವಾಗಿರಬೇಕು' ಎಂದು ಕೋರ್ಟು ತಾಕೀತು ಮಾಡಿದೆ. ಅಷ್ಟೇ ಅಲ್ಲ 'ಸಿಇಪಿಎಂಐಝಡ್' ಅನುಷ್ಠಾನದ ಮೇಲ್ವಿಚಾರಣೆ ಹಾಗೂ ಪ್ರಗತಿ ಪರಿಶೀಲನೆಗೆ ಒಡಿಶಾ ಮಾದರಿಯಲ್ಲಿ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ. ಸುದರ್ಶನ ರೆಡ್ಡಿ ಅಧ್ಯಕ್ಷತೆಯಲ್ಲಿ 'ಕಣ್ಗಾವಲು ಪ್ರಾಧಿಕಾರ' (ಓವರ್‌ಸೈಟ್ ಅಥಾರಿಟಿ) ಯನ್ನು ನೇಮಿಸಿತು. 'ಎಸ್‌ಪಿವಿ' ಯಲ್ಲಿ ಈಗ ಅಂದಾಜು ರೂ. 30 ಸಾವಿರ ಕೋಟಿ ಸಂಗ್ರಹವಾಗಿದೆ. ಈ ನಿಧಿಯ ಮೇಲೆ ಜನಪ್ರತಿನಿಧಿಗಳ ಕಣ್ಣಿದೆ. ಹಿಂದೆ ಇದೇ ಕಾರಣಕ್ಕೆ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ನಡುವೆ ಜಟಾಪಟಿ ನಡೆದಿತ್ತು. 'ಕಣ್ಗಾವಲು ಪ್ರಾಧಿಕಾರ' (ಓವರ್‌ಸೈಟ್ ಅಥಾರಿಟಿ) ಇರುವುದರಿಂದ ಹಣವನ್ನು ಮನಸ್ಸಿಗೆ ಬಂದಂತೆ ಬಳಸಲು ಅವಕಾಶವಿಲ್ಲ ಎಂಬುದು ಕೋರ್ಟ್ ಹಾಗೂ ಜನರ ಆಶಯ.

### ಹೋದೆಯಾ ಪಿಶಾಚಿ - ಬಂದೆ ಗವಾಕ್ಷೀಲಿ !!

ನಮ್ಮನ್ನು ಆಳುವ ಸರ್ಕಾರಗಳಿಗೆ ನಿಜವಾಗಿ ಜನಪರ ಕಾಳಜಿ, ಜವಾಬ್ದಾರಿ ಮತ್ತು ಇಚ್ಛಾಶಕ್ತಿ ಇದ್ದಿದ್ದರೆ ಇಷ್ಟೆಲ್ಲಾ ಸದಾಶಯ ಹೊತ್ತು ಸ್ಥಾಪನೆಯಾಗಿರುವ 'ಕರ್ನಾಟಕ ಗಣಿ ಪರಿಸರ ಪುನರುಜ್ಜೀವನ ನಿಗಮ' (ಕೆಎಂಇಆರ್‌ಸಿ) ದಲ್ಲಿರುವ ಹಣದಲ್ಲಿ, ಇಷ್ಟು ಹೊತ್ತಿಗೆ ಈ ಪ್ರದೇಶದಲ್ಲಿ ಆಗಿರುವ ಸಾಂಪ್ರದಾಯಿಕ ನೀರಿನ ಝರಿಗಳ ನಾಶ, ಅಂತರ್ಜಲ ಕುಸಿತ, ವನ್ಯ ಮೃಗಗಳ ನಾಶ, ವಿಪರೀತ ಧೂಳಿನಿಂದ ಬೆಳೆ ನಾಶ-ಕೃಷಿ ನಾಶ, ಧೂಳಿನಿಂದ ಉಸಿರಾಟ ತೊಂದರೆ, ಕ್ಷಯ ರೋಗ, ಕ್ಯಾನ್ಸರ್, ಚರ್ಮರೋಗದಿಂದ ಬಳಲುತ್ತಿರುವ ಜನರ, ಲಾರಿ-ಟಿಪ್ಪರ್‌ಗಳ ವಿಪರೀತ ಸಂಚಾರದಿಂದ ಅಪಘಾತಕ್ಕೀಡಾಗಿ ಅಂಗಾಂಗ ವಿಕಲತೆಯಿಂದ ಬದುಕುತ್ತಿರುವ ಜನರ, ಭಾರೀ ಯಂತ್ರಗಾರಿಕೆಯಿಂದ ಕೆಲಸ ಕಳೆದುಕೊಂಡು ಬೀದಿಗೆ ಬಿದ್ದ ಕಾರ್ಮಿಕರ, ನಿರುದ್ಯೋಗಿಗಳಾದ ಕಾಡಂಚಿನಲ್ಲಿ ಕೃಷಿ ಮಾಡುತ್ತಿದ್ದ ಸಾಗುವಳಿದಾರರ, ನಾಶವಾದ ಹೈನುಗಾರಿಕೆ ಮುಂತಾಗಿ ತೀವ್ರ ಸಂಕಷ್ಟಕ್ಕೆ ಒಳಗಾದ ಎಲ್ಲಾ ವಿಭಾಗದ ಜನರ ಪುನರುಜ್ಜೀವನಕ್ಕಾಗಿ ಪರಿಣಾಮಕಾರಿ ಯೋಜನೆ ಹಾಗೂ ಅನುಷ್ಠಾನ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದವು.

9ನೇ ಪುಟಕ್ಕೆ...

# ಏಕೀಕೃತ (ಯುಪಿಎಸ್) ಪಿಂಚಣಿ ಯೋಜನೆ–ಹೊಸ ವಿಧಾನದ ವಂಚನೆ

ಭಾರತದಲ್ಲಿ ಭವಿಷ್ಯ ನಿಧಿ ಮತ್ತು ಪಿಂಚಣಿ ಬಿಟ್ಟರೆ ಬೇರೆ ಯಾವುದೇ ಸಾಮಾಜಿಕ ಭದ್ರತೆಯ ಯೋಜನೆಗಳಿಲ್ಲ. ದೇಶದ ದುಡಿಯುವ ಜನತೆಯ ಕೇವಲ ಶೇಕಡ 7 ರಷ್ಟಿರುವ ಸಂಘಟಿತ ವಲಯದ ನೌಕರರಿಗೆ ಮಾತ್ರ ಇದು ದೊರಕುತ್ತದೆ. ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರು ಈ ಪಿಂಚಣಿ ಯೋಜನೆಯಿಂದ ಹೊರಗುಳಿಯುತ್ತಾರೆ. ಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿರುವ ಕೈಗಾರಿಕಾ ಕಾರ್ಮಿಕರಿಗೆ ಕೊಡಬೇಕಾದ ಭವಿಷ್ಯ ನಿಧಿ ಯೋಜನೆಯಲ್ಲಿಯೂ ಸಹ ಹಲವಾರು ಲೋಪದೋಷಗಳು, ಅವ್ಯವಹಾರಗಳು ಹಾಗೂ ಕಾರ್ಖಾನೆಯ ಮಾಲೀಕರಿಂದ ಹಣದ ದುರುಪಯೋಗಗಳು ವರದಿಯಾಗಿವೆ. ಅಸಂಘಟಿತ ವಲಯ ಕಾರ್ಮಿಕರ ಬಗ್ಗೆ ಆಳ್ವಿಕರು ಮೊಸಳೆ ಕಣ್ಣೀರು ಸುರಿಸುತ್ತಾ, ಎಲ್ಲಾ ಯೋಜನೆಗಳನ್ನೂ ಕಾಗದದ ಮೇಲೆ ಉಳಿಸಿದ್ದಾರೆ. ವಲಸೆ ಕಾರ್ಮಿಕರ ಹೆಸರು ಎಲ್ಲೂ ದಾಖಲಾಗಿಲ್ಲ. ಹೀಗೆ ಕಾರ್ಮಿಕರ ಕುರಿತು ನಮ್ಮ ದೇಶದಲ್ಲಿ ಯಾವುದೇ ಕಾಳಜಿ ಇಲ್ಲದಿರುವುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

### ಉದ್ಯೋಗಗಳ ಸಂಖ್ಯೆ ಕುಸಿಯುತ್ತಿದೆ. ಹೊರಗುತ್ತಿಗೆ, ಕಾಂಟ್ರಾಕ್ಟ್ ಪದ್ಧತಿ ಹೆಚ್ಚಾಗುತ್ತಿದೆ

ಮತ್ತೊಂದೆಡೆ, ಸಂಘಟಿತ ವಲಯದಲ್ಲಿಯೂ ಕಾರ್ಮಿಕರ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದೆ. ಏಕೆಂದರೆ, 1)ನಿವೃತ್ತಿಯಿಂದಾಗಿ ಖಾಲಿಯಾದ ಹುದ್ದೆಗಳನ್ನು ಭರ್ತಿ ಮಾಡುತ್ತಿಲ್ಲ. (2) ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಮಾನವ ಶಕ್ತಿಯ ಬಳಕೆಯನ್ನು ಕಡಿಮೆ ಮಾಡಲಾಗಿದೆ. (3) ಖಾಯಂ ಕೆಲಸಗಳನ್ನು ಹೊರಗುತ್ತಿಗೆಗೆ ನೀಡಲಾಗುತ್ತಿದೆ. ಇದೆಲ್ಲದರ ಮೇಲೆ ಸರ್ಕಾರಿ ಸ್ವಾಮ್ಯದಲ್ಲಿದ್ದ ರೈಲ್ವೆ, ಟೆಲಿಕಾಂ, ಗಣಿಗಾರಿಕೆ, ಬ್ಯಾಂಕಿಂಗ್ ಇತ್ಯಾದಿ ಕ್ಷೇತ್ರಗಳನ್ನು ಖಾಸಗಿಯವರಿಗೆ ನೀಡಲಾಗಿದ್ದು, ಸಾಮಾಜಿಕ ಭದ್ರತೆಯನ್ನು ನೀಡಬೇಕಾಗಿದ್ದ ಅಳಿದುಳಿದ ಕಾನೂನಾತ್ಮಕ ಬಂಧನವೂ ಇದೀಗ ಇಲ್ಲದಂತಾಗಿದೆ. ಮಾರ್ಚ್ 31, 2023 ರಲ್ಲಿ ರಾಜ್ಯ ಸಭೆ ಹಾಗೂ ಲೋಕಸಭೆಯಲ್ಲಿ ನೀಡಲಾಗಿರುವ ಮಾಹಿತಿ ಪ್ರಕಾರ – ಕೇಂದ್ರ ಸರ್ಕಾರದಲ್ಲಿ 40 ಲಕ್ಷ ಹುದ್ದೆಗಳು ಮಂಜೂರಾಗಿದ್ದು, 9.7 ಲಕ್ಷಕ್ಕೂ ಹೆಚ್ಚು ಉದ್ಯೋಗಗಳು ಖಾಲಿ ಉಳಿದಿವೆ. ರಕ್ಷಣಾ ಕ್ಷೇತ್ರದಲ್ಲಿಯೇ 3 ಲಕ್ಷಕ್ಕೂ ಹೆಚ್ಚು ನಾಗರಿಕ ಹುದ್ದೆಗಳು ಖಾಲಿಯಿವೆ ಹಾಗೂ ಇವೆಲ್ಲವುಗಳನ್ನು ಹೊರಗುತ್ತಿಗೆಗೆ ನೀಡಲಾಗಿದೆ. ದೇಶದಾದ್ಯಂತ ವಿಶ್ವವಿದ್ಯಾಲಯಗಳಲ್ಲಿ 5,400ಕ್ಕೂ ಹೆಚ್ಚು ಶೈಕ್ಷಣಿಕ ಹುದ್ದೆಗಳು ಖಾಲಿ ಬಿದ್ದಿವೆ. ಈ ದೇಶದಲ್ಲಿ ಶ್ರೀಮಂತರು ಅತಿ ವೇಗವಾಗಿ ಮತ್ತಷ್ಟು ಶ್ರೀಮಂತರಾಗುತ್ತಿದ್ದಾರೆ, ದುಡಿಯುವ ಜನರನ್ನು ವಿನಾಶಕ್ಕೆ ತಳ್ಳಲಾಗುತ್ತಿದೆ.

### ಪಿಂಚಣಿ ಯೋಜನೆಗೆ ಕೊಡಲಿಪೆಟ್ಟು

2025ರ ಮಾರ್ಚ್ 19ರಂದು ಕೇಂದ್ರ ಸರ್ಕಾರವು ಪಿಂಚಣಿಗೆ ಸಂಬಂಧಿಸಿದಂತೆ ಪಿಎಫ್‌ಆರ್‌ಡಿಎ (ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ) ಎಂಬ ಪ್ರಾಧಿಕಾರ ರಚನೆಯನ್ನು ಘೋಷಿಸಿತು ಹಾಗೂ ಏಪ್ರಿಲ್ 1 ರಿಂದ ಜಾರಿಯಾಗುವ ಯುಪಿಎಸ್ ಯೋಜನೆಯಲ್ಲಿ, ಸದ್ಯಕ್ಕೆ ರಾಷ್ಟ್ರೀಕೃತ ಪಿಂಚಣಿ ಯೋಜನೆ (ಎನ್‌ಪಿಎಸ್) ಯಡಿಯಲ್ಲಿರುವ ಕೇಂದ್ರ ಸರ್ಕಾರಿ ನೌಕರರು ಸೇರಬಹುದು ಎಂಬ ಆಯ್ಕೆಯನ್ನು ನೀಡಲಾಗಿದೆ. ಈ ಯುಪಿಎಸ್ ಯೋಜನೆಯು ಸರಿಸುಮಾರು 23 ಲಕ್ಷ ಕೇಂದ್ರ ಸರ್ಕಾರಿ ನೌಕರರನ್ನು ಒಳಗೊಳ್ಳುತ್ತದೆ. ರಾಜ್ಯ ಸರ್ಕಾರಗಳೂ ಸಹ ಯುಪಿಎಸ್ ಅನ್ನು ಅಳವಡಿಸಿಕೊಂಡರೆ, 90 ಲಕ್ಷ ನೌಕರರನ್ನು ಇದು ಒಳಗೊಳ್ಳುತ್ತದೆ.

ದೇಶದಾದ್ಯಂತ ಎಲ್ಲೆಡೆ ಕೇಂದ್ರ ಹಾಗೂ ರಾಜ್ಯ ಸರ್ಕಾರಿ ನೌಕರರು 2004ರಲ್ಲಿ ಜಾರಿಗೆ ಬಂದ ಎನ್‌ಪಿಎಸ್ ಜಾಗದಲ್ಲಿ ಹಳೆಯ ಪಿಂಚಣಿ ಯೋಜನೆ (ಓಪಿಎಸ್) ಅನ್ನು ಪುನರ್‌ಸ್ಥಾಪಿಸಬೇಕೆಂದು ಬಹಳ ಕಾಲದಿಂದಲೂ ಒತ್ತಾಯಿಸುತ್ತಿದ್ದಾರೆ. ಆದರೆ ಕೇಂದ್ರ ಸರ್ಕಾರವು ಈಗ ಮಧ್ಯಮಮಾರ್ಗವಾಗಿ ಯುಪಿಎಸ್ ಅನ್ನು ತರುತ್ತಿದೆ. ಇದನ್ನು ಮುಖ್ಯವಾಹಿನಿಯ ಮಾಧ್ಯಮಗಳು 'ಕ್ರಾಂತಿಕಾರಿ' ಎಂದು ಬಣ್ಣಿಸುತ್ತಿವೆ.

### ಯುಪಿಎಸ್‌ನ ವಿವರಗಳು

ಯುಪಿಎಸ್ ಮೂಲಭೂತವಾಗಿ ಒಂದು ದೇಣಿಗೆ ರೀತಿಯ ಪಿಂಚಣಿ ಯೋಜನೆ. ಇದಕ್ಕೆ ನೌಕರರು ತಮ್ಮ ಮೂಲ ವೇತನದ ಹಾಗೂ ತುಟ್ಟಿಭತ್ಯೆಯ ಶೇಕಡ 10ರಷ್ಟನ್ನು ನೀಡಬೇಕು ಮತ್ತು ಸರ್ಕಾರವು ಶೇಕಡ 14ರ ಬದಲು ಶೇಕಡ 18.5ರಷ್ಟನ್ನು ನೀಡುತ್ತದೆ. ಓಪಿಎಸ್ ಅಡಿಯಲ್ಲಿ ನೌಕರರಿಂದ ಯಾವುದೇ ದೇಣಿಗೆ ಬೇಕಿರಲಿಲ್ಲ ಮತ್ತು ನಿವೃತ್ತಿ ಹೊಂದಿದವರ ನಿಧನದ ನಂತರ ಅವರ ಪಿಂಚಣಿಯ ಅರ್ಧದಷ್ಟು ಮೊತ್ತ ಕುಟುಂಬಕ್ಕೆ ದೊರೆಯುತ್ತಿತ್ತು ಮತ್ತು 80 ವರ್ಷ ದಾಟಿದರೆ ಪಿಂಚಣಿ ಪರಿಷ್ಕರಣೆಯಾಗುತ್ತಿತ್ತು. ಎನ್‌ಪಿಎಸ್ ಅಥವಾ ಯುಪಿಎಸ್ ಯೋಜನೆಯು ಓಪಿಎಸ್‌ಗೆ ಪರ್ಯಾಯವಲ್ಲ.

ಓಪಿಎಸ್ ಅಡಿಯಲ್ಲಿ ಕೇಂದ್ರ ಸರ್ಕಾರಿ ನೌಕರರು, ನಿವೃತ್ತಿಯ ವೇಳೆಗೆ 10 ವರ್ಷದ ಸೇವೆ ಸಲ್ಲಿಸಿದ್ದರೆ ಅಥವಾ ಸ್ವಯಂ ನಿವೃತ್ತಿಯಾದ ಸಂದರ್ಭದಲ್ಲಿ 20 ವರ್ಷಗಳ ಸೇವೆ ಸಲ್ಲಿಸಿದ್ದರೆ, ತಮ್ಮ ಕೊನೆಯ ತಿಂಗಳಿನ ಸಂಬಳದ ಶೇಕಡ 50ರಷ್ಟು ಮೊತ್ತವನ್ನು ಪಿಂಚಣಿಯಾಗಿ ಪಡೆಯುತ್ತಾರೆ. ಆದರೆ ಯುಪಿಎಸ್ ಅಡಿಯಲ್ಲಿ, ನಿವೃತ್ತಿ ಹೊಂದಿದವರು ತಮ್ಮ ಸೇವೆಯಲ್ಲಿನ ಕಳೆದ 12 ತಿಂಗಳಲ್ಲಿನ ಮೂಲವೇತನದ ಶೇಕಡ 50ರಷ್ಟನ್ನು ಪಡೆಯಲು 25 ವರ್ಷಗಳ ಸೇವೆಯನ್ನು ಹೊಂದಿರಬೇಕು. ಈ 5 ವರ್ಷ ಹೆಚ್ಚುವರಿ ಸೇವಾ ನಿರ್ಬಂಧ ಏಕೆ? ಯುಪಿಎಸ್ ಅಡಿ ಕೇವಲ ಜೀವನ ಸಂಗಾತಿಗೆ ಮಾತ್ರ ಕೌಟುಂಬಿಕ ಪಿಂಚಣಿ ದೊರೆಯುತ್ತದೆ. ತಂದೆ– ತಾಯಿ ಅಥವಾ ಅವಿವಾಹಿತ, ವಿಧವಾ ಹೆಣ್ಣು ಮಕ್ಕಳು, ಅಂಗವಿಕಲ ಮಕ್ಕಳಿಗೆ ದೊರೆಯುವುದಿಲ್ಲ. ಯಾರಾದರೂ 50 ವರ್ಷಕ್ಕೆ ಸ್ವಯಂ ನಿವೃತ್ತಿ ಪಡೆದರೆ, (ಅಂದರೆ 25 ವರ್ಷದ ಸೇವೆಯ ನಂತರ) ಅವರಿಗೆ 60 ವರ್ಷಗಳಾಗುವವರೆಗೂ ಪಿಂಚಣಿ ಹಣ ಪಾವತಿಯಾಗುವುದಿಲ್ಲ! ಇದು ವಿವರಣೆಗೆ ಮೀರಿದ ಅನ್ಯಾಯವಲ್ಲವೇ? ಹಾಗಾದರೆ ನಿವೃತ್ತಿಯಾಗಿ 10 ವರ್ಷಗಳ ಕಾಲ ಓರ್ವ ನಿವೃತ್ತ ನೌಕರ ಹೇಗೆ ಬದುಕಬೇಕು ಎಂದು ಸರ್ಕಾರ ಆಶಿಸುತ್ತದೆ? ಓಪಿಎಸ್ ಅಡಿ ಸ್ವಯಂ ನಿವೃತ್ತಿಯಾದ ದಿನವೇ ಪಿಂಚಣಿ ಪಾವತಿಯಾಗುತ್ತಿತ್ತು.

### ಪಿಂಚಣಿ ಹೆಚ್ಚಳಕ್ಕೆ ಯಾವುದೇ ಅವಕಾಶಗಳಿಲ್ಲ

ಓಪಿಎಸ್ ಅಡಿಯಲ್ಲಿ ವೇತನ ಆಯೋಗಗಳ ಅನುಷ್ಠಾನಕ್ಕೆ ತಕ್ಕಂತೆ ಪಿಂಚಣಿ ಹೆಚ್ಚಳದ ಪರಿಷ್ಕರಣೆಯಾಗುತ್ತಿತ್ತು. ಆದರೆ ಯುಪಿಎಸ್ ಅಡಿಯಲ್ಲಿ ಇದಕ್ಕೆ ಯಾವುದೇ ಅವಕಾಶಗಳಿಲ್ಲ. ವಿಪರೀತ ಬೆಲೆಏರಿಕೆಯ ಈ ಸಂದರ್ಭದಲ್ಲಿ ಇದು ಅತ್ಯಂತ ಅನ್ಯಾಯಯುತವಾದದ್ದು. ಯುಪಿಎಸ್ ಅಡಿಯಲ್ಲಿ ಹಿಂದೆ ಓಪಿಎಸ್‌ನಲ್ಲಿ ಇದ್ದಂತಹ ಯಾವುದೇ ವಿಧವಾದ ಇನ್ನಿತರ ಆರ್ಥಿಕ ಯೋಜನೆಗಳ ಪ್ರಯೋಜನಗಳಿಲ್ಲ.

ಯುಪಿಎಸ್ ಅಡಿಯಲ್ಲಿ ನೌಕರರು ತಿಂಗಳಿನ ತಮ್ಮ ಮೂಲ ವೇತನದ ಹಾಗೂ ತುಟ್ಟಿ ಭತ್ಯೆಯ ಶೇಕಡ 10ರಷ್ಟನ್ನು ನೀಡುತ್ತಾರೆ, ಸರ್ಕಾರವು ಸಮಾನವಾದ ಮೊತ್ತವನ್ನು ನೀಡುತ್ತದೆ. ಇದನ್ನು 'ವ್ಯಕ್ತಿಗತ ಕಾರ್ಪಸ್ ಫಂಡ್' ಎಂಬುದರಡಿಯಲ್ಲಿ ಇಡಲಾಗುತ್ತದೆ. ನಿವೃತ್ತಿಯ ನಂತರ ಅಥವಾ ಸ್ವಯಂ ನಿವೃತ್ತಿ ಪಡೆದ ನಂತರ ಈ ಹಣವನ್ನು 'ಪೂಲ್ ಕಾರ್ಪಸ್' (ಪೂಲ್ ನಿಧಿ) ಗೆ ವರ್ಗಾಯಿಸಲಾಗುವುದು. 50 % ಪಿಂಚಣಿಯನ್ನು ಪಡೆಯಬೇಕಾದರೆ 'ವ್ಯಕ್ತಿಗತ ಕಾರ್ಪಸ್ ಫಂಡ್' ನ ಮೊತ್ತವು ಪಿಎಫ್‌ಅರ್‌ಡಿಎ ನಿಗದಿಪಡಿಸುವ 'ಕಾರ್ಪಸ್ ಮಾನದಂಡ' (ಬೆಂಚ್ಮಾರ್ಕ್ ಕಾರ್ಪಸ್) ಕ್ಕೆ ಸರಿಸಮನಾಗಿ ಇರಬೇಕು. ಅಂದರೆ ನಿವೃತ್ತಿಯ ವೇಳೆಗೆ 'ವೈಯಕ್ತಿಕ ಕಾರ್ಪಸ್'ನ ಮೌಲ್ಯವು ಪಿಎಫ್‌ಅರ್‌ಡಿಎನ 'ಬೆಂಚ್ಮಾರ್ಕ್ ಕಾರ್ಪಸ್' ಮೌಲ್ಯಕ್ಕಿಂತ ಕಡಿಮೆ ಆದರೆ, ಘೋಷಿತ ಪಿಂಚಣಿ ಹಣವನ್ನು ಓರ್ವ ನಿವೃತ್ತ ನೌಕರ ಪಡೆಯುವುದಿಲ್ಲ. ಬದಲಿಗೆ ತನ್ನ 'ವೈಯಕ್ತಿಕ ಕಾರ್ಪಸ್' ನಲ್ಲಿ ಜಮಾ ಆದ ಹಣಕ್ಕೆ ಅನುಗುಣವಾಗಿ ಕಡಿಮೆ ಪಿಂಚಣಿಯನ್ನು ಪಡೆಯುತ್ತಾನೆ. ಅತ್ಯಂತ ಘೋರ ವಂಚನೆ ಇದು!

'ಬೆಂಚ್ಮಾರ್ಕ್ ಕಾರ್ಪಸ್'ನ ಮೌಲ್ಯವನ್ನು ನಿರ್ಧಾರ ಮಾಡುವ ಹಕ್ಕು ನೌಕರರಿಗೆ ಇರುವುದಿಲ್ಲ. 'ಬೆಂಚ್ಮಾರ್ಕ್ ಕಾರ್ಪಸ್'ನ ಮೌಲ್ಯದ ಅವಶ್ಯಕತೆಗೆ ತಕ್ಕಂತೆ 'ವೈಯಕ್ತಿಕ ಕಾರ್ಪಸ್' ನಲ್ಲಿ ಆಗುವ ಖೋತಾವೂ ನಿವೃತ್ತಿಯ ನಂತರ ಸಿಗುವ ಪಿಂಚಣಿಯ ಮೇಲೆ ನೇರ ಪ್ರಭಾವ ಬೀರುತ್ತದೆ. ಇನ್ನು, ಕಾಲಕಾಲಕ್ಕೆ ಬದಲಾಗುವ ಪಿಎಫ್‌ಅರ್‌ಡಿಎನ 'ಬೆಂಚ್ಮಾರ್ಕ್ ಕಾರ್ಪಸ್' ಮೌಲ್ಯಕ್ಕೆ ತಕ್ಕಂತೆ ತನ್ನ 'ವೈಯಕ್ತಿಕ ಕಾರ್ಪಸ್' ನಲ್ಲಿ ಹಣ ಜಮಾ ಆಗುವುದನ್ನು ಓರ್ವ ನೌಕರ ಹೇಗೆ ಖಾತ್ರಿ ಪಡಿಸಿಕೊಳ್ಳಬಲ್ಲ? ಇದರೊಟ್ಟಿಗೆ ಇಡೀ 'ಪೂಲ್ ಕಾರ್ಪಸ್' ಹಣವನ್ನು ಊಹಾಪೋಹದ ಮೇಲೆ ನಿಂತಿರುವ ಶೇರು ಮಾರುಕಟ್ಟೆಯಲ್ಲಿ ಹೂಡಬಹುದು. ಸ್ಟಾಕ್ ಮಾರುಕಟ್ಟೆಯ ಏರಿಳಿತಕ್ಕೆ ಅನುಗುಣವಾಗಿ ಪಿಂಚಣಿ ನಿರ್ಧಾರವಾಗುತ್ತದೆ! ಅಂದರೆ, ನೌಕರರ ತಲೆಯ ಮೇಲಿರುವ ಅನಿಶ್ಚಿತತೆಯ ತೂಗುಗತ್ತಿ ಸದಾ ತೂಗುತ್ತಿರುತ್ತದೆ. ಪೂಲ್ ನಿಧಿ ಎಂಬುದು ಗೊಂದಲಗೊಳಿಸುವಂತಿದ್ದು, ಯುಪಿಎಸ್‌ನ ಅಡಿಯಲ್ಲಿ ನೌಕರರನ್ನು ಸಂಕಷ್ಟಕ್ಕೆ ದೂಡಲಾಗುತ್ತದೆ.

### ಸಾರಾಂಶ

ಸಿಸಿಎಸ್ (ಕೇಂದ್ರ ನಾಗರಿಕ ಸೇವೆಗಳು) ನಿಯಮಗಳಡಿಯಲ್ಲಿ ಪಿಂಚಣಿ ಎಂಬುದು ನೌಕರರ ಮೂಲಭೂತ ಹಕ್ಕು. ಇದು ಆರ್ಥಿಕ ಬಿಕ್ಕಟ್ಟಿನಲ್ಲಿರುವ ವೃದ್ಧರಿಗೆ ಒಂದು ಆರ್ಥಿಕ ಭದ್ರತೆ. ಸರ್ವೋಚ್ಚ ನ್ಯಾಯಾಲಯವು ಇದೊಂದು ಸಮಾಜ ಕಲ್ಯಾಣ ಕ್ರಮವಾಗಿದ್ದು, ಮಾಲೀಕರಿಗಾಗಿ ದುಡಿದ ನೌಕರರನ್ನು ಅವರ ವೃದ್ಧಾಪ್ಯದಲ್ಲಿ ಕೈಬಿಡಬಾರದೆಂದು ಹೇಳಿದೆ. ಆದ್ದರಿಂದಲೇ ಸರ್ಕಾರವು ಬೃಹತ್ ಲಾಭಗಳಿಸುತ್ತಿರುವ ವ್ಯಕ್ತಿಗಳು ಹಾಗೂ ಕಾರ್ಪೊರೇಟ್ ಸಂಸ್ಥೆಗಳಿಗೆ ತೆರಿಗೆ ವಿಧಿಸಿ, ಹಣ ಸಂಗ್ರಹಿಸಬೇಕು. ಸಾಮಾನ್ಯ ನೌಕರರ ಪಿಂಚಣಿ ಹಣಕ್ಕೆ ಧಕ್ಕೆಯಾಗದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಎನ್‌ಪಿಎಸ್ ಹಾಗೂ ಯುಪಿಎಸ್ ಅನ್ನು ಖಡಾಖಂಡಿತವಾಗಿ ಹಿಂತೆಗೆದುಕೊಂಡು ಓಪಿಎಸ್ ಅನ್ನು ಜಾರಿಗೊಳಿಸಬೇಕು. ಇದು ಸಾಕಾರಗೊಳ್ಳಲು ನೌಕರರ ಸಂಘಟಿತ, ರಾಜಿರಹಿತ ಹೋರಾಟವೊಂದೇ ಪರಿಹಾರ.

...2ನೇ ಪುಟದಿಂದ

## ರೈಲ್ವೆ ಖಾಸಗೀಕರಣ ವಿರೋಧಿಸಿ

### ರೈಲ್ವೆ ಖಾಸಗೀಕರಣಕ್ಕೆ ಯಾವತ್ತೂ ಒಪ್ಪಿಗೆ ಕೊಡಲು ಸಾಧ್ಯವಿಲ್ಲ

ಭಾರತೀಯ ರೈಲ್ವೆಯನ್ನು ಕಳೆದ 165 ವರ್ಷಗಳಿಂದ ಕಾರ್ಮಿಕರ ಬೆವರು ಮತ್ತು ರಕ್ತವನ್ನು ಸುರಿಸಿ ಬೆಳೆಸಲಾಗಿದೆ. ಭಾರತೀಯರ ಹಣದಿಂದ ಸುಮಾರು 60 ಲಕ್ಷ ಕೋಟಿ ಮೌಲ್ಯದ ಆಸ್ತಿಯನ್ನು ಸೃಷ್ಟಿಸಲಾಗಿದೆ. ಭಾರತೀಯ ರೈಲ್ವೆಯು ಭಾರತದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಹಾಗೂ ಪ್ರಗತಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ. ಅದು ಪ್ರಯಾಣಿಕರಿಗೆ ಮತ್ತು ಸರಕು ಸಾಗಾಣಿಕೆಗೆ ಬಹಳ ಮುಖ್ಯವಾದ ಸಾರಿಗೆ ವ್ಯವಸ್ಥೆ. ಅದು ಇಡೀ ದೇಶದ ವಿವಿಧ ನಗರಗಳಿಗೆ, ಪ್ರದೇಶಗಳಿಗೆ ಸಂಪರ್ಕ ಕೊಂಡಿಯಾಗಿದೆ. ದೇಶದ ಮೂಲೆ ಮೂಲೆಯಿಂದ ಜನರನ್ನು ಕರೆತಂದು ಒಂದುಗೂಡಿಸುತ್ತದೆ ಮತ್ತು ವಿವಿಧ ಆರ್ಥಿಕ ಚಟುವಟಿಕೆಗಳನ್ನು ನಡೆಸಲು ತನ್ನದೇ ಆದ ಕಾಣಿಕೆ ನೀಡಿದೆ. ಈಗ ಬಂಡವಾಳಿಗರು ಯಾವುದೇ ಹೂಡಿಕೆ ಇಲ್ಲದೆ ಅದರ ಫಲವನ್ನು ಅನುಭವಿಸಲು ಸಿದ್ಧರಾಗಿದ್ದಾರೆ. ಸಾರ್ವಜನಿಕರ ಆಸ್ತಿಯನ್ನು ಖಾಸಗಿಯವರಿಗೆ ಕೊಡಲು ಸರ್ಕಾರಕ್ಕೆ ಯಾವ ನೈತಿಕ ಹಕ್ಕಿದೆ? ಇದು ಸಂಪೂರ್ಣವಾಗಿ ಜನಸಾಮಾನ್ಯರ ಹಿತಾಸಕ್ತಿಗೆ ವಿರುದ್ಧವಾಗಿದೆ. ರೈಲ್ವೆ ಕಾರ್ಮಿಕರಿಗೆ 1974 ರ ಮುಷ್ಕರದಂತಹ ಅಮೋಘ ಕಾರ್ಮಿಕ ಚಳುವಳಿಯ ಇತಿಹಾಸವಿದೆ. ರೈಲ್ವೆ ಮತ್ತು ಅದರ ಕಾರ್ಮಿಕರ ಭವಿಷ್ಯವನ್ನು ರಕ್ಷಿಸಬೇಕೆಂದರೆ, ಭಾರತೀಯ ರೈಲ್ವೆಯ ಖಾಸಗೀಕರಣವನ್ನು ನಿಲ್ಲಿಸಲು ಕಾರ್ಮಿಕರ ಮತ್ತು ಪ್ರಯಾಣಿಕರ ಒಗ್ಗಟ್ಟಿನ ಪ್ರಬಲವಾದ ದೀರ್ಘಕಾಲೀನ ಪ್ರಜ್ಞಾವಂತ ಚಳುವಳಿಯ ಅಗತ್ಯವಿದೆ.

## ಎಐಕೆಕೆಎಂಎಸ್- ಬಳ್ಳಾರಿ




26.06.2025: ಬಳ್ಳಾರಿ: ದೇವನಹಳ್ಳಿಯ ಬಲವಂತದ ಭೂಸ್ವಾಧೀನದ ವಿರುದ್ಧ ಸಂಯುಕ್ತ ಹೋರಾಟ ಕರ್ನಾಟಕ ಸಂಘಟಿಸಿದ್ದ ರೈತ ಹೋರಾಟದ ಸಂದರ್ಭದಲ್ಲಿ, ರೈತ ನಾಯಕರನ್ನು ಬಂಧಿಸಿದ ಸರ್ಕಾರದ ಕ್ರಮವನ್ನು ಖಂಡಿಸಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಎಐಕೆಕೆಎಂಎಸ್ ನೇತೃತ್ವದಲ್ಲಿ ಪ್ರತಿಭಟನೆ

## ಟ್ರಂಪ್‌ರವರ ಸುಂಕ ಯುದ್ಧ :

# ತೀವ್ರವಾಗುತ್ತಿರುವ ಬಂಡವಾಳಶಾಹಿ ವ್ಯವಸ್ಥೆಯ ಬಿಕ್ಕಟ್ಟನ್ನು ತಡೆಯಲು ವ್ಯರ್ಥ ಪ್ರಯತ್ನ!

"...ಬೂರ್ಜ್ವಾ ಆಡಳಿತಗಾರರು ಅಳವಡಿಸಿಕೊಂಡ ಎಲ್ಲಾ ಯೋಜನೆಗಳು ಪ್ರಗತಿಯಲ್ಲಿದ್ದರೂ... ಬಿಕ್ಕಟ್ಟಿನ ನೆರಳು ಈ ಎಲ್ಲಾ ಯೋಜನೆಗಳನ್ನು ಸಾರ್ವಕಾಲಿಕವಾಗಿ ಹಿಂಬಾಲಿಸುತ್ತಿರುತ್ತದೆ. ಅವರು ಒಂದು ಬಿಕ್ಕಟ್ಟಿನಿಂದ ಹೊರಬರುತ್ತಿರುವುದು ಇನ್ನೂ ಹೆಚ್ಚು ಸಂಕೀರ್ಣ ಮತ್ತು ಆಳವಾದ ಬಿಕ್ಕಟ್ಟಿಗೆ ಮುಳುಗಲು. ಇಂದಿಗೂ ತೀವ್ರ ಆರ್ಥಿಕ ಹಿಂಜರಿತದ ಬೆದರಿಕೆಯಿಂದ ತಮ್ಮನ್ನು ತಾವು ಪಾರುಮಾಡಿಕೊಳ್ಳಲು ವಿವಿಧ ದಾರಿಗಳು ಮತ್ತು ಸಾಧನಗಳನ್ನು ಬೂರ್ಜ್ವಾ ಆಳ್ವಿಕರು ಯೋಚಿಸುತ್ತಿದ್ದಾರೆ... ಅವರು ಪ್ರಸ್ತುತ ಆರ್ಥಿಕ ಹಿಂಜರಿತದಿಂದ ಹೊರಬರುವುದು, ಮತ್ತೊಂದು ತೀವ್ರವಾದ ಹಿಂಜರಿತದಲ್ಲಿ ಮುಳುಗುವ ಭೂಮಿಕೆಯನ್ನು ಸಿದ್ಧಪಡಿಸಿಕೊಳ್ಳಲು..... ಬಂಡವಾಳಶಾಹಿಗೆ ಇಂದು ಈ ಬಿಕ್ಕಟ್ಟಿನಿಂದ ಹೊರಬರಲು ಯಾವುದೇ ಮಾರ್ಗವಿಲ್ಲ." ಎಂದು ಈ ಯುಗದ ಓರ್ವ ಮಹಾನ್ ಮಾರ್ಕ್ಸ್‌ವಾದಿ ಚಿಂತಕರೂ, ನಮ್ಮ ಪಕ್ಷದ ಸಂಸ್ಥಾಪಕರೂ ಆದ ಕಾಮ್ರೇಡ್ ಶಿವದಾಸ್ ಘೋಷ್‌ರವರು ನುಡಿದಿದ್ದರು. ಅಮೆರಿಕದ ಸುಂಕ ಯುದ್ಧ, ಈ ಮಾತುಗಳನ್ನು ಮತ್ತೊಮ್ಮೆ ರುಜುವಾತು ಪಡಿಸುತ್ತದೆ.

ಸೋವಿಯತ್ ಸಮಾಜವಾದದ ದುಃಖಕರ ಪತನದ ನಂತರ ಉತ್ಸಾಹಗೊಂಡ ವಿಶ್ವ ಸಾಮ್ರಾಜ್ಯಶಾಹಿ – ಬಂಡವಾಳಶಾಹಿ ಬಣವು 'ಬಂಡವಾಳಶಾಹಿ ಜಾಗತೀಕರಣದ' ಸಿದ್ಧಾಂತವನ್ನು ತಂದಿತು. ಯಾವುದೇ ವ್ಯಾಪಾರಿ ಅಡೆತಡೆಗಳಿಲ್ಲದ 'ಮುಕ್ತ ಮಾರುಕಟ್ಟೆ ಆರ್ಥಿಕತೆ'ಯ ಹೊಸ ಯುಗದ ಅರುಣೋದಯವಿದು ಎಂದು ಘೋಷಿಸಲಾಯಿತು. ಇದು ಸಮಾನವಾದ ಸಮೃದ್ಧ ಸಮಾಜವನ್ನು ಒಳಗೊಂಡಿರುತ್ತದೆ ಎಂದು ಹೇಳಲಾಯಿತು. ವಿವಿಧ ದೇಶಗಳ ನಡುವೆ ಬಂಡವಾಳ, ಸರಕುಗಳು, ಸೇವೆಗಳು, ಮಾಹಿತಿ ಮತ್ತು ಕಲ್ಪನೆಗಳ ಮುಕ್ತ ಹರಿವನ್ನು ಜಾಗತೀಕರಣ ಪ್ರತಿಪಾದಿಸಿತು. ದೇಶಗಳ ನಡುವಿನ ಪರಸ್ಪರ ಸಂಪರ್ಕ ಮತ್ತು ಪರಸ್ಪರ ಅವಲಂಬನೆಯನ್ನು ಜಾಗತೀಕರಣದ ನಿಯಮಗಳು ಹೆಚ್ಚಿಸುತ್ತವೆ ಎಂದು ಘಂಟಾಘೋಷವಾಗಿ ಹೇಳಲಾಯಿತು. ಸುಂಕದ ಗೋಡೆಗಳನ್ನು ಕೆಡವುದರೊಂದಿಗೆ ಮುಕ್ತ ಮಾರುಕಟ್ಟೆ ಆರ್ಥಿಕತೆಯ ಬಗ್ಗೆ ಸಾಮ್ರಾಜ್ಯಶಾಹಿಗಳು ಮಾತನಾಡಿದರು. ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ವಿಶ್ವ ವಾಣಿಜ್ಯ ಸಂಸ್ಥೆಯನ್ನು (ಡಬ್ಲ್ಯೂಟಿಓ) ಹುಟ್ಟು ಹಾಕಲಾಯಿತು.

ಆದರೆ ಅವನತಿ ಹೊಂದುತ್ತಿರುವ, ಮತ್ತು ತೀವ್ರ ಬಿಕ್ಕಟ್ಟು ಪೀಡಿತ ಬಂಡವಾಳಶಾಹಿ ಆರ್ಥಿಕತೆಯ ಪ್ರಸ್ತುತ ಹಂತದಲ್ಲಿ 'ಮುಕ್ತ ಮಾರುಕಟ್ಟೆ ಆರ್ಥಿಕತೆ' ಎಂಬುದು ಯಾವುದೇ ಅರ್ಥದಲ್ಲಿ ಮುಕ್ತವಾಗಿಲ್ಲ. ಹೆಚ್ಚುತ್ತಿರುವ ಆರ್ಥಿಕ ಬಿಕ್ಕಟ್ಟನ್ನು ನಿವಾರಿಸುವ ಬದಲು, ಬಂಡವಾಳಶಾಹಿ–ಸಾಮ್ರಾಜ್ಯಶಾಹಿ ಆರ್ಥಿಕತೆಯು, ಆರ್ಥಿಕ ಬಿಕ್ಕಟ್ಟನ್ನು ಜಾಗತಿಕಗೊಳಿಸಿದೆ. ಬಹುತೇಕ ದೇಶಗಳು ತೀವ್ರವಾದ ಬಿಕ್ಕಟ್ಟಿನಲ್ಲಿ ಮುಳುಗಿ ಹೋಗಿವೆ. ಅಂದರೆ, ಮುಕ್ತ ಆರ್ಥಿಕತೆ ಎಂದು ಬಿಂಬಿಸಲಾದ ಗುಳ್ಳೆ ಒಡೆಯಲು ಹೆಚ್ಚು ಸಮಯ ತೆಗೆದುಕೊಳ್ಳಲಿಲ್ಲ. "ಅಮೆರಿಕವನ್ನು ಮತ್ತೆ ಶ್ರೇಷ್ಠವಾಗಿಸುವ" ನೆಪದಲ್ಲಿ ಇದೀಗ, ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಚೀನಾ, ಕೆನಡಾ, ಮೆಕ್ಸಿಕೊ ಮತ್ತು ಯುರೋಪಿಯನ್ ಒಕ್ಕೂಟದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಹೆಚ್ಚಿನ ಸುಂಕವನ್ನು ವಿಧಿಸುವ ನಿರ್ಧಾರವನ್ನು ಪ್ರಕಟಿಸಿದ್ದಾರೆ.

### ಪ್ರಸ್ತುತ ಸಂದರ್ಭ ಮತ್ತು ವಿಶ್ವ ವಾಣಿಜ್ಯ ಸಂಸ್ಥೆ

ವಿಶ್ವ ವಾಣಿಜ್ಯ ಸಂಸ್ಥೆ ಈಗ ಹಲ್ಲು ಕಿತ್ತ ಹಾವಿನಂತಾಗಿದೆ. ಏಕೆಂದರೆ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಯಾವುದೇ ವಿವಾದ–ಪರಿಹಾರದ ಕುರಿತು ಡಬ್ಲ್ಯೂಟಿಓ ಸೂಚನೆಗಳನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಿವೆ. ಉದಾಹರಣೆಗೆ, ಕೃಷಿ ಸರಕುಗಳ ವ್ಯಾಪಾರದ ಮೇಲಿನ ಹೊಸ ನಿಯಮಗಳು ವಿವಾದದ ಮೂಲವಾಗಿ ಉಳಿದಿವೆ. ಎರಡನೆಯದಾಗಿ, ಜಾಗತಿಕ ಉತ್ಪಾದನೆಯಲ್ಲಿ ಎಲ್ಲಾ ಮಟ್ಟಗಳಲ್ಲೂ ಮೇಲೇರಿದ ಚೀನಾ, ನಾವೀನ್ಯತೆಯಲ್ಲಿ ಅಮೇರಿಕಾವನ್ನು ಮೀರಿಸಿ, ತನ್ನ ಜಾಗತಿಕ ಮಾರುಕಟ್ಟೆ ಮತ್ತು ರಫ್ತುಗಳನ್ನು ವೇಗವಾಗಿ ವಿಸ್ತರಿಸುತ್ತಿದೆ. ಜೊತೆಗೆ ಈಗ ಜಾಗತಿಕ ವ್ಯಾಪಾರದಲ್ಲಿ ಅಮೇರಿಕಾ ಸಾಮ್ರಾಜ್ಯಶಾಹಿಗೆ ಗಂಭೀರ ಬೆದರಿಕೆಯನ್ನು ಒಡ್ಡುತ್ತಿದೆ. ಮತ್ತೊಂದೆಡೆ, ಚೀನಾದಲ್ಲಿ, ಕಾರ್ಮಿಕರ ಶ್ರಮವೂ ತುಂಬಾ ಅಗ್ಗವಾಗಿ ದೊರೆಯುವುದರಿಂದ, ಉದ್ಯೋಗಗಳನ್ನು ಹೊರಗುತ್ತಿಗೆಗೆ ನೀಡಲು ಕೈಗಾರಿಕೆಗಳನ್ನು ಸ್ಥಾಪಿಸಲು ಅದು ಹೆಚ್ಚು ಬೇಡಿಕೆಯಿರುವ ತಾಣವಾಗಿದೆ. ಅಂಕಿ ಅಂಶಗಳ ಪ್ರಕಾರ ಅಮೇರಿಕಾದಿಂದ ಚೀನಾಗೆ ಆಗುವ ಸರಕಿನ ಆಮದು 14350 ಕೋಟಿ ಡಾಲರ್‌ಗಳಾದರೆ, ಚೀನಾದಿಂದ ಅಮೇರಿಕಾಗೆ ಆಗುವ ಸರಕಿನ ರಫ್ತು 43890 ಕೋಟಿ ಡಾಲರ್. ಇದರ ಫಲಿತಾಂಶವೆಂದರೆ ಕಳೆದ ವರ್ಷ ಚೀನಾದೊಂದಿಗಿನ ಅಮೆರಿಕದ ವ್ಯಾಪಾರ ಕೊರತೆಯ ಮೌಲ್ಯ 29,540 ಕೋಟಿ ಡಾಲರ್ ಆಗಿತ್ತು. ಅಮೆರಿಕದ ದೇಶೀಯ ಮಾರುಕಟ್ಟೆ ಅಗತ್ಯಗಳ ಸುಮಾರು 33% ರಷ್ಟನ್ನು ಚೀನಾದ ಆಮದುಗಳು ಪೂರೈಸುತ್ತಿವೆ ಎಂದು ವರದಿಯಾಗಿದೆ. ಇದಲ್ಲದೇ ಅಮೆರಿಕಾ, ಮೆಕ್ಸಿಕೊ ಮತ್ತು ಕೆನಡಾ ಬಲವಾದ ಆರ್ಥಿಕ ಸಂಬಂಧವನ್ನು ಹೊಂದಿದ್ದರೂ, ಅಮೆರಿಕ ನಿವ್ವಳ ನಷ್ಟ ಅನುಭವಿಸುತ್ತಿದೆ. ಈ ಹಿನ್ನೆಲೆಯಲ್ಲಿ ಅಮೆರಿಕಾ ಅಧ್ಯಕ್ಷ ಟ್ರಂಪ್ ಮೆಕ್ಸಿಕೊ ಮತ್ತು ಕೆನಡಾ ಎರಡರ ರಫ್ತುಗಳ ಮೇಲೆ 25% ತೆರಿಗೆಯನ್ನು ವಿಧಿಸಿದ್ದಾರೆ; ಮತ್ತು ಕೆನಡಾದ ಇಂಧನದ ಮೇಲೆ ಹೆಚ್ಚುವರಿ 10% ಸುಂಕವನ್ನು ವಿಧಿಸಿದ್ದಾರೆ. ಜೊತೆಗೆ ಟ್ರಂಪ್ ಚೀನಾದ ಸರಕುಗಳ ಮೇಲೆ ಆಮದು ಸುಂಕವನ್ನು 145% ವರೆಗೆ ಹೆಚ್ಚಿಸುವುದಾಗಿಯೂ ಘೋಷಿಸಿದ್ದಾರೆ. ಸುಮಾರು 60 ದೇಶಗಳಿಂದ ಆಮದುಗಳ ಮೇಲಿನ ಸುಂಕವನ್ನು ಅಮೆರಿಕಾ ಹೆಚ್ಚಿಸಿದೆ. ಜಾಗತಿಕ ಹಣಕಾಸಿನಲ್ಲಿ ಅಮೆರಿಕಾದ ಡಾಲರ್‌ನ ಪ್ರಬಲ ಪಾತ್ರವನ್ನು ಕಡಿಮೆ ಮಾಡಲು ಪ್ರಯತ್ನಿಸುವ ಬ್ರಿಕ್ಸ್ (ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ) ದೇಶಗಳ ಮೇಲೆ 100% ಸುಂಕಗಳನ್ನು ವಿಧಿಸುವುದಾಗಿ ಟ್ರಂಪ್ ಪದೇ ಪದೇ ಪುನರುಚ್ಚರಿಸಿದ್ದಾರೆ. ಅವರು ಫ್ರಾನ್ಸ್ ಮತ್ತು ಇತರ ಯುರೋಪಿಯನ್ ಯೂನಿಯನ್ (EU) ದೇಶಗಳಿಂದ ಆಮದು ಮಾಡಿಕೊಳ್ಳುವ ಪಾನೀಯಗಳ ಮೇಲೆ 200% ಸುಂಕವನ್ನು ವಿಧಿಸುವ ಬೆದರಿಕೆಯನ್ನೂ ಹಾಕಿದ್ದಾರೆ. ಈ ಪರಿಸ್ಥಿತಿಯನ್ನು ನಿಭಾಯಿಸಲು ವಿಶ್ವ ವಾಣಿಜ್ಯ ಸಂಸ್ಥೆ ಸೋತಿದೆ.

### ಇತರರಿಂದ ಪ್ರತೀಕಾರದ ಕ್ರಮ

ನಿರೀಕ್ಷೆಯಂತೆ, ಚೀನಾ ಮತ್ತು ಅನೇಕ ಯುರೋಪಿಯನ್ ದೇಶಗಳು ಅಮೆರಿಕಾದ ಸರಕುಗಳ ಆಮದಿನ ಮೇಲೆ ಸುಂಕವನ್ನು ಹೆಚ್ಚಿಸುವ ಮೂಲಕ ಪ್ರತೀಕಾರ ತೀರಿಸಿಕೊಂಡಿವೆ. ಚೀನಾ ಅಮೆರಿಕದ ಉತ್ಪನ್ನಗಳ ಮೇಲೆ ಸುಂಕವನ್ನು 84% ಕ್ಕೆ ಹೆಚ್ಚಿಸುವ ಬೆದರಿಕೆ ಹಾಕಿದೆ. ಅಲ್ಲದೆ, ಅಮೆರಿಕಾದ ಕೃಷಿ ಉತ್ಪನ್ನಗಳ ಅತಿದೊಡ್ಡ ಖರೀದಿದಾರನಾಗಿದ್ದ ಚೀನಾ, ಅದರ ಮೇಲೆ 10–15% ತೆರಿಗೆಯನ್ನು ಘೋಷಿಸಿದೆ. ಕೆನಡಾ ಕೂಡ 3,000 ಕೋಟಿ ಡಾಲರ್ ಮೌಲ್ಯದ ಅಮೆರಿಕಾ ಸರಕುಗಳ ಮೇಲೆ ಪ್ರತೀಕಾರವಾಗಿ 25% ಸುಂಕ ವಿಧಿಸಿತು. ಮೆಕ್ಸಿಕೊ ಕೂಡ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಪ್ರತಿಜ್ಞೆ ಮಾಡಿದೆ. ಯುರೋಪಿಯನ್ ಕಮಿಷನ್, EU ದೇಶಗಳಿಂದ ಉಕ್ಕು ಮತ್ತು ಅಲ್ಯೂಮಿನಿಯಂ ಮೇಲಿನ ಅಮೆರಿಕಾದ 25% ಸುಂಕಗಳಿಗೆ ಪ್ರತಿಕ್ರಿಯೆಯಾಗಿ ಅಮೆರಿಕನ್ ವಿಸ್ಕಿಯ ಮೇಲೆ 50% ಸುಂಕವನ್ನು ವಿಧಿಸಲು ನಿರ್ಧರಿಸಿದೆ ಮತ್ತು ವಿವಿಧ ಸರಕುಗಳ ಮೇಲೆ 2800 ಕೋಟಿ ಡಾಲರ್ ಮೌಲ್ಯದ ಪ್ರತಿ–ಸುಂಕಗಳನ್ನು ಜಾರಿಗೊಳಿಸಲು ಯೋಜಿಸಿದೆ. ಆದ್ದರಿಂದ, 'ಮುಕ್ತ ಮಾರುಕಟ್ಟೆ' ಎಂಬ ಮೋಡಿಮಾಡುವ ಪದ ಮತ್ತು "WTO ಮೂಲಕ ವಿವಾದಗಳ ಸೌಹಾರ್ದಯುತ ಇತ್ಯರ್ಥ" ಎಂಬುದು ನಿಷ್ಪ್ರಯೋಜಕವೆಂದು ಸಾಬೀತಾಗಿದೆ.

### ಟ್ರಂಪ್‌ರ ಸುಂಕ ವಿರಾಮ

ಅಮೆರಿಕದ ಅಧ್ಯಕ್ಷರ ಈ ಸುಂಕ ಹೇರಿಕೆಯ ಬೆದರಿಕೆಯು ಜಾಗತಿಕ ಮಾರುಕಟ್ಟೆಯಲ್ಲಿನ ತನ್ನ ಸ್ಪರ್ಧಿಗಳೊಂದಿಗೆ ಚೌಕಾಶಿ ಮಾಡಲು ಮತ್ತು ಮಾತುಕತೆಗೆ ಅವರನ್ನು ಒಪ್ಪಿಸಲು ಒಂದು ತಂತ್ರವಾಗಿದೆ. ಹೀಗಾಗಿ, ಆಡಳಿತಾರೂಢ ಅಮೆರಿಕದ ಬಹುರಾಷ್ಟ್ರೀಯ ಕಂಪನಿಗಳ ನಿರ್ದೇಶನದ ಮೇರೆಗೆ, ಟ್ರಂಪ್ ಇತರ ದೇಶಗಳ ಸರಕುಗಳ ಮೇಲಿನ ಸುಂಕ ಏರಿಕೆಯನ್ನು 90 ದಿನಗಳವರೆಗೆ ಮುಂದೂಡಿದ್ದಾರೆ ಮತ್ತು ವಿಶೇಷವಾಗಿ ಚೀನಾ ಮುಂದೆ ಯಾವ ಕ್ರಮ ಕೈಗೊಳ್ಳುತ್ತದೆ ಎಂಬುದನ್ನು ಕಾದು ನೋಡುತ್ತಿದ್ದಾರೆ.

### ಭಾರತದ ಅಂಜುಬುರಕತನ!

ಅನೇಕ ದೇಶಗಳು ಅಮೆರಿಕದ ಸರಕುಗಳ ಮೇಲೆ ಆಮದು ಸುಂಕವನ್ನು ಹೆಚ್ಚಿಸುವ ಮೂಲಕ ಪ್ರತೀಕಾರ ತೀರಿಸಿಕೊಳ್ಳುತ್ತಿರುವಾಗ, ಭಾರತವು ಆಟೋಮೊಬೈಲ್ ಮತ್ತು ಕೃಷಿಯಂತಹ ತನ್ನ ಪ್ರಮುಖ ವಲಯಗಳ ಮೇಲೆ ಹೆಚ್ಚಿನ ಸುಂಕವನ್ನು ವಿಧಿಸುವ ಅಮೆರಿಕಾದ ಆಕ್ರಮಣಕಾರಿ ಘೋಷಣೆಗೆ ಮಣಿದು, ಅಲ್ಲಿಯ ಆಮದುಗಳ ಮೇಲಿನ ಸುಂಕವನ್ನು ಕಡಿಮೆ ಮಾಡುತ್ತಿದೆ. ಕಳೆದ ಬಜೆಟ್‌ನಲ್ಲಿಯೂ ಸಹ ಭಾರತವು ಅಮೆರಿಕಾದಿಂದ ಆಮದಾಗುವ ಸರಕುಗಳ ಮೇಲಿನ ಕಸ್ಟಮ್ಸ್ ಸುಂಕವನ್ನು ಕಡಿಮೆ ಮಾಡಲು ಪ್ರಸ್ತಾಪಿಸಿತ್ತು. ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರು, ಈಗ ಇನ್ನೂ ಎರಡು ಹೆಜ್ಜೆ ಮುಂದೆ ಹೋಗಿ, "ಚೀನಾ ಮತ್ತು ಇತರ ದೇಶಗಳಿಂದ ಆಮದು ಮಾಡಿಕೊಳ್ಳುವ ಸರಕುಗಳಿಗೆ ಪರ್ಯಾಯವಾಗಿ ಅಮೆರಿಕನ್ ಸರಕುಗಳೊಂದಿಗೆ ಬದಲಾಯಿಸಬಹುದಾದ ವಲಯಗಳನ್ನು ಗುರುತಿಸಲು" ದೇಶೀಯ ಕೈಗಾರಿಕೆಗಳಿಗೆ ಕೇಳಿದ್ದಾರೆ. ವಾಸ್ತವವಾಗಿ, ಭಾರತದ ಆಮದುಗಳ ಮೇಲೆ ಭಾರಿ ಸುಂಕವನ್ನು ವಿಧಿಸದಿರುವಂತೆ ಅಮೆರಿಕದ ಆಡಳಿತವನ್ನು ಮನವೊಲಿಸಲು ಭಾರತ ಸರ್ಕಾರವು ಗಂಭೀರವಾದ ಮಾತುಕತೆಗಳನ್ನು ನಡೆಸುತ್ತಿದೆ. ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ಹೋವರ್ಡ್ ಲಟ್ನಿಕ್, ಅಮೆರಿಕನ್ ಸರಕುಗಳ ಮೇಲಿನ ಸುಂಕವನ್ನು ಕಡಿಮೆ ಮಾಡಲು ಮತ್ತು ರಕ್ಷಣಾ ಸಾಮಗ್ರಿಗಳನ್ನು ರಷ್ಯಾದ ಬದಲಿಗೆ ಅಮೆರಿಕದಿಂದ ಖರೀದಿಸಲು ಭಾರತವನ್ನು ಬಹಿರಂಗವಾಗಿ ಕೇಳಿದ್ದಾರೆ. ವರದಿಗಳ ಪ್ರಕಾರ, ಕೃಷಿ ಉತ್ಪನ್ನಗಳು ಸೇರಿದಂತೆ ಬಹುತೇಕ ಎಲ್ಲಾ ಸರಕುಗಳ ಮೇಲಿನ ಸುಂಕವನ್ನು ತೆಗೆದುಹಾಕಲು ಅಮೆರಿಕ ಭಾರತವನ್ನು ಕೇಳಿದೆ. ಅಮೆರಿಕದ ಕೃಷಿ ಉತ್ಪನ್ನಗಳನ್ನು ಭಾರತದ ಮೇಲೆ ಹೇರಲು ಅಮೆರಿಕ ಯಶಸ್ವಿಯಾದರೆ, ಅದು ಭಾರತದ ರೈತರಿಗೆ ವಿನಾಶವನ್ನು ಉಂಟುಮಾಡುತ್ತದೆ ಮತ್ತು ಜನರ ಆಹಾರ ಭದ್ರತೆಯ ಮೇಲೆ ವಿನಾಶಕಾರಿ ಪರಿಣಾಮ ಬೀರುತ್ತದೆ. ಡಬ್ಲ್ಯೂಟಿಓ ವೇದಿಕೆಯಲ್ಲೂ ಸಹ, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಕೊನೆಗೊಳಿಸಲು, ಇಂಧನ ಮತ್ತು ರಸಗೊಬ್ಬರಗಳ ಮೇಲಿನ ಎಲ್ಲಾ ಸಬ್ಸಿಡಿಗಳನ್ನು ಹಿಂತೆಗೆದುಕೊಳ್ಳಲು ಮತ್ತು ಪೇಟೆಂಟ್ ಕಾನೂನನ್ನು ಬದಲಾಯಿಸುವಂತೆ ಅಮೆರಿಕ ಭಾರತದ ಮೇಲೆ ದೀರ್ಘಕಾಲದಿಂದ ಒತ್ತಡ ಹೇರುತ್ತಿದೆ ಎಂಬುದು ತಿಳಿದುಬಂದಿದೆ. ಅಂತಹ ಷರತ್ತುಗಳನ್ನು ಒಪ್ಪಿಕೊಂಡರೆ, ಭಾರತವು ತನ್ನ ವ್ಯಾಪಾರದ ರಕ್ಷಣೆಯನ್ನು ಬಿಟ್ಟುಕೊಟ್ಟಂತೆ ಆಗುತ್ತದೆ ಮತ್ತು ಇದಕ್ಕೆ ಪ್ರತಿಯಾಗಿ ಅದಕ್ಕೆ ಯಾವುದೇ ರಿಯಾಯಿತಿ ಸಿಗುವುದಿಲ್ಲ. ಆದರೆ ಭಾರತದ ಆಳ್ವಿಕ ಬಂಡವಾಳಶಾಹಿ ವರ್ಗವು ಜಾಗತಿಕ ಮಹಾಶಕ್ತಿಯಾಗಲು ಹಂಬಲಿಸುತ್ತಿರುವುದರಿಂದ, ಅಮೆರಿಕವನ್ನು ವಿರೋಧಿಸಲು ಸಾಧ್ಯವಾಗದ ಒಂದು ರೀತಿಯ ಒತ್ತಡ ಭಾರತ ಸರ್ಕಾರದ ಮೇಲಿದೆ.

ಮತ್ತೊಂದೆಡೆ, ಚೀನಾವನ್ನು ನಿಯಂತ್ರಿಸಲು ಅಮೆರಿಕಕ್ಕೆ ಭಾರತವು ಮಿತ್ರರಾಷ್ಟ್ರವಾಗಿ ಬೇಕಾಗಿದೆ. ಹಾಗಾಗಿಯೇ ಈ 'ತಥಾಕಥಿತ ತಂತ್ರ'. ಆದರೆ ಅಮೆರಿಕದ ಒತ್ತಡಕ್ಕೆ ಭಾರತವು ಎಷ್ಟರಮಟ್ಟಿಗೆ ಶರಣಾಗಿದೆ ಎಂದರೆ, ಅಮೆರಿಕಾದಲ್ಲಿರುವ ಅಕ್ರಮ ಭಾರತೀಯ ವಲಸಿಗರನ್ನು ಕೈಕೋಳ ಹಾಕಿ ಅಮೆರಿಕದಿಂದ ವಾಪಸ್ ಕಳುಹಿಸಿದಾಗ ಬಿಜೆಪಿ ಸರ್ಕಾರದಿಂದ ಒಂದೇ ಒಂದು ಪ್ರತಿಭಟನೆಯ ಶಬ್ದವೂ ಹೊರಬರಲಿಲ್ಲ. ಮೆಕ್ಸಿಕೋ ಕೂಡ ತನ್ನ ವಲಸಿಗರನ್ನು ಗಡೀಪಾರು ಮಾಡುವ ಅಮೆರಿಕದ ಮಿಲಿಟರಿ ವಿಮಾನವನ್ನು ದೇಶದಲ್ಲಿ ಇಳಿಯಲು ಅನುಮತಿಯನ್ನು ನಿರಾಕರಿಸುವ ಧೈರ್ಯವನ್ನು ಹೊಂದಿತ್ತು!

### ಟ್ರಂಪ್‌ರ ತಪ್ಪಾದ ತರ್ಕ

ಅಧ್ಯಕ್ಷ ಟ್ರಂಪ್ ಅವರ ಸುಂಕದ ಗೋಡೆ ನೀತಿಯು ಅಮೆರಿಕದ ಸುಂಕದ ಆದಾಯವನ್ನು ಸುಮಾರು $300 ಶತಕೋಟಿಯಷ್ಟು ಹೆಚ್ಚಿಸುತ್ತದೆ ಎಂದು ಹೇಳುತ್ತಾರೆ. ಆದರೆ 2 ದಶಲಕ್ಷ ಸರ್ಕಾರಿ ನೌಕರರು ಸೇರಿದಂತೆ ಭಾರಿ ಪ್ರಮಾಣದ ಉದ್ಯೋಗ ಕಡಿತದಿಂದ ಉಲ್ಬಣಗೊಂಡಿರುವ ಬೆಲೆ ಏರಿಕೆಯಿಂದಾಗಿ ಅಮೆರಿಕದ ನಾಗರಿಕರ ಆದಾಯ ಕುಸಿಯುತ್ತಿದೆ. 34 ದಶಲಕ್ಷ ಅಮೆರಿಕನ್ನರು ಹಸಿವಿನಿಂದ ಬಳಲುತ್ತಿದ್ದಾರೆ ಮತ್ತು 36.8 ದಶಲಕ್ಷ ಜನರು ಬಡತನ ರೇಖೆಯಲ್ಲಿದ್ದಾರೆ. ಆದ್ದರಿಂದ ಅಮೆರಿಕದ ನಾಗರಿಕರ ಕೊಳ್ಳುವ ಶಕ್ತಿ ವೇಗವಾಗಿ ಕುಸಿಯುತ್ತಿದೆ. ಹೀಗಾಗಿ, ಅಮೆರಿಕ ಮತ್ತಷ್ಟು ಆರ್ಥಿಕ ಹಿಂಜರಿತದ ಪರಿಸ್ಥಿತಿಗೆ ತಳ್ಳಲ್ಪಡುತ್ತದೆ.

ಇತರ ಎಲ್ಲಾ ಸಾಮ್ರಾಜ್ಯಶಾಹಿ–ಬಂಡವಾಳಶಾಹಿ ದೇಶಗಳಂತೆ ನಿರಂತರವಾಗಿ ಬಡತನಕ್ಕೀಡಾಗುತ್ತಿರುವ ಅಮೆರಿಕದ ನಾಗರಿಕರ ಕೊಳ್ಳುವ ಶಕ್ತಿಯು ಸ್ಥಿರವಾಗಿರಲು ಸಾಧ್ಯವೇ? ಹಾಗಿದ್ದಲ್ಲಿ, ಬೇಡಿಕೆ ಸ್ಥಿರವಾಗಿರುತ್ತದೆ ಎಂದು ಹೇಗೆ ಊಹಿಸಬಹುದು? ಇದಲ್ಲದೆ, ಸುಂಕದ ಹೊಡೆತದಿಂದ ನಲುಗುವ ದೇಶಗಳಿಂದ ಆಮದುಗಳ ಬೇಡಿಕೆ ಕಡಿಮೆಯಾಗುವ ಸಾಧ್ಯತೆಯಿದೆ, ಏಕೆಂದರೆ ಅಮೆರಿಕದ ಉತ್ಪಾದಕರು ಸುಂಕ ರಹಿತ ದೇಶಗಳಿಂದ ಕಚ್ಚಾ ವಸ್ತುಗಳನ್ನು ಪಡೆಯಲು ಪ್ರಯತ್ನಿಸುತ್ತಾರೆ. ಇದಲ್ಲದೆ, ಅಮೆರಿಕವು ದೇಶೀಯವಾಗಿ ಉತ್ಪಾದಿಸುವುದಕ್ಕಿಂತ ಹೆಚ್ಚಿನ ಸರಕುಗಳನ್ನು ಬಳಸುತ್ತದೆ. ಇದರ ಪರಿಣಾಮವಾಗಿ, ಅದರ ಆಮದುಗಳು ಯಾವಾಗಲೂ ಅದರ ರಫ್ತುಗಳಿಗಿಂತ ಹೆಚ್ಚಾಗಿರುತ್ತವೆ, ಇದು ವ್ಯಾಪಾರ ಕೊರತೆಗೆ ಕಾರಣವಾಗುತ್ತದೆ.

ಎರಡನೆಯದಾಗಿ, ಆಮದುಗಳನ್ನು ತಡೆಯುವುದರಿಂದ ದೇಶೀಯ ಉತ್ಪಾದನೆ ತಾನಾಗಿಯೇ ಹೆಚ್ಚಾಗುವುದಿಲ್ಲ. ಅಮೆರಿಕದ ಕಂಪನಿಗಳು ದೇಶೀಯ ಬೇಡಿಕೆಯನ್ನು ತಕ್ಷಣವೇ ಪೂರೈಸಲು ಸಜ್ಜಾಗಿಲ್ಲ. ತಮ್ಮ ಉತ್ಪನ್ನಗಳನ್ನು ತಯಾರಿಸಲು ಅಗ್ಗದ ಆಮದು ಮಾಡಿದ ಕಚ್ಚಾ ವಸ್ತುಗಳನ್ನು ಅವಲಂಬಿಸಿರುವ ಉದ್ದಿಮೆಗಳು ಹೆಚ್ಚುವರಿ ಆಮದು ಸುಂಕದ ಹೊರೆಯನ್ನು ಅಂತಿಮವಾಗಿ ಗ್ರಾಹಕರಿಗೆ ವರ್ಗಾಯಿಸುತ್ತವೆ. ಚೀನಾದ ಮೇಲೆ ಹೆಚ್ಚುವರಿ ಸುಂಕಗಳನ್ನು ವಿಧಿಸುವುದರಿಂದ ಕಂಪ್ಯೂಟರ್ ಮತ್ತು ಎಲೆಕ್ಟ್ರಾನಿಕ್ಸ್ ಘಟಕಗಳ ಉತ್ಪಾದನಾ ವೆಚ್ಚ ಏರಿಕೆಯಾಗುತ್ತದೆ. ಅದರೊಂದಿಗೆ ಬೆಲೆಯಲ್ಲಿ ಹೆಚ್ಚಳವಾಗುತ್ತದೆ.

ಇದರರ್ಥ, ಟ್ರಂಪ್ 9ನೇ ಪುಟಕ್ಕೆ...

2025, ಜೂನ್ 1ರಿಂದ 13: ಜಿನೀವಾ, ಸ್ವಿಜರ್‌ಲ್ಯಾಂಡ್:

# ಐಎಲ್‌ಓ ಸಮ್ಮೇಳನದಲ್ಲಿ ಎಐಯುಟಿಯುಸಿ

## ಪ್ಲಾಟ್‌ಫಾರ್ಮ್ ಆರ್ಥಿಕತೆಯಲ್ಲಿ ನ್ಯಾಯಬದ್ಧ ಕೆಲಸದ ಕುರಿತಾದ ಒಡಂಬಡಿಕೆ ಅಂಗೀಕಾರ!

ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಓ), ಸರ್ಕಾರಗಳು, ಮಾಲೀಕರು ಮತ್ತು ಕಾರ್ಮಿಕ ಸಂಘಟನೆಗಳನ್ನು ಹೊಂದಿರುವ, ಅತ್ಯುನ್ನತ ತ್ರಿಪಕ್ಷೀಯ ಸಲಹೆಗಾರ ಸಂಸ್ಥೆಯಾಗಿದ್ದು, ಅದರ ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನದ 113ನೇ ಅಧಿವೇಶನದಲ್ಲಿ ನಮ್ಮ ಕಾರ್ಮಿಕ ಸಂಘಟನೆ, ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್(ಎಐಯುಟಿಯುಸಿ)ನ ಅಖಿಲ ಭಾರತ ಉಪಾಧ್ಯಕ್ಷರೂ, ಕರ್ನಾಟಕ ರಾಜ್ಯಾಧ್ಯಕ್ಷರೂ ಆಗಿರುವ ಕಾ. ಕೆ. ಸೋಮಶೇಖರ್ ಭಾಗವಹಿಸಿದ್ದರು. 2025ರ ಜೂನ್ 1ರಿಂದ 13ರ ತನಕ ಸ್ವಿಜರ್‌ಲ್ಯಾಂಡ್‌ನ ಜಿನೀವಾದಲ್ಲಿ ನಡೆದ ಈ 113 ನೇ ಅಧಿವೇಶನದಲ್ಲಿ ಇತರ ಕೇಂದ್ರ ಕಾರ್ಮಿಕ ಸಂಘಟನೆಗಳಾದ ಬಿಎಂಎಸ್, ಎಐಟಿಯುಸಿ, ಎಚ್‌ಎಂಎಸ್, ಸಿಐಟಿಯು, ಸೇವಾ, ಟಿಯುಸಿಸಿ(ಎಸ್‌ಪಿ ತಿವಾರಿ ಬಣ), ಎನ್‌ಎಫ್‌ಟಿಯು(ಡಿಎಚ್‌ಎನ್) ಗಳ ಪ್ರತಿನಿಧಿಗಳೂ ಪಾಲ್ಗೊಂಡಿದ್ದರು. 189 ದೇಶಗಳಿಂದ 5000 ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಮಿಕವರ್ಗಕ್ಕೆ ಸಂಬಂಧಿಸಿದ ಹಲವಾರು ವಿಷಯಗಳ ಬಗ್ಗೆ ಚರ್ಚೆಗಳು ನಡೆದವು.

ಯಾವುದೇ ಸೇವಾ ಭದ್ರತೆಯಾಗಲೀ, ಉದ್ಯೋಗದ ಭದ್ರತೆಯಾಗಲೀ, ವಿಮಾ ಸೌಲಭ್ಯಗಳಾಗಲೀ ಇಲ್ಲದೆ, ಸರಿಯಾದ ವೇತನದಿಂದಲೂ ವಂಚಿತರಾಗಿ ದುಡಿಯುತ್ತಿದ್ದಾರೆ. ಕಾರ್ಮಿಕರಿಗೆ ಅನ್ವಯವಾಗುವ ಕಾಯ್ದೆಗಳಿಂದ ಅವರನ್ನು ವಂಚಿಸಲು, ಉದ್ಯೋಗದಾತ–ಉದ್ಯೋಗಿಗಳ ಸಂಬಂಧವನ್ನು ನಿರಾಕರಿಸಲು, ಈ ಪ್ಲಾಟ್‌ಫಾರ್ಮ್ ಅಗ್ರಿಗೇಟರ್‌ಗಳು ಅವರನ್ನು ತಮ್ಮ ಪಾಲುದಾರರು ಎಂದು ಕರೆದರೂ, ಅವರಿಗೆ ಲಾಭದಲ್ಲಿ ಯಾವ ಪಾಲೂ ಇಲ್ಲ.

ಈ ಪ್ಲಾಟ್‌ಫಾರ್ಮ್ ಆರ್ಥಿಕತೆ ವಿಶ್ವದಾದ್ಯಂತ ಶರವೇಗದಲ್ಲಿ ಬೆಳೆಯುತ್ತಿದ್ದು ಇಲ್ಲಿ ಲಕ್ಷೋಪಲಕ್ಷ ಕಾರ್ಮಿಕರು ದುಡಿಯುತ್ತಿದ್ದಾರೆ. ಅವರು ಒಂದು ಘನತೆಯುತ ಬದುಕನ್ನು ಜೀವಿಸಲು ಅವರ ಸೇವಾ ನಿಯಮಗಳನ್ನು ಸೂಕ್ತವಾಗಿ, ಪರಿಣಾಮಕಾರಿಯಾಗಿ ನಿಯಂತ್ರಿಸಬೇಕಾಗಿದೆ. ಈ ನಿಟ್ಟಿನಲ್ಲಿ ಪ್ಲಾಟ್‌ಫಾರ್ಮ್ ಆರ್ಥಿಕತೆಗೆ ಸಂಬಂಧಿಸಿದಂತೆ ಐಎಲ್‌ಓ ಮಂಡಿಸಿರುವ ಕರಡು ಗೊತ್ತುವಳಿಯನ್ನು ನಾನು ಬೆಂಬಲಿಸುತ್ತೇನೆ. ಘನತೆಯುತ ಬದುಕನ್ನು ಜೀವಿಸಲು ಪ್ಲಾಟ್‌ಫಾರ್ಮ್ ಕಾರ್ಮಿಕರಿಗೆ, ಸೇವಾ ಭದ್ರತೆ, ಉದ್ಯೋಗದ ಭದ್ರತೆ, ಸೂಕ್ತ ವೇತನ ಮತ್ತು ವಿಮೆ, ಇವನ್ನು ಖಾತ್ರಿ ಪಡಿಸಬೇಕಾಗುತ್ತದೆ



ಐಎಲ್‌ಓ ಸಮ್ಮೇಳನದಲ್ಲಿ ಕಾ|| ಕೆ. ಸೋಮಶೇಖರ್ (ಎಡದಿಂದ ಮೊದಲನೆಯವರು)

02.06.2025ರಂದು ಆಡಳಿತ ಮಂಡಳಿಯ ಅಧ್ಯಕ್ಷರೂ ಆದ ಐಎಲ್‌ಓದ ಮಹಾ ನಿರ್ದೇಶಕರು ತಮ್ಮ ವರದಿಯನ್ನು ಮಂಡಿಸಿ ಈ 113 ನೇ ಅಧಿವೇಶನದ ಪ್ಲೀನರಿ (ಸರ್ವ ಸದಸ್ಯರ ಸಭೆ) ಯನ್ನು ಉದ್ಘಾಟಿಸಿದರು.

ವಿವಿಧ ವಿಷಯಗಳ ಬಗ್ಗೆ ವಿಭಿನ್ನ ಸಮಿತಿಗಳ ರಚನೆಯಾಗಿದ್ದು, ಅಲ್ಲಿ ಸಂಬಂಧಿಸಿದ ಕರಡು ಗೊತ್ತುವಳಿಗಳನ್ನು ಮಂಡಿಸಿ, ಕೂಲಂಕಷವಾಗಿ ಚರ್ಚಿಸಿ, ಒಮ್ಮತಕ್ಕೆ ಬಂದ ನಂತರ, ಅವನ್ನು ಪ್ಲೀನರಿಯಲ್ಲಿ ಅಂಗೀಕರಿಸಲಾಯಿತು.

**'ಪ್ಲಾಟ್‌ಫಾರ್ಮ್ ಆರ್ಥಿಕತೆಯಲ್ಲಿ ನ್ಯಾಯಬದ್ಧ ಕೆಲಸಕ್ಕಾಗಿಯ ಮಾನದಂಡದ ನಿರೂಪಣೆ'**ಯ ಸಮಿತಿಯಲ್ಲಿ ಕಾ. ಕೆ. ಸೋಮಶೇಖರ್ ವಿಷಯ ಮಂಡಣೆ ಮಾಡಿದರು:

"ನಾವು ಭಾರತದಲ್ಲಿ ಫುಡ್ ಡೆಲಿವರಿ ಕಾರ್ಮಿಕರನ್ನು ಸಂಘಟಿಸುತ್ತಿದ್ದೇವೆ. ಅವರು ಪ್ರತಿದಿನ 12ರಿಂದ 14 ಗಂಟೆಗಳ ಕಾಲ ದುಡಿಯುತ್ತಿದ್ದಾರೆ. ಅವರು ಅನೇಕಾನೇಕ ಸಮಸ್ಯೆಗಳನ್ನು, ಕಷ್ಟಗಳನ್ನು, ದೌರ್ಜನ್ಯವನ್ನು ಎದುರಿಸುತ್ತಿದ್ದು, ವಿಪರೀತ ಒತ್ತಡಕ್ಕೆ ಬಲಿಯಾಗಿದ್ದಾರೆ. ಅವರ ಕೆಲಸದ ಪರಿಸ್ಥಿತಿ ಬಹಳವೇ ಶೋಚನೀಯವಾಗಿದ್ದು, ಪ್ಲಾಟ್‌ಫಾರ್ಮ್ ಅಗ್ರಿಗೇಟರ್‌ಗಳಿಂದ ತೀವ್ರ ಶೋಷಣೆಗೆ ಒಳಗಾಗಿದ್ದಾರೆ. ವಿಶ್ವದಾದ್ಯಂತ ಈ ಕಾರ್ಮಿಕರು

ಹಾಗೂ ಐಎಲ್‌ಓ ಸದಸ್ಯ ರಾಷ್ಟ್ರಗಳು ಇದಕ್ಕಾಗಿ ಸೂಕ್ತ ಕಾಯ್ದೆಗಳನ್ನು ಜಾರಿಗೊಳಿಸಬೇಕಾಗುತ್ತದೆ. ಭಾರತದಲ್ಲಿ ಎಐಯುಟಿಯುಸಿ ನೇತೃತ್ವದಲ್ಲಿ ನಾವು ಈ ಕಾರ್ಮಿಕರನ್ನು ಸಂಘಟಿಸುತ್ತಿದ್ದೇವೆ, ಅವರ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಮತ್ತು ಸಾಮಾಜಿಕ ಭದ್ರತಾ ಕ್ರಮಗಳಿಗಾಗಿ ಹೋರಾಟಗಳನ್ನು ಕಟ್ಟುತ್ತಿದ್ದೇವೆ. ಕರ್ನಾಟಕ ರಾಜ್ಯ ಸರ್ಕಾರ ನಮ್ಮ ಆಗ್ರಹಗಳನ್ನು ಮನ್ನಿಸಿ, "ಕರ್ನಾಟಕ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ) ಅಧ್ಯಾದೇಶ 2025" ವನ್ನು ಜಾರಿಗೊಳಿಸಿದೆ. ಇದು ಈ ಹೋರಾಟಕ್ಕೆ ಸಿಕ್ಕ ಮೊದಲ ಯಶಸ್ಸು. ಪ್ಲಾಟ್‌ಫಾರ್ಮ್ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಹಾಗೂ ಅವರು ನ್ಯಾಯವನ್ನು ಮತ್ತು ಘನತೆಯುತ ಬಾಳನ್ನು ಪಡೆಯುವ ಏಕೈಕ ಮಾರ್ಗವೆಂದರೆ ಸಮರಶೀಲ ಹೋರಾಟಗಳನ್ನು ಕಟ್ಟುವುದೊಂದೇ. ಹಾಗೆಯೇ, ಮಾಲೀಕರು ಮತ್ತು ಸರ್ಕಾರಗಳು ಇವೆಲ್ಲದರ ಬದಲಿಗೆ ಮುಂದಿಟ್ಟಿರುವ ಪ್ರಸ್ತಾವಗಳನ್ನು ನಾನು ವಿರೋಧಿಸುತ್ತೇನೆ."

ಕಾರ್ಮಿಕರ ಗುಂಪುಗಳು ನಡೆಸಿದ್ದ ಸಾಮಾನ್ಯ ಚರ್ಚೆಗಳಲ್ಲಿ ಭಾಗವಹಿಸಿದ ಕಾ. ಕೆ. ಸೋಮಶೇಖರ್, ಸದಸ್ಯ ರಾಷ್ಟ್ರಗಳು ಐಎಲ್‌ಓ ಒಡಂಬಡಿಕೆಗಳನ್ನು ಮತ್ತು ಶಿಫಾರಸ್ಸುಗಳನ್ನು ಉಲ್ಲಂಘಿಸುತ್ತಿರುವುದರ ಬಗ್ಗೆ ತಮ್ಮ ಕಾಳಜಿ ವ್ಯಕ್ತ ಪಡಿಸುತ್ತಾ, ಭಾರತವೂ ಸೇರಿದಂತೆ ಅನೇಕ ದೇಶಗಳು ಮೂಲಭೂತ ತತ್ವಗಳು ಮತ್ತು ಹಕ್ಕುಗಳ ಕುರಿತಾದ ಒಡಂಬಡಿಕೆಗಳನ್ನು ಅನುಮೋದಿಸದೆ ಇರುವುದನ್ನು, ಅನುಮೋದಿಸಿದರೂ ಅವನ್ನು ಜಾರಿಗೊಳಿಸದೆ ಇರುವುದನ್ನು ಸಭೆಯ ಗಮನಕ್ಕೆ ತಂದರು. ವಿಶ್ವದ ಕಾರ್ಮಿಕವರ್ಗ ತಮ್ಮ ಸರ್ಕಾರಗಳಿಂದ ದಾಳಿಗೆ ಒಳಗಾಗುತ್ತಿದೆ ಎಂದ ಅವರು, "ಐಎಲ್‌ಓ ಕೆಲಸದ ಅವಧಿಯನ್ನು ದಿನಕ್ಕೆ 8 ಗಂಟೆಗಳು ಎಂದು ನಿಗದಿ ಪಡಿಸಿದ್ದರೂ, ಸರ್ಕಾರಗಳು ಅವನ್ನು 10–12 ಗಂಟೆಗಳಿಗೆ ಏರಿಸುತ್ತಿವೆ; ಕಾರ್ಮಿಕರ ಹಕ್ಕುಗಳಾದ, ಸಂಘಟನೆ ರಚಿಸುವ ಹಕ್ಕು, ಮುಷ್ಕರದ ಹಕ್ಕು, ಇವನ್ನು ನಿರಾಕರಿಸಲಾಗಿದೆ; ಕಾರ್ಮಿಕರ ಮೂಲಭೂತ ಹಕ್ಕುಗಳಾದ ಕನಿಷ್ಠ ವೇತನ, ಸಾಮಾಜಿಕ–ಉದ್ಯೋಗ ಭದ್ರತೆ, ಇವುಗಳನ್ನು ಸರ್ಕಾರಗಳು ಖಾತ್ರಿ ಪಡಿಸುತ್ತಿಲ್ಲ, ಬದಲಿಗೆ ಬಂಡವಾಳಶಾಹಿಗಳ ಹಿತಾಸಕ್ತಿಯಲ್ಲಿ ಕಾರ್ಮಿಕವರ್ಗ ವಿರೋಧಿ ನೀತಿಗಳನ್ನು ಜಾರಿಗೊಳಿಸುತ್ತಿವೆ. ಹಾಗಾಗಿ, ಶೋಷಣೆ ಮತ್ತು ದಮನ ದಿನನಿತ್ಯದ ಮಾತಾಗಿವೆ." ಎಂದು ವಿವರಿಸಿದರು.

ಈ 113ನೇ ಅಧಿವೇಶನದಲ್ಲಿ ಪ್ಲಾಟ್‌ಫಾರ್ಮ್ ಆರ್ಥಿಕತೆಯಲ್ಲಿ ನ್ಯಾಯಬದ್ಧ ಕೆಲಸದ ಕುರಿತಾದ ಕರಡು ಗೊತ್ತುವಳಿ ಬಹಳವೇ ಚರ್ಚಿತಗೊಂಡಿತು, ಕಾರ್ಮಿಕ ಸಂಘಟನೆಗಳು ಈ ಕುರಿತಾದ ಒಡಂಬಡಿಕೆಗಾಗಿ ತೀವ್ರವಾಗಿ ಒತ್ತಾಯಿಸಿದವು. ಆದರೆ, ಮಾಲೀಕರ ಗುಂಪುಗಳು ಈ ಒಡಂಬಡಿಕೆಯನ್ನು ವಿರೋಧಿಸುತ್ತಾ, ಅದರ ತಿದ್ದುಪಡಿಗಾಗಿ ಒತ್ತಾಯಿಸಿದವು; ಅಮೆರಿಕಾ, ಜಪಾನ್, ಚೀನಾ, ಭಾರತವನ್ನು ಒಳಗೊಂಡಂತೆ ಅನೇಕ ದೇಶಗಳ ಸರ್ಕಾರಗಳು ಇದನ್ನು ಬೆಂಬಲಿಸಿದವು. ಬಹಳ ಚರ್ಚೆಗಳ ಬಳಿಕವೂ ಒಮ್ಮತ ಮೂಡದೆ ಹೋದ್ದರಿಂದ, ಇದನ್ನು ಮತಕ್ಕೆ ಹಾಕಿದಾಗ, 1480 ಮತಗಳು ಪರವಾಗಿಯೂ, 1064 ಮತಗಳು ವಿರೋಧವಾಗಿಯೂ ಚಲಾವಣೆಯಾದವು; 32 ದೇಶಗಳು ಹಾಜರಿರಲಿಲ್ಲ. ಒಡಂಬಡಿಕೆಯ ಪರವಾಗಿ ಕಾರ್ಮಿಕ ಸಂಘಟನೆಗಳು ಉಗ್ರವಾಗಿ ಹೋರಾಡಿ ಗೆದ್ದವು ಮತ್ತು ಅಂತಿಮ ಅಧಿವೇಶನದಲ್ಲಿ, ಪ್ಲಾಟ್‌ಫಾರ್ಮ್ ಆರ್ಥಿಕತೆಯಲ್ಲಿ ನ್ಯಾಯಬದ್ಧ ಕೆಲಸದ ಕುರಿತಾದ ಕರಡು ಗೊತ್ತುವಳಿ ಅಂಗೀಕಾರಗೊಂಡಿತು.

ಹಾಗೆಯೇ, 'ಕೆಲಸದ ಸ್ಥಳಗಳಲ್ಲಿನ ಜೈವಿಕ ಅಪಾಯ' ದ ಕುರಿತಾದ ಒಡಂಬಡಿಕೆಯನ್ನು ಅಳವಡಿಸಿಕೊಳ್ಳಲಾಯಿತು.

### ಜಿನೀವಾದಲ್ಲಿ ಡಬ್ಲ್ಯುಎಫ್‌ಟಿಯು ಕಾರ್ಯಕ್ರಮ

2025 ರ ಜೂನ್ 9ರಂದು, ಕಾರ್ಮಿಕ ಸಂಘಟನೆಗಳ ವಿಶ್ವ ಒಕ್ಕೂಟ (ಡಬ್ಲ್ಯುಎಫ್‌ಟಿಯು), ಐಕ್ಯಮತದಿಂದೊಡಗೂಡಿದ ಅಂತರರಾಷ್ಟ್ರೀಯತೆಯ 80 ವರ್ಷಗಳ ಹೋರಾಟದ ಕಾರ್ಯಕ್ರಮವನ್ನು ಜಿನೀವಾದಲ್ಲಿ ಸಂಘಟಿಸಿತು. 'ಅಂತರರಾಷ್ಟ್ರೀಯ ವರ್ಗ ಕೇಂದ್ರಿತ ಕಾರ್ಮಿಕ ವರ್ಗ ಹೋರಾಟದ ಇತಿಹಾಸ ಮತ್ತು ಭವಿಷ್ಯ' ಎಂಬ ಹೆಸರಿನ ಕಾರ್ಯಕ್ರಮ, ಡಬ್ಲ್ಯುಎಫ್‌ಟಿಯು ಅಧ್ಯಕ್ಷರಾದ ಕೊ. ಮೈಕೇಲ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಡಬ್ಲ್ಯುಎಫ್‌ಟಿಯು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ. ಪಂಬಿಸ್ ಕೈರಿಟ್ಸಿಸ್ ಈ ಕುರಿತಾದ ಕರಡು ಗೊತ್ತುವಳಿಯನ್ನು ಮಂಡಿಸಿದರು. ಈ ಬಗ್ಗೆ ಕಾ. ಕೆ. ಸೋಮಶೇಖರ್‌ರವರ ಮಂಡನೆ:

"ಭಾರತದ ಲಕ್ಷಾಂತರ ಕಾರ್ಮಿಕರನ್ನು ಪ್ರತಿನಿಧಿಸುವ ಎಐಯುಟಿಯುಸಿ ಪರವಾಗಿ ನನ್ನ ಕ್ರಾಂತಿಕಾರಿ ಶುಭಾಶಯಗಳು. ಪ್ರಧಾನ ಕಾರ್ಯದರ್ಶಿಗಳು ಮಂಡಿಸಿರುವ ಕರಡು ಗೊತ್ತುವಳಿಯನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

2ನೇ ವಿಶ್ವಯುದ್ಧ ಮುಗಿಯುತ್ತಿದ್ದಂತೆಯೇ, 1945ರಲ್ಲಿ ಡಬ್ಲ್ಯುಎಫ್‌ಟಿಯು ಅಸ್ತಿತ್ವಕ್ಕೆ ಬಂದಿತು. ವಿಶ್ವದಾದ್ಯಂತದ ಎಲ್ಲಾ ಪ್ರಮುಖ ಕಾರ್ಮಿಕ ಸಂಘಟನೆಗಳು ಅದರ ಸದಸ್ಯರಾಗಿದ್ದವು. ಕಾರ್ಮಿಕವರ್ಗದ ಹಿತಾಸಕ್ತಿಯನ್ನು ಕಾಪಾಡಲು ಮತ್ತು ಮಾನವನಿಂದ ಮಾನವನ ಎಲ್ಲಾ ತರದ ಶೋಷಣೆಯಿಂದ ವಿಮುಕ್ತಿ ಪಡೆಯಲು ಕಾರ್ಮಿಕವರ್ಗ ಕ್ರಾಂತಿಯನ್ನು ನೆರವೇರಿಸುವ ಉದ್ದೇಶದಿಂದ ಹೋರಾಟಗಳನ್ನು ಕಟ್ಟುವ ನಿಟ್ಟಿನಲ್ಲಿ ಈ ಒಕ್ಕೂಟ ಮಹತ್ವದ ಪಾತ್ರ ವಹಿಸಿದೆ. ಆದರೆ, ದುರದೃಷ್ಟವಶಾತ್, ಸೋವಿಯತ್ ಒಕ್ಕೂಟವನ್ನು ಒಳಗೊಂಡಂತೆ ವಿಶ್ವದ ಬಹುತೇಕ ಸಮಾಜವಾದಿ ದೇಶಗಳಲ್ಲಿ ಸಮಾಜವಾದಕ್ಕೆ ಆದ ಹಿನ್ನಡೆ– ತಾತ್ಕಾಲಿಕವಾದರೂ–ಡಬ್ಲ್ಯುಎಫ್‌ಟಿಯುಗೆ ಆಘಾತವನ್ನು ನೀಡಿತು. ಸೋವಿಯತ್ ಒಕ್ಕೂಟದ ಪತನದ ನಂತರ ನಡೆದ ಸಭೆಯಲ್ಲಿ, ಡಬ್ಲ್ಯುಎಫ್‌ಟಿಯುವಿನ ಎಡಪಂಥೀಯ ನಿಲುವನ್ನು ಕೈಬಿಡಬೇಕು ಎಂಬ ಆಗ್ರಹ ಕೇಳಿಬಂದರೂ, ಎಐಯುಟಿಯುಸಿ, ಎಐಟಿಯುಸಿ ಮತ್ತು ಗ್ರೀಸ್ ದೇಶದ ಒಂದು ಕಾರ್ಮಿಕ ಸಂಘಟನೆ, ಈ ಕೆಲವು ಕಾರ್ಮಿಕ ಸಂಘಟನೆಗಳು ಮಾತ್ರವೇ ಒಕ್ಕೂಟದ ಎಡಪಂಥೀಯ ನಿಲುವನ್ನು ಮುಂದುವರೆಸಿಕೊಂಡು ಹೋಗುವಂತೆ ಆಗ್ರಹಿಸಿದವು. ಭೌಗೋಳೀಕರಣದ ನಾಮಕಾವಾಸ್ತೆ ಮೋಡಿಯು ವಿಶ್ವದಾದ್ಯಂತ ಕಾರ್ಮಿಕವರ್ಗ ಹೋರಾಟಗಳ ಸ್ಫೋಟಕ್ಕೆ ಎಡೆ ಮಾಡಿಕೊಡುತ್ತಿರುವ ಈ ಕಾಲಘಟ್ಟದಲ್ಲಿ, ಕಾರ್ಮಿಕವರ್ಗದ ಹೋರಾಟಗಳನ್ನು ಅವುಗಳ ತಾರ್ಕಿಕ ಅಂತ್ಯವಾದ ವಿಶ್ವ ಕಾರ್ಮಿಕವರ್ಗ ಕ್ರಾಂತಿಯೆಡೆಗೆ ಮುನ್ನಡೆಸುವ ಜವಾಬ್ದಾರಿ ಡಬ್ಲ್ಯುಎಫ್‌ಟಿಯು ಮೇಲಿದೆ. ಬಂಡವಾಳಶಾಹಿ–ಸಾಮ್ರಾಜ್ಯಶಾಹಿ ದೇಶಗಳ ದಾಳಿಗಳನ್ನು ಸೋಲಿಸಲು, ಈ ಶೋಷಕ ವ್ಯವಸ್ಥೆಯನ್ನು ಕಿತ್ತೊಗೆದು ಕಾರ್ಮಿಕವರ್ಗದ ಪ್ರಭುತ್ವವನ್ನು ಸ್ಥಾಪಿಸಲು ವರ್ಗ ಸಂಘರ್ಷವನ್ನು ತೀವ್ರಗೊಳಿಸುವ ಸಲುವಾಗಿ, ಸಮರಶೀಲ ಕಾರ್ಮಿಕವರ್ಗ ಹೋರಾಟವನ್ನು ಸದೃಢಗೊಳಿಸಲು ಡಬ್ಲ್ಯುಎಫ್‌ಟಿಯು ಸಂಯೋಜಿತ ಎಲ್ಲಾ ಕಾರ್ಮಿಕ ಸಂಘಟನೆಗಳಿಗೆ ಎಐಯುಟಿಯುಸಿ ಒತ್ತಾಯಿಸುತ್ತದೆ."

**06.06.2025:** ಐತಿಹಾಸಿಕ ಘಟನೆಯೊಂದಕ್ಕೆ ಕಾ. ಕೆ.ಸೋಮಶೇಖರ್ ಸಾಕ್ಷಿಯಾದರು. ಪ್ಯಾಲೆಸ್ತೀನ್ ಅನ್ನು, ಐಎಲ್‌ಓದ 'ವೀಕ್ಷಕ ಸದಸ್ಯ ರಾಷ್ಟ್ರ' ಎಂದು ಸೇರಿಸಿಕೊಳ್ಳಲಾಯಿತು. ಪ್ಯಾಲೆಸ್ತೀನ್ ಪರವಾಗಿ 386 ಮತಗಳು, ವಿರುದ್ಧವಾಗಿ 15 ಮತಗಳು ಚಲಾವಣೆಯಾದವು, 42 ರಾಷ್ಟ್ರಗಳು ಹಾಜರಿರಲಿಲ್ಲ.

ಒಟ್ಟಿನಲ್ಲಿ, ಕಾ. ಸೋಮಶೇಖರ್‌ರವರು, ನಮ್ಮ ಕಾರ್ಮಿಕ ಸಂಘಟನೆ ಎಐಯುಟಿಯುಸಿಯನ್ನು ಪ್ರತಿನಿಧಿಸಿ, ಭಾರತದ ಕಾರ್ಮಿಕರ, ವಿಶೇಷವಾಗಿ ಗಿಗ್ ಕಾರ್ಮಿಕರ ಪರಿಸ್ಥಿತಿಯನ್ನು ಸಭೆಯಲ್ಲಿ ಮಂಡಿಸಿದ್ದು, ದೇಶದ ಕಾರ್ಮಿಕರ ಮೇಲೆ ಒಂದಾದ ನಂತರ ಒಂದರಂತೆ ಬಂದೆರಗುತ್ತಿರುವ ಕರಾಳ ಕಾಯ್ದೆಗಳನ್ನು ಅಲ್ಲಿ ಮುಂದಿಟ್ಟಿದ್ದು, ಇತರ ಅನೇಕ ವಿಷಯಗಳ ಬಗ್ಗೆ ಚರ್ಚಿಸಿದ್ದು, ಐಎಲ್‌ಓದಲ್ಲಿ ಎಐಯುಟಿಯುಸಿಯ ರಾಜಿರಹಿತ ನಿಲುವನ್ನು ಸ್ಪಷ್ಟ ಪಡಿಸುವಲ್ಲಿ ಒಂದು ಮೈಲಿಗಲ್ಲು ಎಂದೇ ಹೇಳಬೇಕು. ವಿಶ್ವ ಕಾರ್ಮಿಕ ಆಂದೋಳನಕ್ಕೆ ಇದೊಂದು ದಿಕ್ಸೂಚಿ!

ಎಐಎಂಎಸ್‌ಎಸ್ ಸಂಘಟಿತ

# ಬೌದ್ಧಿಕ–ಸಂಘಟನಾತ್ಮಕ ಸದೃಢತೆ ಪ್ರೇರೇಪಿಸಿದ ರಾಜ್ಯಮಟ್ಟದ ಮಹಿಳಾ ಶಿಬಿರ

## ಜ್ಞಾನ ಪ್ರಪಂಚಕ್ಕೆ ಮಹಿಳೆಯರು ಪ್ರವೇಶ ಮಾಡಬೇಕು – ಕಾಮ್ರೇಡ್ ಕೆ. ರಾಧಾಕೃಷ್ಣ

ರಾಜ್ಯದ 20 ಜಿಲ್ಲೆಗಳಿಂದ ಎಲ್ಲಾ ಸ್ತರದ ಮಹಿಳೆಯರು (ಶಿಕ್ಷಿತರು–ಅಶಿಕ್ಷಿತರು, ಗ್ರಾಮೀಣ–ನಗರವಾಸಿಗಳು, ಕೃಷಿ ಕೂಲಿ ಕಾರ್ಮಿಕರು, ನರೇಗಾ ಕಾರ್ಮಿಕರು, ಮನೆಗೆಲಸದ ಕಾರ್ಮಿಕರು, ಬೀದಿಬದಿ ವ್ಯಾಪಾರಿಗಳು, ಶಿಕ್ಷಕಿ–ದಾದಿ–ಸಫಾಯಿ ಕರ್ಮಚಾರಿಗಳು, ವಕೀಲರು, ವೈದ್ಯರು, ಗೃಹಿಣಿಯರು, ವಿದ್ಯಾರ್ಥಿನಿಯರು ಇತ್ಯಾದಿ ಇತ್ಯಾದಿ,) ಮೈಸೂರಿನಲ್ಲಿ ಜೂನ್ 21– 22, 2025 ರಂದು ನಡೆದ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ(ಎಐಎಂಎಸ್‌ಎಸ್)ಯ ಕಾರ್ಯಕರ್ತೆಯರ ಶಿಬಿರಕ್ಕೆ ಜಮಾಯಿಸಿದ್ದರು. ಶಿಬಿರವು "ಜನಿಸುವ–ಅರಳುವ–ಉಳಿಯುವ ಹಕ್ಕಿಗಾಗಿ ಮಹಿಳೆಯರ ಆಗ್ರಹ" ದೊಂದಿಗೆ ಚಾಲನೆಗೊಂಡಿತು. ಆಗ್ರಹ ಸಭೆಯನ್ನು ಉದ್ದೇಶಿಸಿ ಎಐಎಂಎಸ್‌ಎಸ್‌ನ ರಾಷ್ಟ್ರ ಉಪಾಧ್ಯಕ್ಷರಾದ ಡಾ: ಸುಧಾ ಕಾಮತ್‌ರವರು ಮಾತನಾಡಿದರು.




**ವೇದಿಕೆಯಲ್ಲಿ ಮಾತನಾಡುತ್ತಿರುವವರು ಕಾ. ಕೆ. ರಾಧಾಕೃಷ್ಣ. ಅವರ ಬಲಕ್ಕೆ: ಕಾ. ಕೆ. ಉಮಾ, ಕಾ.ಶೋಭಾ ಎಸ್. ಎಡಕ್ಕೆ: ಎಂ.ಎನ್. ಮಂಜುಳಾ, ಕಾ. ಸುಧಾ ಕಾಮತ್, ಕಾ. ಅಪರ್ಣಾ ಬಿ.ಆರ್.**



**'ಜನಿಸುವ-ಅರಳುವ-ಉಳಿಯುವ ಹಕ್ಕಿಗಾಗಿ ಮಹಿಳೆಯರ ಆಗ್ರಹ'**

### ಮಹಿಳಾ ಹೋರಾಟವನ್ನು ಕಾರ್ಮಿಕವರ್ಗದ ಹೋರಾಟದೊಂದಿಗೆ ಬೆಸೆಯಬೇಕು - ಕಾಮ್ರೇಡ್ ಕೆ. ರಾಧಾಕೃಷ್ಣ

ಈ ಯುಗದ ಓರ್ವ ಅಪ್ರತಿಮ ಮಾರ್ಕ್ಸ್‌ವಾದಿ ಚಿಂತಕರು, ಎಐಎಂಎಸ್‌ಎಸ್‌ನ ಮಾರ್ಗದರ್ಶಕರು ಆದ ಕಾ. ಶಿವದಾಸ್ ಘೋಷ್‌ರವರ 'ಮಾರ್ಕ್ಸ್‌ವಾದ ಮತ್ತು ಮಾನವ ಸಮಾಜದ ಬೆಳವಣಿಗೆ' ಪುಸ್ತಕದ ಕುರಿತು ಮೊದಲನೆಯ ಗೋಷ್ಠಿಯನ್ನು ಕಾ. ಕೆ. ರಾಧಾಕೃಷ್ಣ (ಪಾಲಿಟ್ ಬ್ಯುರೋ ಸದಸ್ಯರು, ಎಸ್‌ಯುಸಿಐ(ಸಿ)) ನಡೆಸಿಕೊಟ್ಟರು, ದ್ವಂದ್ವಾತ್ಮಕ ವಸ್ತುವಾದ ಮತ್ತು ಚಾರಿತ್ರಿಕ ವಸ್ತುವಾದದ ಕುರಿತು ತಮ್ಮ ಭಾಷಣದಲ್ಲಿ ಸಂಕ್ಷಿಪ್ತವಾಗಿ ವಿವರಿಸಿದರು:

ಮಾರ್ಕ್ಸ್‌ವಾದ ಒಂದು ವೈಜ್ಞಾನಿಕ ವಸ್ತುವಾದಿ ತತ್ವಶಾಸ್ತ್ರ. ಅದು, ವಸ್ತು ಪ್ರಪಂಚ ನಿರಂತರವಾಗಿ ಬದಲಾಗುತ್ತದೆ ಹಾಗೂ ನಿಯಮಬದ್ಧವಾಗಿ ನಡೆಯುತ್ತದೆ, ಲೌಕಿಕವಾಗಿ ಘಟಿಸುವ ಎಲ್ಲ ಘಟನೆಗಳಲ್ಲೂ ಕಾರ್ಯ–ಕಾರಣ ಸಂಬಂಧ ಇದೆ ಎಂಬ ಸತ್ಯವನ್ನು ಗುರುತಿಸುತ್ತದೆ. ಯಾವ ವಿಚಾರ, ಪ್ರಯೋಗ, ಪರಿಶೀಲನೆ ಮತ್ತು ತರ್ಕಕ್ಕೆ ನಿಲುಕುತ್ತದೆಯೋ ಅದು ವೈಜ್ಞಾನಿಕವಾದದ್ದು. ಆದರೆ ಅಲೌಕಿಕವಾಗಿರುವ ವಿಚಾರವು ಕೇವಲ ನಂಬಿಕೆಯ ಮೇಲೆ ನಿಂತಿದ್ದು ಮೌಢ್ಯತೆಗೆ ದಾರಿಮಾಡಿಕೊಡುತ್ತದೆ. ಅದು ಭಾವನಾವಾದದ ವಿಚಾರಕ್ಕೆ ಎಡೆ ಮಾಡಿಕೊಡುತ್ತದೆ.

ಸೂರ್ಯಕೇಂದ್ರಿತ ಸಿದ್ಧಾಂತ, ಗುರುತ್ವಾಕರ್ಷಣೆ ಸಿದ್ಧಾಂತ, ಜೀವಕೋಶ ಪರಿಕಲ್ಪನೆ, ಹೀಗೆ ವಿಜ್ಞಾನದ ಹಲವಾರು ಅನ್ವೇಷಣೆಗಳು ವಸ್ತುವಾದಿ ವಿಶ್ವವನ್ನು ತೆರೆದಿಟ್ಟವು. ಚಾರ್ಲ್ಸ್ ಡಾರ್ವಿನ್‌ರ "ಜೀವಸಂಕುಲದ ಉಗಮ" ಈ ಭೂಮಿಯ ಮೇಲೆ ಜೀವ ಸಂಕುಲ ಬೆಳೆದು ಬಂದದ್ದನ್ನು ವೈಜ್ಞಾನಿಕವಾಗಿ ದಾಖಲಿಸಿದೆ. ಈ ಜೀವರಾಶಿಯ ಉತ್ಕೃಷ್ಟ ಜೀವಿ ಮನುಷ್ಯ. ಆತ, ತನ್ನ ಆಲೋಚನಾ ಪ್ರಕ್ರಿಯೆಯ ಕಾರಣದಿಂದ ಬೇರೆಲ್ಲ ಜೀವಿಗಳಿಗಿಂತ ಗುಣಾತ್ಮಕವಾಗಿ ಭಿನ್ನ. ಆಲೋಚನೆ ಮೆದುಳಿನ ಉತ್ಪತ್ತಿ. ಮನುಷ್ಯನ ಮೆದುಳು, ಪಂಚೇಂದ್ರಿಯಗಳ ಮೂಲಕ ವಸ್ತು ಪ್ರಪಂಚದೊಡನೆ ಸಂಘರ್ಷಕ್ಕೆ ಇಳಿಯುತ್ತದೆ, ತನ್ಮೂಲಕ ವಿಚಾರ ಹುಟ್ಟುತ್ತದೆ, ಆ ವಿಚಾರವು ಮತ್ತೆ ವಸ್ತು ಪ್ರಪಂಚದ ಮೇಲೆ ಪರಿಣಾಮ ಬೀರಿ ಅದನ್ನು ಬದಲಾಯಿಸುತ್ತದೆ. ಈ ವಾಸ್ತವವನ್ನು ಅರ್ಥೈಸಿಕೊಂಡ ಮಾರ್ಕ್ಸ್‌ವಾದವು, ವಿಶ್ವವನ್ನು ವ್ಯಾಖ್ಯಾನಿಸುವುದು ಮಾತ್ರವಲ್ಲ, ವಿಶ್ವದ ಬದಲಾವಣೆಗೂ ದಾರಿ ತೋರುತ್ತದೆ.

ಆದಿಮಾನವನ ಚಿಂತನೆ ವಸ್ತುವಾದಿಯಾಗಿದ್ದು, ವಿಜ್ಞಾನದ ಉಗಮದ ಮುನ್ನ ಆತನಿಗೆ ನೈಸರ್ಗಿಕ ಶಕ್ತಿಗಳ ಬಗ್ಗೆ ತಿಳುವಳಿಕೆ ಇಲ್ಲದ ಕಾರಣ, ಅವನ್ನು ಆರಾಧಿಸುತ್ತಿದ್ದ. ಕಾಲಕ್ರಮೇಣ, ಸ್ಥಿರಾಸ್ತಿ ಬಂದ ನಂತರ, ಅದು ಖಾಸಗಿ ಆಸ್ತಿಯಾಗಿ ಬದಲಾಗಿ ಶೋಷಣೆಗೆ ಎಡೆಮಾಡಿಕೊಟ್ಟಿತು; ಶೋಷಕರು ಮತ್ತು ಶೋಷಿತರು ಎಂದು ಸಮಾಜ ಎರಡು ವರ್ಗಗಳಾಗಿ ವಿಭಜನೆಯಾಯಿತು. ಈ ವರ್ಗ ವಿಭಜಿತ ಸಮಾಜದಲ್ಲಿ ದೇವರ ಪರಿಕಲ್ಪನೆ ಹುಟ್ಟಿ, ಅದನ್ನು ಮಾಲೀಕ ವರ್ಗವು ತನ್ನ ಹಿತಾಸಕ್ತಿಗಾಗಿ ಬಳಸಲು ಪ್ರಾರಂಭಿಸಿತು.

ಮುಂದೆ ಸಮಾಜವು ನಿಯಮಬದ್ಧವಾಗಿ, ಗುಲಾಮಗಿರಿ ವ್ಯವಸ್ಥೆಯಿಂದ ಉಳಿಗಮಾನ್ಯ ವ್ಯವಸ್ಥೆಗೆ, ನಂತರ ಇದೀಗ ಬಂಡವಾಳಶಾಹಿ ವ್ಯವಸ್ಥೆಗೆ ಬದಲಾಗಿದೆ. ವೈಜ್ಞಾನಿಕವಾಗಿ ಈ ವ್ಯವಸ್ಥೆಯೂ ಕಾರ್ಮಿಕ ವರ್ಗದ ಪರಮಾಧಿಕಾರದ ಸಮಾಜವಾದಿ ವ್ಯವಸ್ಥೆಗೆ ಬದಲಾಗಿ, ಬಳಿಕ, ಕಮ್ಯುನಿಸಂ ಬರುತ್ತದೆ.

ಮಹಿಳಾ ಹೋರಾಟ ಪುರುಷ ವಿರೋಧಿಯಲ್ಲ, ಬದಲಿಗೆ ಪುರುಷ ಮತ್ತು ಮಹಿಳೆಯರನ್ನೂ ಆವರಿಸಿರುವ ಪುರುಷ ಪ್ರಧಾನ ಮನೋಭಾವದ ವಿರುದ್ಧ, ಈ ಶೋಷಣಾಯುಕ್ತ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಸಮಾಜವಾದಿ ಕ್ರಾಂತಿಯ ಕಡೆಗೆ ಕೊಂಡೊಯ್ಯುವ ಹೋರಾಟ. ಇದನ್ನು, ಕಾರ್ಮಿಕವರ್ಗದೊಡನೆ ಒಗ್ಗೂಡಿ ಕಾರ್ಯರೂಪಕ್ಕೆ ತರಲು ಎಐಎಂಎಸ್‌ಎಸ್‌ನ ಪಾತ್ರ ಮಹತ್ವದ್ದು ಎಂದ ಕಾ.ಕೆ.ರಾಧಾಕೃಷ್ಣ, ಮಹಿಳೆಯರು ಜ್ಞಾನ ಪ್ರಪಂಚವನ್ನು ಪ್ರವೇಶಿಸಿ, ಸಂಘಟನೆಯನ್ನು ಬಲಪಡಿಸಿ, ಮಹಿಳಾ ಹೋರಾಟವನ್ನು ತೀಕ್ಷ್ಣಗೊಳಿಸಲು ಸನ್ನದ್ಧರಾಗಿ ಎಂದು ಕರೆ ನೀಡಿದರು.

### ನೊಂದವರ ಕಂಠದಲ್ಲೇ ಹುದುಗಿಹೋದ ಮಾತಿಗೆ ಎಐಎಂಎಸ್‌ಎಸ್ ಧ್ವನಿಯಾಗಬೇಕು - ಕಾಮ್ರೇಡ್ ಕೆ. ಉಮಾ

"20ರ ಹರೆಯದ ಅನಾಥ ಕಿಶೋರಿಯೊಬ್ಬಳು, ತನ್ನ ಕುಟುಂಬದ ಪುಟ್ಟ ತಮ್ಮ–ತಂಗಿಯಂದಿರ ಜವಾಬ್ದಾರಿ ಹೊರಲು ಹೆಣಗಾಡಿ, ಮೋಸ ಹೋಗಿ ದೇಹ ವ್ಯಾಪಾರಕ್ಕೆ ದೂಡಲ್ಪಟ್ಟರೆ ಅದು ಆಕೆಯ ತಪ್ಪೋ ಅಥವಾ ಸಮಾಜದ ತಪ್ಪೋ?" ಎಂಬ ಪ್ರಶ್ನೆಗೆ "ಸಮಾಜ" ಎಂದು ಒಕ್ಕೊರಲಿನಿಂದ ಕೂಗಿದರು ಶಿಬಿರಾರ್ಥಿಗಳು. ಮಹಿಳೆಯರ ಸಮಸ್ಯೆಗಳ ಮೂಲ ಮತ್ತು ಪರಿಹಾರದ ಕುರಿತು ಎಸ್‌ಯುಸಿಐ(ಸಿ) ಪ್ರಧಾನ ಕಾರ್ಯದರ್ಶಿಗಳಾದ ಕಾ. ಪ್ರವಾಶ್‌ಘೋಷ್‌ರವರ 'ಮಹಿಳಾ ವಿಮುಕ್ತಿ ಚಳುವಳಿಯ ಕುರಿತು' ಎರಡು ಪುಸ್ತಕಗಳ ಕುರಿತಾದ 2ನೇ ಗೋಷ್ಠಿಯಲ್ಲಿ ಎಸ್‌ಯುಸಿಐ(ಸಿ)ನ ರಾಜ್ಯ ಕಾರ್ಯದರ್ಶಿಗಳಾದ ಕಾ. ಕೆ. ಉಮಾರವರು ಚರ್ಚೆಯನ್ನು ನಡೆಸಿಕೊಟ್ಟರು: ಮಾನವ ಸಮಾಜ ಆದಿಕಾಲದಲ್ಲಿ ಮಾತೃಪ್ರಧಾನವಾಗಿತ್ತು. ಹುಟ್ಟುವ ಮಗು ತಾಯಿಯಿಂದ ಗುರುತಿಸಲ್ಪಡುತ್ತಿತ್ತೇ ಹೊರತು ತಂದೆಯಿಂದ ಅಲ್ಲ. ಪಶು ಸಂಗೋಪನೆ, ಕೃಷಿ ಹಾಗೂ ಸ್ಥಿರಾಸ್ತಿ ಬಂದ ನಂತರ, ಉತ್ಪಾದನಾ ಸಾಧನಗಳ ಒಡೆತನವು ಪುರುಷರದ್ದಾದ ಮೇಲೆ ಪುರುಷ ಪ್ರಧಾನ ವ್ಯವಸ್ಥೆ ಬಂತು, ಜೊತೆಗೆ ವರ್ಗಗಳು ಹುಟ್ಟಿಕೊಂಡವು. ಇದರೊಂದಿಗೆ ಮಹಿಳೆಯು ಪುರುಷನ ಆಸ್ತಿಯಾದಳು. ಪುರಾಣ ಕಥೆಗಳ ಮೂಲಕ ಮಹಿಳೆ ಪುರುಷನಿಗೆ ಅಧೀನಳು ಎಂಬ ಮೌಲ್ಯಗಳಿಂದ ಆಕೆಯನ್ನು ನೈತಿಕವಾಗಿ ಬಂಧಿಸಲಾಯಿತು. ಆನಂತರ ಮಹಿಳೆ ಪಂಜರದ ಗಿಳಿಯಾದಳು. ಅವಳ ರಕ್ತದ ಕಣಕಣದಲ್ಲೂ ದಾಸೀ ಮನೋಭಾವನೆ ಹಾಸುಹೊಕ್ಕಿತು.

ಸಂಕಷ್ಟಗಳಿಂದ ನಲುಗುತ್ತಿರುವ ಅಸಹಾಯಕ ಮಹಿಳೆಗೆ, ಎಲ್ಲಾ ಧರ್ಮಗಳು ಸಹ, ಅದು ಅವಳ ಹಣೆಬರಹ, ಪೂರ್ವ ಜನ್ಮದ ಕರ್ಮ, ಈಗ ಕಷ್ಟ ಸಹಿಸಿದರೆ ಮುಂದಿನ ಜನ್ಮದಲ್ಲಿ ಒಳ್ಳೆಯದಾಗುತ್ತದೆ ಎಂದೆಲ್ಲಾ ಬೋಧಿಸಿ ಆಕೆ ತನ್ನ ಕಷ್ಟಗಳನ್ನು ಸಹಿಸುವಂತೆ, ಅದಕ್ಕಾಗಿ 'ಸರ್ವಶಕ್ತ ದೇವರ'ಲ್ಲಿ ಮೊರೆ ಹೋಗುವಂತೆ ಮಾಡುತ್ತವೆ. ಜೊತೆಗೆ, ಇಂದಿನ ಲಾಭಕೋರ, ಶೋಷಕ ಬಂಡವಾಳಿಗರು, ತಮ್ಮ ಅನ್ಯಾಯದ ವಿರುದ್ಧ ಜನರು, ವಿಶೇಷವಾಗಿ ಯುವಜನತೆ ಸಿಡಿದೇಳದೆ ಇರಲಿ ಎಂಬ ಉದ್ದೇಶದಿಂದ ಅವರನ್ನು ನೈತಿಕವಾಗಿ ಭ್ರಷ್ಟ ಮಾಡಲು ಸಮೂಹ ಮಾಧ್ಯಮಗಳಲ್ಲಿ ಪ್ರಚಾರ ಮಾಡುವ ಅಶ್ಲೀಲತೆ–ಹಿಂಸೆ, ವ್ಯಾಪಕವಾದ ಮದ್ಯ–ಮಾದಕ ವಸ್ತುಗಳ ಲಭ್ಯತೆ, ಇವು ಮಹಿಳೆಯರ ಮೇಲಿನ ವಿವಿಧ ವಿಕೃತಿಯ ದೌರ್ಜನ್ಯಗಳಿಗೆ–ಅತ್ಯಾಚಾರಗಳಿಗೆ ಎಡೆ ಮಾಡಿಕೊಡುತ್ತಿವೆ.

ಸಮಾಜದಲ್ಲಿನ ಎಲ್ಲಾ ರೀತಿಯ ಪುರುಷ ಪ್ರಧಾನ ಅನಿಷ್ಟಗಳು ಮತ್ತು ಬಂಡವಾಳಶಾಹಿ ಶೋಷಣೆ–ಈ ದ್ವಿಮುಖ ದಮನದ ವಿರುದ್ಧ ಹೋರಾಡುತ್ತಾ, ಮಹಿಳೆಯರು ತಮ್ಮ ಆತ್ಮಗೌರವ, ಮಾನ–ಸಮ್ಮಾನ, ಘನತೆಯನ್ನು ರಕ್ಷಿಸಲು ಹಾಗೂ ಎತ್ತಿ ಹಿಡಿಯಲು ಕಾರ್ಯಪ್ರವೃತ್ತರಾಗಬೇಕು; ಜೊತೆಗೆ, ಮೌನವಾಗಿ ನೋವನ್ನು ಉಣ್ಣುತ್ತಿರುವ ತಮ್ಮೆಲ್ಲಾ ಸೋದರಿಯರಿಗೆ ಎಐಎಂಎಸ್‌ಎಸ್ ಧ್ವನಿ ಆಗಬೇಕು ಎಂದು ಕಾ. ಕೆ. ಉಮಾ ಕರೆ ನೀಡಿದರು.

### ಶಿಬಿರಾರ್ಥಿಗಳನ್ನು ಭಾವನಾತ್ಮಕವಾಗಿ ಕಲುಕಿದ ಸಾಂಸ್ಕೃತಿಕ ಕಾರ್ಯಕ್ರಮಗಳು :

ಕೌಟುಂಬಿಕ ಹಿಂಸೆಗೆ ನಿರಂತರವಾಗಿ ಬಲಿಯಾಗುತ್ತಿರುವ ಮಹಿಳೆಯೊಬ್ಬಳು ಕೊನೆಗೆ ಅದನ್ನು ದಿಟ್ಟವಾಗಿ ಎದುರಿಸುವ ಸಾರವುಳ್ಳ ಸಿನಿಮಾ 'ಅಮ್ಮು' ಪ್ರದರ್ಶಿಸಲಾಯಿತು. ಎಐಎಂಎಸ್‌ಎಸ್‌ನ ರಾಷ್ಟ್ರ ಉಪಾಧ್ಯಕ್ಷರಾದ ಕಾ. ಅಪರ್ಣ ಬಿ. ಆರ್. ಸಿನಿಮಾದ ಕುರಿತು ಚರ್ಚೆ ನಡೆಸಿಕೊಟ್ಟರು.

ಮುಂಬೈನ ದಾದಿ ಅರುಣಾ ಶಾನ್‌ಭಾಗ್, ಗುಜರಾತ್‌ನ ಬಿಲ್ಕಿಸ್ ಬಾನು, ದೆಹಲಿಯ ನಿರ್ಭಯ, ಕಾಶ್ಮೀರದ ಆಸಿಫಾ, ಉತ್ತರಪ್ರದೇಶದ ಹತ್ರಾಸ್‌ನ ಬಾಲಕಿ, ಕೊಲ್ಕತ್ತಾದ ಅಭಯಾ, ಇವರು ದೇಶದ ಅಂತ:ಸಾಕ್ಷಿ ಕಲುಕಿದ ಕೆಲ ಘೋರ ಘಟನೆಗಳ ಬಲಿಪಶುಗಳು. ಈ ಘಟನೆಗಳ ಹಿನ್ನೆಲೆಯನ್ನು ಚಿತ್ರಿಸುತ್ತಾ, ನಂತರ ಇವೆಲ್ಲವನ್ನೂ ಪ್ರತಿರೋಧಿಸಿ ಪ್ರತಿಯೊಂದೂ ಹೆಣ್ಣು ಜೀವವೂ ನಿರ್ಭಿಡೆಯಿಂದ ಅರಳುವ ಸಮಾಜವನ್ನು ಕಟ್ಟುವೆಡೆಗಿನ ನೃತ್ಯ ರೂಪಕ "ಅಸ್ತಿತ್ವ"ವನ್ನು "ಅಂಕುರ ಸಾಂಸ್ಕೃತಿಕ ವೇದಿಕೆ" ಪ್ರದರ್ಶಿಸಿತು, ನೋಡುಗರ ಮನಸ್ಸನ್ನು ಆರ್ದ್ರವಾಗಿಸಿತು.

ಶಿಬಿರವನ್ನು ಎಐಎಂಎಸ್‌ಎಸ್ ರಾಜ್ಯಾಧ್ಯಕ್ಷರಾದ ಕಾ. ಎಂ.ಎನ್. ಮಂಜುಳಾ, ಉಪಾಧ್ಯಕ್ಷರಾದ ಕಾ. ಹರಿಣಿ ಆಚಾರ್ಯ, ಕಾರ್ಯದರ್ಶಿಗಳಾದ ಶೋಭಾ ಎಸ್. ನಡೆಸಿಕೊಟ್ಟರು.

# ಐಪಿಎಲ್ ಕ್ರಿಕೆಟ್: ಬೆಟ್ಟಿಂಗ್‌ನ ದಾವಾಗ್ನಿಯಲ್ಲಿ ಬೇಯುತ್ತಿದೆ!

2008ರಲ್ಲಿ ಪ್ರಾರಂಭವಾದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಜನರ ಕಣ್ಣು ಕೋರೈಸಿತು. ಈಗಂತೂ ಇದು ಜಾಗತಿಕ ವಿದ್ಯಮಾನ. ತನ್ನ ಅಭಿಮಾನಿಗಳನ್ನು ತೊಡಗಿಸಿಕೊಳ್ಳುವುದನ್ನು ಮರುವ್ಯಾಖ್ಯಾನಿಸಿ, ಹಿಂದೆ ಕಾಣದಿದ್ದಂತಹ ಒಂದು ವಿಚಿತ್ರ ವ್ಯಾಪಾರ–ವ್ಯವಹಾರದ ವ್ಯವಸ್ಥೆಯನ್ನು ಅದು ಸೃಷ್ಟಿಸಿತು. ಇಂದು ಐಪಿಎಲ್ ಕಿರಿಯ ವಯಸ್ಸಿನ ಕ್ರಿಕೆಟಿಗರನ್ನು ರಾತ್ರೋರಾತ್ರಿ ಕೋಟ್ಯಾಧಿಪತಿಗಳನ್ನಾಗಿಯೂ ಮಾಡಿದೆ.

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪಟುಗಳನ್ನು ಹರಾಜಿನ ಮೂಲಕ ಸೆಳೆದುಕೊಂಡು ರಚಿಸಲಾದ ತಂಡಗಳನ್ನು ಫ್ರಾಂಚೈಸಿಗಳು ಎಂಬ ಹೆಸರಿನಿಂದ ಕರೆಯಲಾಯಿತು. ಆ ತಂಡಗಳಿಗೆ ದೊಡ್ಡದೊಡ್ಡ ಕಾರ್ಪೊರೇಟ್ ಉದ್ಯಮಿಗಳು ಒಡೆಯರು. ಈ ಮೊದಲು 'ಸಭ್ಯಸ್ತರ ಕ್ರೀಡೆ' ಎಂದು ಬಣ್ಣಿಸಲ್ಪಡುತ್ತಿದ್ದ ಕ್ರಿಕೆಟ್ ಆಟವು, ಟೆಸ್ಟ್ ಪಂದ್ಯಗಳ ಆಟದ 5 ದಿನಗಳ ಕಾಲ ಕ್ರೀಡಾಪಟುಗಳ ನಿರಂತರ ಏಕಾಗ್ರತೆ, ಸಹಿಷ್ಣುತೆ, ಪರಿಶ್ರಮ, ಕಣ್ಣಿಗೆ ಆಹ್ಲಾದ ನೀಡುತ್ತಾ ಉತ್ತಮ ಆಟದ ಪ್ರದರ್ಶನದ ಮೂಲಕ ಶ್ರೇಷ್ಠತೆಯನ್ನು, ಕ್ರೀಡಾಸ್ಫೂರ್ತಿಯನ್ನು ಕಾಣಿಸುವುದಕ್ಕೆ ಹೆಸರುವಾಸಿಯಾಗಿತ್ತು. ಆದರೆ ಐಪಿಎಲ್ ದೆಸೆಯಿಂದಾಗಿ ಅದು ಇಂದು ಹಣ ಗಳಿಕೆಯ ಸರಕಾಗಿ ಮಾರ್ಪಾಡಾಗಿದೆ.

ಲಾಭದಾಹಿ ಐಪಿಎಲ್ ಬಾಸ್‌ಗಳು, ಕ್ರಿಕೆಟ್ ಅನ್ನು ಒಂದು ಆಮೋದ–ಪ್ರಮೋದದ ಮೋಜಿನ ಸಂತೆಯಾಗಿ ಪರಿವರ್ತಿಸಿದ್ದಾರೆ. ಅವರ ಮಾತಿನಲ್ಲೇ ಹೇಳುವುದಾದರೆ ಅದು ಹೆಚ್ಚು ಮನರಂಜನೆ, ಕಡಿಮೆ ಕ್ರಿಕೆಟ್ ಅಂತೆ! ಆದರೆ, ಅದು ಕ್ರಿಕೆಟ್!! ಚಿಯರ್ ಗರ್ಲ್ಸ್‌ಗಳ ಕುಣಿತ, ಬಣ್ಣ ತುಂಬಿದ ಮೈದಾನ, ಮನರಂಜನೆಯ ವಾತಾವರಣವನ್ನು ಸೃಷ್ಟಿಸುವ ಥೀಮ್ ಸಂಗೀತದ ಆರ್ಭಟ, ಅತಿರೇಕದ ಉದ್ಘಾಟನಾ ಸಮಾರಂಭಗಳಲ್ಲಿ ಬಾಲಿವುಡ್ ನಟನಟಿಯರ ಸಡಗರ–ಸಂಭ್ರಮಗಳ ಮೂಲಕ ಪ್ರೇಕ್ಷಕರನ್ನು ಸೆಳೆಯಲು ಏನೇನು ಬೇಕೋ ಅದೆಲ್ಲವನ್ನೂ ಐಪಿಎಲ್ ಟೂರ್ನಿಗಳಲ್ಲಿ ಎಗ್ಗುಸಿಗ್ಗಿಲ್ಲದೇ ಮಾಡಲಾಗುತ್ತದೆ. ಹೀಗಾಗಿ, ಇಲ್ಲಿ ಕ್ರಿಕೆಟ್ ಅನ್ನುವುದು ಕೇವಲ ಬ್ಯಾಟ್ ಮತ್ತು ಚೆಂಡಿಗೆ ಸೀಮಿತವಾಗದೆ, ಇತರೆಲ್ಲಾ ರೀತಿಯ ಅಬ್ಬರಗಳ ಒಟ್ಟು ಮೊತ್ತವಾಗಿದೆ.

## ಕ್ರೀಡೆ ಏಕೆ ಬೇಕು?

ವ್ಯಕ್ತಿತ್ವ ನಿರ್ಮಾಣದ ಅತ್ಯುತ್ತಮ ಸಾಧನ ಕ್ರೀಡೆ. ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಂಡು ತನ್ಮೂಲಕ, ಸೌಹಾರ್ದತೆ ಹಾಗೂ ಸ್ನೇಹದ ಮನೋಭಾವವನ್ನು ಬೆಳೆಸುವ ಜೀವನ ವಿಧಾನ ಅದು. ಅಬಾಲವೃದ್ಧರಾದಿಯಾಗಿ ಎಲ್ಲರಿಗೂ ಉಲ್ಲಾಸಕರ ಚಟುವಟಿಕೆಯಾಗಿದ್ದು, ಕ್ರೀಡಾ ಮನೋಭಾವದ ಮೂಲಕ ನ್ಯಾಯಪ್ರಜ್ಞೆ, ಸೌಜನ್ಯ, ನೈತಿಕ ನಡವಳಿಕೆ ಹಾಗೂ ಸೋಲು–ಗೆಲುವನ್ನು ಅತಿರೇಕವಿಲ್ಲದೆ ಸಂಯಮದಿಂದ ಸಮಾನವಾಗಿ ಸ್ವೀಕರಿಸುವ ಮನಸ್ಥಿತಿಯನ್ನು ಕ್ರೀಡೆಯು ಬೆಳೆಸುತ್ತದೆ. ನ್ಯಾಯಯುತ ಆಟದ ಮೂಲಕ ಎಲ್ಲರಿಗೂ ಗೆಲುವಿಗೆ ಸಮಾನ ಅವಕಾಶಗಳನ್ನು ಕಲ್ಪಿಸುವುದು, ಸೋತಾಗಲೂ ಪ್ರಾಮಾಣಿಕತೆ ಹಾಗೂ ಘನತೆಯಿಂದ ವರ್ತಿಸುವುದನ್ನು ಅದು ಕಲಿಸುತ್ತದೆ.

## ಪಿಚ್ ಹಿಂದಿನ ಬಾಲಿವುಡ್ - ರಾಜಕಾರಣಗಳ ಕೂಡಾವಳಿ

ಐಪಿಎಲ್ ಟೂರ್ನಮೆಂಟ್‌ಗಳು ಕ್ರೀಡಾಸ್ಫೂರ್ತಿಗೆ ಮಾರಕವಾಗಿವೆ. ಹೆಚ್ಚು ಜನಪ್ರಿಯತೆ ಪಡೆದಿರುವ ಕ್ರೀಡೆಯನ್ನು ಒಂದು ಉತ್ಪನ್ನವಾಗಿ ಪರಿವರ್ತಿಸಿ, ಹೂಡಿಕೆದಾರರಿಗೆ ಗರಿಷ್ಠ ಲಾಭವನ್ನು ಸೃಷ್ಟಿಸಿಕೊಡಲು ಅದನ್ನು ಹಿಂಡಲಾಗುತ್ತಿದೆ. ಕ್ರಿಕೆಟ್‌ನ ಸಾರವನ್ನು ಕಲಬೆರಕೆ ಮಾಡಿ ಮಾರುಕಟ್ಟೆಯಲ್ಲಿ ಹೆಚ್ಚಿನ ಬಿಡ್‌ದಾರನಿಗೆ ಮಾರಾಟ ಮಾಡಲಾಗುತ್ತಿದೆ. ಆಟಗಾರರೂ ಸಹ ಮಾರಾಟದ ಸರಕೆ. ಐಪಿಎಲ್ ಫ್ರಾಂಚೈಸಿಗಳನ್ನು ಚಿತ್ತಾಕರ್ಷಕ ಹೆಸರುಗಳಿಟ್ಟು ಕರೆಯಲಾಗುತ್ತದೆ. ಅಧಿಕೃತವಾಗಿ, ಪ್ರತಿಯೊಂದು ತಂಡವನ್ನು ವ್ಯಾಪಾರಸ್ಥರು, ಚಲನಚಿತ್ರ ತಾರೆಯರು ಮತ್ತು ಬಂಡವಾಳಶಾಹಿಗಳ ಒಕ್ಕೂಟವು ನಡೆಸುತ್ತಿದ್ದರೂ ಸಹ, ತೆರೆಯ ಹಿಂದೆ ಶೆಲ್ ಕಂಪನಿಗಳು, ಗಡಿಯಾಚೆಗಿನ ಕಳ್ಳಖಾತೆದಾರರು ಮತ್ತು ಬೇನಾಮಿ ಹೂಡಿಕೆದಾರರು ಇದ್ದಾರೆ. ಹಲವಾರು ತಂಡಗಳ ಮಾಲೀಕರು ಮತ್ತು ಪ್ರಾಯೋಜಕರು ಉತ್ತರ ಭಾರತದ ಬಿಜೆಪಿ ಪರ ಉದ್ಯಮಿಗಳಿಂದ ಹಿಡಿದು ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಪಶ್ಚಿಮ ಬಂಗಾಳದ ಪ್ರಾದೇಶಿಕ ರಾಜಕೀಯ ಪಕ್ಷಗಳವರೆಗೆ ಗಾಢವಾದ ಸಂಪರ್ಕ ಹೊಂದಿದ್ದಾರೆ.

ಬಾಲಿವುಡ್ ಹಾಗೂ ಮರೆಯಲ್ಲಿ ನಿಂತು ಕಾರ್ಯನಿರ್ವಹಿಸುವ ರಾಜಕೀಯ ದಲ್ಲಾಳಿಗಳಿಂದ ಐಪಿಎಲ್‌ನ ಗ್ಲಾಮರ್ ಸೂಚ್ಯಂಕವು ಏರುತ್ತಲೇ ಇದೆ. ಫ್ರಾಂಚೈಸಿಗಳ ಸೆಲೆಬ್ರಿಟಿ ಯಜಮಾನಿಕೆಯು ಹೊಳಪನ್ನಷ್ಟೇ ಅಲ್ಲ, ಇತ್ತೀಚೆಗೆ ಪ್ರಶ್ನೆಗಳನ್ನೂ ಎಬ್ಬಿಸಿದೆ. ಐಪಿಎಲ್ ಶುರುವಾಗಲು ಬಲವಾದ ರಾಜಕೀಯ ಶಕ್ತಿಯ ಅಭಯವಿತ್ತು. ಬಿಜೆಪಿಯ ನಿಷ್ಠಾವಂತ ಲಲಿತ್ ಮೋದಿ ಅಂದಿನ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಸಂಪೂರ್ಣ ಬೆಂಬಲದೊಂದಿಗೆ ಐಪಿಎಲ್‌ನ ರೋಚಕ ಕಥೆಯ ಮೊದಲ ಅಧ್ಯಾಯಗಳ ರಚಿಸಿದ ರಚನೆಕಾರ. ಭಾರತದಿಂದ ಪರಾರಿಯಾಗಿ ಇಂದು, ಅದೇ ಲಲಿತ್ ಮೋದಿ ಲಂಡನ್‌ನಲ್ಲಿ ಕಳ್ಳತನದಲ್ಲಿ ಕುಳಿತಿರುವ ವ್ಯಕ್ತಿ. ಅಕ್ರಮಗಳು ಮತ್ತು ಹಣದ ಕಳ್ಳವರ್ಗಾವಣೆಯ ಆರೋಪ ಆತನ ಮೇಲಿದೆ. ಅದೇನೇ ಇದ್ದರೂ, ಆತನ ಅಪಸೃಷ್ಟಿಯ ಪರಂಪರೆ ಮುಂದುವರೆಯುತ್ತಲೇ ಅಂತಹ ಹಲವರ ಅಕ್ರಮಗಳನ್ನು ಮುಚ್ಚಿಹಾಕುವಲ್ಲಿ ಯಶಸ್ವಿಯಾಗಿದೆ.

## ಚಿಕರಿಯಾದ ಮಾಧ್ಯಮ : ಝುಗಮಗ, ಗಾಸಿಪ್, ಅಬ್ಬರ!

ಐಪಿಎಲ್‌ನ ಈ ಪರಿಯ ಬೆಳವಣಿಗೆಯಲ್ಲಿ ಅಂತಿಮ ಲೆಕ್ಕಾಚಾರದಲ್ಲಿ ಮಾಧ್ಯಮಗಳು ಪ್ರಶ್ನಾರ್ಹ ಪಾತ್ರವನ್ನು ನಿರ್ವಹಿಸಿವೆ. ಅವು ಬೇಟೆಯೂ ಆಗಿವೆ ಮತ್ತು ಬೇಟೆಗಾರನೂ ಆಗಿವೆ. ಕೋಟಿಕೋಟಿ ಡಾಲರ್ ಮೌಲ್ಯ ಮೀರಿದ ಪ್ರಸಾರದ ಹಕ್ಕುಗಳಿಗಾಗಿ ಮಾಧ್ಯಮ ಜಾಲಗಳು ಪರಸ್ಪರ ಬಡಿದಾಡುತ್ತಿವೆ. 2022ರಲ್ಲಿ, ಸ್ಟಾರ್ ಸ್ಪೋರ್ಟ್ಸ್ ಮತ್ತು ವಯಾಕಾಮ್18 ಐದು ವರ್ಷಗಳ ಒಪ್ಪಂದಕ್ಕೆ ಒಟ್ಟು 6.2 ಶತಕೋಟಿ ಡಾಲರ್ ಪಾವತಿಸಿದ್ದು ಜಾಗತಿಕವಾಗಿ ಅತ್ಯಂತ ದುಬಾರಿ ಮಾಧ್ಯಮ ಹಕ್ಕುಗಳ ಹರಾಜಾಗಿದೆ. ಇದರಿಂದಾಗಿ, ಸಂಪಾದಕೀಯ ಸ್ವಾತಂತ್ರ್ಯವು ಕುಸಿದು, ತನಿಖಾ ವರದಿಗಳ ಬದಲಿಗೆ ಅತಿರಂಜಿತ ಮಸಾಲೆ ಸುದ್ದಿಗಳು, ಗಾಸಿಪ್ ವಿಭಾಗಗಳು, ಆಟಗಾರರ ಪ್ರಣಯಗಳು ಹಾಗೂ ಕ್ಷುಲ್ಲಕ ವಿಷಯಗಳು ಆ ಮಾಧ್ಯಮಗಳಲ್ಲಿ ಮೇಲುಗೈ ಪಡೆದಿವೆ. ಫ್ರಾಂಚೈಸಿಗಳ ಅಕ್ರಮಗಳ ವಿರುದ್ಧ ದನಿಯೆತ್ತಲು ಮಾಧ್ಯಮಗಳಿಗೆ ಬಾಯೇ ಬರುವುದಿಲ್ಲ.

## ಒತ್ತಡದಲ್ಲಿ ಆಟಗಾರರು : ಗರಿಮೆಯ ಕಿರೀಟ ಇಲ್ಲವೇ ಆಯಾಸದ ಕುಸಿತ

ಕೋಟ್ಯಾಂತರ ಡಾಲರ್ ಗುತ್ತಿಗೆಯ ಥಳುಕಿನ ಹಿಂದೆ ಆಟಗಾರರ ತೀವ್ರ ಶೋಷಣೆ, ಮಾನಸಿಕ ಆರೋಗ್ಯ ಬಿಕ್ಕಟ್ಟು ಮತ್ತು ಹೆಚ್ಚುತ್ತಿರುವ ಅಸಮಾನತೆಗಳ ಕರಾಳ ವಾಸ್ತವವಿದೆ. ಉನ್ನತ ಶ್ರೇಣಿಯ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ತಾರಾಪಟುಗಳು, ಭಾರಿ ಮೊತ್ತದ ಗುತ್ತಿಗೆಗೆ ಬದ್ಧರಾಗಿರುತ್ತಾರೆ. ಆದರೆ ತಾರೆಗಳಲ್ಲದ ಹೊಸ ಆಟಗಾರರಿಗೆ, ಅದರಲ್ಲೂ ವಿಶೇಷವಾಗಿ ಗ್ರಾಮೀಣ ಭಾಗದ ಕ್ರೀಡಾಳುಗಳಿಗೆ ಈ ಲೀಗ್ ಹೆಚ್ಚೆಂದರೆ ಒಂದು ಜೂಜಿನಂತೆ ಆಗಿದೆ. ಕೆಲವು ವಾರಗಳ ಆಟವು ಅವರ ಜೀವನವನ್ನು ಬದಲಾಯಿಸಲೂಬಹುದು ಅಥವಾ ಅವರನ್ನು ಛಿದ್ರಗೊಳಿಸಲೂಬಹುದು. ಹಲವರು ಇಡೀ ಸೀಸನ್ ಬೆಂಚ್‌ಗೆ ಸೀಮಿತವಾಗಿರುತ್ತಾರೆ ಹಾಗೂ ಯಾವುದೇ ಆಟವನ್ನೂ ಆಡಲಾಗದೆ ನರಳುತ್ತಾರೆ. ದೇಸಿ ಹಾಗೂ ವಿದೇಶಿ ಆಟಗಾರರ ಗಳಿಕೆ ಹಾಗೂ ದೊರಕುವ ಸೌಲಭ್ಯಗಳಲ್ಲಿ ತೀವ್ರತಮ ತಾರತಮ್ಯಗಳಿವೆ. ಇದು ಗ್ರಾಮೀಣ ಪ್ರದೇಶದ ಆಟಗಾರರನ್ನು ಖಿನ್ನತೆಗೆ ದೂಡುತ್ತದೆ.

1990ರ ದಶಕದ ಉತ್ತರಾರ್ಧದಲ್ಲಿ ಮತ್ತು 21ನೇ ಶತಮಾನದ ಆರಂಭದಲ್ಲಿ ವ್ಯಾಪಕ ಉದಾರೀಕರಣ ಕಾರ್ಯಸೂಚಿಯ ಹಿನ್ನೆಲೆಯಲ್ಲಿ ಮೂಡಿದ ಬಂಡವಾಳಶಾಹಿ ಜಾಗತಿಕ ಒಮ್ಮತವು ಮಾನವ ಚಟುವಟಿಕೆಯ ಪ್ರತಿಯೊಂದು ಅಂಶವನ್ನು ಅಂದರೆ ಕ್ರೀಡೆ, ಮನರಂಜನೆ, ಶಿಕ್ಷಣ, ಕಡೆಗೆ ಸಂಸ್ಕೃತಿಯನ್ನೂ ಸಹ ಮಾರುಕಟ್ಟೆ ಶೋಷಣೆಗೆ ಯೋಗ್ಯವಾದ ಸರಕಾಗಿ ಬದಲಾಯಿಸಿತು. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್), ಅದರ ಪರಕಾಷ್ಠೆಯಾಗಿ ಬಂತು ಅಷ್ಟೇ.

## ಜಗಮಗಿಸುವ ದೀಪಗಳು, ಕರ್ಕಶ ಸಿಡಿಮದ್ದು ಮತ್ತು ಒಣಗಿ ನಿಂತ ನಗರಗಳು - ಪರಿಸರದ ಅಣಕ

ಹವಾಮಾನ ಬದಲಾವಣೆ ಮತ್ತು ತೀವ್ರ ನೀರಿನ ಕೊರತೆಯೊಂದಿಗೆ ಸೆಣಸಾಡುತ್ತಿರುವ ಈ ದೇಶದಲ್ಲಿ, ಐಪಿಎಲ್ ಟೂರ್ನಮೆಂಟ್‌ನ ಒಟ್ಟಾರೆ ಆಯೋಜನೆಯು ಪರಿಸರದ ಮೇಲೆ ಹೇರುವ ದುಷ್ಪರಿಣಾಮದ ಬಗ್ಗೆ ಯಾರೂ ಚಕಾರ ಎತ್ತುತ್ತಿಲ್ಲ. ಪ್ರತಿಯೊಂದು ಬಾರಿ ಪಂದ್ಯಕ್ಕಾಗಿ ಪಿಚ್‌ಗಳನ್ನು ಸಿದ್ಧಪಡಿಸಲು ಲಕ್ಷಾಂತರ ಲೀಟರ್ ಸಂಸ್ಕರಿಸಿದ ನೀರನ್ನು ಬಳಸಲಾಗುತ್ತದೆ. ಕ್ರೀಡಾಂಗಣಗಳು ಗಂಟೆಗಟ್ಟಲೆ ಫ್ಲಡ್‌ಲೈಟ್‌ಗಳಿಂದ ಜಗಮಗಿಸುತ್ತವೆ ಮತ್ತು ಮಾಲಿನ್ಯ, ಬರ ಮತ್ತು ವಿದ್ಯುತ್ ಕೊರತೆಯಿಂದ ಬಳಲುತ್ತಿರುವ ನಗರಗಳಲ್ಲಿ ಭವ್ಯವಾದ ಉದ್ಘಾಟನಾ ರಾತ್ರಿಗಳಲ್ಲಿ ಪಟಾಕಿ ಪ್ರದರ್ಶನಗಳು ಅಬ್ಬರದಿಂದ ನಡೆಯುತ್ತವೆ. ಒಂದು ಮಾಯಾಲೋಕವನ್ನೇ ನಿರ್ಮಾಣ ಮಾಡಲಾಗುತ್ತದೆ.

## ಕ್ರಿಕೆಟ್‌ನ್ನು ಪಂಟರ್‌ಗಳ ತಾಣವನ್ನಾಗಿ ಮಾಡಿದ ಮ್ಯಾಚ್ ಫಿಕ್ಸಿಂಗ್

ಐಪಿಎಲ್‌ನ ಫ್ಲಡ್‌ಲೈಟ್‌ಗಳ ಬೆಳಕು, ಚಿಯರ್‌ಲೀಡರ್‌ಗಳು, ಸೆಲೆಬ್ರಿಟಿಗಳ ಹೊಳಪಿನ ಶತಕೋಟಿ ಡಾಲರ್ ವ್ಯವಹಾರ, ಮ್ಯಾಚ್ ಫಿಕ್ಸಿಂಗ್‌ನ ಕೊಳಕನ್ನು ಮರೆಯಾಗಿಸುತ್ತವೆ. ಅಕ್ರಮ ಬೆಟ್ಟಿಂಗ್ ದಂಧೆ, ರಾಜಕೀಯ ಸಂಬಂಧ ಮತ್ತು ತಡೆ ಇಲ್ಲದ ವಾಣಿಜ್ಯೀಕರಣ, ಇವು ಒಟ್ಟಿಗೆ ಸೇರಿ ಒಂದು ಕಾಲದ ಸಜ್ಜನರ ಆಟವು ಇಂದು ಕ್ರಿಕೆಟ್‌ನ ಮೂಲತತ್ವದಿಂದ ದೂರವಾಗಿ ಎಲ್ಲಾ ದುಷ್ಟ ಚಟುವಟಿಕೆಗಳ ಆಡುಂಬೋಲವಾಗಿ ಬದಲಾಗಿದೆ. 2013ರಲ್ಲಿ ದೆಹಲಿ ಪೊಲೀಸರು ಸ್ಪಾಟ್ ಫಿಕ್ಸಿಂಗ್ ಆರೋಪದ ಮೇಲೆ ಒಂದು ಫ್ರಾಂಚೈಸಿ ತಂಡದ ಮೂವರು ಆಟಗಾರರನ್ನು ಬಂಧಿಸಿದ್ದರು. ಆಟದ ಪೂರ್ವನಿರ್ಧಾರಿತ ಕ್ಷಣಗಳಲ್ಲಿ ಆಟಗಾರರಿಗೆ ರನ್ ಬಿಟ್ಟುಕೊಡಲು ಹಣ ನೀಡಲಾಗಿತ್ತು, ಬುಕ್ಕಿಗಳು ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸಿದ್ದರು ಎಂದು ನಂತರದ ತನಿಖೆಗಳು ಬಹಿರಂಗಪಡಿಸಿದ್ದವು. ಈ ಘಟನೆಯ ಪರಿಣಾಮವು ಮತ್ತೊಂದು ಫ್ರಾಂಚೈಸಿಯನ್ನು ತಲುಪಿತು. ಅದರ ಉನ್ನತ ವ್ಯಕ್ತಿಯಾಗಿದ್ದ ಗುರುನಾಥ್ ಮೇಯಪ್ಪನ್, ದಕ್ಷಿಣ ಭಾರತ ಮೂಲದ ಕೈಗಾರಿಕೋದ್ಯಮಿ, ಆಗಿನ ಬಿಸಿಸಿಐ ಅಧ್ಯಕ್ಷ ಎನ್. ಶ್ರೀನಿವಾಸನ್ ಜೊತೆಯಲ್ಲಿ ನಿಕಟವಾದ ಸಂಬಂಧವನ್ನು ಹೊಂದಿದ್ದರು. ಬೆಟ್ಟಿಂಗ್ ಮತ್ತು ತಂಡದ ಮಾಹಿತಿಯನ್ನು ಕಳ್ಳತನದಲ್ಲಿ ರವಾನಿಸಿದ ಆರೋಪ ಆತನ ಮೇಲೆ ಇತ್ತು. ಕಾನೂನಾತ್ಮಕ ಕ್ರಮ ಕೈಗೊಂಡರೂ ಮತ್ತು ನ್ಯಾಯಮೂರ್ತಿ ಲೋಧಾ ಸಮಿತಿಯು ಅಂತಿಮವಾಗಿ ಎರಡು ಫ್ರಾಂಚೈಸಿಗಳನ್ನು ಎರಡು ವರ್ಷಗಳ ಕಾಲ ಅಮಾನತುಗೊಳಿಸಿದ್ದರೂ ವ್ಯವಸ್ಥೆಯ ಕೊಳೆತ ಅತ್ಯಂತ ಆಳವಾಗಿ ಹೋಗಿರುವುದಂತೂ ಸತ್ಯ ಎನ್ನುತ್ತಾರೆ ಒಳಗಿನವರು.

## ಬೆಟ್ಟಿಂಗ್, ಬುಕ್ಕಿಗಳು ಮತ್ತು ಭೂಗತ ಲೋಕದ ಸಂಪರ್ಕ

ಭಾರತದ ಹೆಚ್ಚಿನ ಭಾಗಗಳಲ್ಲಿ ಕ್ರಿಕೆಟ್ ಬೆಟ್ಟಿಂಗ್ ಕಾನೂನುಬಾಹಿರವಾಗಿದ್ದರೂ ಸಹ ಐಪಿಎಲ್ ಟೂರ್ನಿ ಸಮಯದಲ್ಲಿ ವಾರ್ಷಿಕ ಬೆಟ್ಟಿಂಗ್ ವಹಿವಾಟು 150 ಶತಕೋಟಿ ಡಾಲರ್ ಆಗುತ್ತದೆ ಎಂದು ಅಂದಾಜಿಸಲಾಗಿದೆ. 2022ರಲ್ಲಿ, ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳವು ದುಬೈ ಮತ್ತು ಕರಾಚಿಯಿಂದ ಕಾರ್ಯನಿರ್ವಹಿಸುತ್ತಿರುವ ತಲೆಮರೆಸಿಕೊಂಡಿರುವ ಭೂಗತದೊರೆ ದಾವೂದ್ ಇಬ್ರಾಹಿಂನ ಭೂಗತ ಜಾಲ ಡಿ–ಕಂಪನಿಯೊಂದಿಗೆ ಸಂಪರ್ಕ ಹೊಂದಿದ್ದ ಬೆಟ್ಟಿಂಗ್ ಜಾಲವನ್ನು ಪತ್ತೆ ಮಾಡಿತು. ಟೆಲಿಗ್ರಾಮ್ ಮತ್ತು ವಾಟ್ಸಾಪ್‌ನಂತಹ ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳು ಜೂಜುತಾಣಗಳಿಗೆ ಪ್ರಚಾರ ರಾಯಭಾರಿಗಳಂತೆ ಕೆಲಸ ಮಾಡಿರುವ ಉದಾಹರಣೆಗಳಿವೆ.

## ಬೆಟ್ಟಿಂಗ್ ಭೂತದ ಜಾಲದಲ್ಲಿ ಭಾರತದ ಯುವಜನತೆ

ಐಪಿಎಲ್ ಪ್ರಸಾರಗಳು ಪ್ರತಿ ಪರದೆಯಲ್ಲೂ ತುಂಬಿ ತುಳುಕುತ್ತಿದ್ದಂತೆ, ಮೊಬೈಲ್ ಅಪ್ಲಿಕೇಶನ್‌ಗಳು, ಫ್ಯಾಂಟಸಿ ಲೀಗ್‌ಗಳು ಮತ್ತು ಬೆಟ್ಟಿಂಗ್ ಪ್ಲಾಟ್‌ಫಾರ್ಮ್‌ಗಳ ಮೇಲ್ಸ್ತರ ಕೆಳಗೆ ಸಮಾನಾಂತರ ಡಿಜಿಟಲ್ ಆರ್ಥಿಕತೆಯು ಚಲನೆಯಲ್ಲಿರುತ್ತದೆ. ಬೆಟ್ಟಿಂಗ್‌ನ್ನು ಕೇವಲ 49 ರೂ.ನಿಂದ ಪ್ರಾರಂಭಿಸಲು ಅವಕಾಶ ನೀಡಲಾಗುತ್ತದೆ. ಆಮಿಷಕ್ಕೆ ಒಳಗಾಗಲು ಇಷ್ಟು ಸಾಕು. ಶಾಲಾ ಮಕ್ಕಳು, ಕಾಲೇಜು ವಿದ್ಯಾರ್ಥಿಗಳು ಮತ್ತು ನಿರುದ್ಯೋಗಿ ಯುವಕರು ಇದಕ್ಕೆ ನೇರ ಬಲಿಪಶುಗಳು. ಒಮ್ಮೆ ಒಳಗೆ ಸೇರಿದರೆ, ಅಭಿಮಾನದ ಭಾವನೆ ಮತ್ತು ಆರ್ಥಿಕ ಅಗತ್ಯಗಳ ನಡುವಿನ ಗೆರೆ ಮಸುಕಾಗುತ್ತದೆ. ಮೂರು ತಿಂಗಳ ಕಾಲಾವಧಿಯ ಒಂದು ಸೀಸನ್‌ನಲ್ಲಿ, ಇಡೀ ಸಾಮಾಜಿಕ ಪರಿಸರವೇ ಪಂದ್ಯದ ದಿನಗಳು ಮತ್ತು ಬೆಟ್ಟಿಂಗ್ ಅವಕಾಶಗಳ ಲಯದ ಕಡೆಗೆ ಬಾಗುತ್ತದೆ.

ನಾಗರಿಕ ಚರ್ಚೆ ಮತ್ತು ಸಾಮಾಜಿಕ ಹೊಣೆಗಾರಿಕೆಯಿಂದ ದೂರವೇ ಉಳಿದಿರುವ ಯುವ ಪ್ರೇಕ್ಷಕ ಗಣದಲ್ಲಿ, ದೀರ್ಘಾವಧಿಯ ಅರಿವಿಗಿಂತ ತ್ವರಿತಗತಿಯ ತೃಪ್ತಿಯೇ ಮೇಲುಗೈ ಸಾಧಿಸಿ ಅವರು ಉನ್ಮಾದದ ಪ್ರಪಂಚದಲ್ಲಿ ಸಿಲುಕಿಕೊಂಡಿದ್ದಾರೆ. ಇದರ ಪರಿಣಾಮವಾಗಿ ಕೇವಲ ಹಣಕಾಸಿನ ನಷ್ಟವಾಗುವುದಲ್ಲದೆ, ನೆಲದ ವಾಸ್ತವಗಳಿಂದ ದೂರಾದ ಯುವಜನತೆಗೆ ಅದು ಒಂದು ಮಾದಕ ದ್ರವ್ಯವಾಗಿ ಅವರನ್ನು ಬಲಿ ತೆಗೆದುಕೊಳ್ಳುತ್ತಿದೆ. ಬೆಂಗಳೂರಿನಲ್ಲಿ ಈ ವರ್ಷದ ಐಪಿಎಲ್ ವಿಜೇತ ಆರ್‌ಸಿಬಿ ತಂಡದ ವಿಜಯೋತ್ಸವ ಮೆರವಣಿಗೆಯಲ್ಲಿ ಕಾಲ್ತುಳಿತ ಉಂಟಾಗಿ 11 ಜನ ಬಲಿಯಾಗಿದ್ದದ್ದು, ಅತಿರೇಕದ ಉನ್ಮಾದ, ಬಂಡವಾಳ, ಮಾಧ್ಯಮಗಳ ಟಿಆರ್‌ಪಿ ಬೇಟೆ ಹಾಗೂ ರಾಜಕೀಯ ವ್ಯವಸ್ಥೆಗಳು ಒಗ್ಗೂಡಿದ ಫಲವೇ ಆಗಿದೆ.

## ಇತರೆಲ್ಲಾ ಕ್ರೀಡೆಗಳ ಜೊತೆಯಲ್ಲಿ ಕ್ರಿಕೆಟನ್ನು ವಿನಾಶದಿಂದ ಉಳಿಸಬೇಕು

ಸಮಗ್ರತೆ, ನ್ಯಾಯಯುತ ಆಟ ಮತ್ತು ಸಾಮೂಹಿಕ ಉದ್ದೇಶಗಳಿಂದ ಗುರುತಿಸಲ್ಪಟ್ಟ ಕ್ರಿಕೆಟ್ ಈಗ ತನ್ನ ನೈಜ ಸೌಂದರ್ಯವನ್ನು ಕಳೆದುಕೊಂಡಿದೆ. ಮನರಂಜನೆಯ ಜಾಗವನ್ನು ಲಾಭ ಆಕ್ರಮಿಸಿದೆ. ತಂಡದ ಕೆಲಸ ಮತ್ತು ಶಿಸ್ತಿನ ಸ್ಥಾನವನ್ನು ವೈಯಕ್ತಿಕ ಬ್ರ್ಯಾಂಡಿಂಗ್ ಮತ್ತು ಪ್ರಾಯೋಜನೆ ಆಕ್ರಮಿಸಿಕೊಂಡಿವೆ. ಕ್ರಿಕೆಟ್ ಕ್ರೀಡೆಯಾಗಿ ಉಳಿಯದೇ ಈಗ ವಿನಾಶದತ್ತ ಸಾಗಿದೆ. ಬಂಡವಾಳಗಾರರು, ಸರಕಾರ ಮತ್ತು ಭ್ರಷ್ಟ ಕ್ರೀಡಾ ಅಧಿಕಾರಿಗಳ ನಡುವಿನ ಅಪವಿತ್ರ ಮೈತ್ರಿಯು ಕ್ರೀಡಾ ಕ್ಷೇತ್ರವನ್ನು ಇಂದು ನಿಯಂತ್ರಿಸುತ್ತಿದೆ. ಕ್ರಿಕೆಟ್ ಸೇರಿದಂತೆ ಎಲ್ಲಾ ಕ್ರೀಡೆಗಳ ಹಿಂದಿನ ಸೊಬಗು, ಇಂದಿನ ಥಳಕು–ಬಳುಕಿನ ಗದ್ದಲದಲ್ಲಿ ಮಸುಕಾಗುತ್ತಿದ್ದಂತೆ, ನಿಜವಾದ ಕ್ರೀಡಾಪ್ರೇಮಿಗಳು ಅದರ ಘನತೆಯನ್ನು ಮರಳಿ ಪಡೆಯುವ ಸಲವಾಗಿ ಶ್ರಮ ವಹಿಸಲು ಇದು ಸಕಾಲ ಎಂದು ಅರಿತು ಮುಂಬರಬೇಕಿದೆ.

...3ನೇ ಪುಟದಿಂದ

## ಕೆಂಪುನಾಡಿನ ಕರಾಳ ಕಥನ

ರಾಜ್ಯ ಸರ್ಕಾರ ಈ ಕುರಿತು 11ನೇ ಫೆಬ್ರವರಿ 2018 ರಂದು ರೂ. 24,996 ಕೋಟಿಯ ಪ್ರಸ್ತಾವನೆಯೊಂದನ್ನು ಸಲ್ಲಿಸಿತು. ಆದರೆ ಈ ರೂ. 30 ಸಾವಿರ ಕೋಟಿಯ ಮೇಲೆ ಕಣ್ಣಿಟ್ಟಿರುವ ದುರುಳ ರಾಜಕಾರಣಿಗಳು ಮತ್ತೆ ಅದೇ ರಸ್ತೆ, ಸಮುದಾಯ ಭವನ ಇತ್ಯಾದಿ ಕಮಿಷನ್ ಹೊಡೆಯುವ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದಾರೆಯೇ ಹೊರತು, ಗಣಿಬಾಧಿತ ಜನರ ಮತ್ತು ಪರಿಸರದ ಪುನರುಜ್ಜೀವನ ಕಾರ್ಯಕ್ರಮಕ್ಕೆ ಅಲ್ಲ. ಹಾಗಾಗಿ ಈ ಕುರಿತು ವಿವಾದ ಮತ್ತೆ ಕೋರ್ಟ್ ಅಂಗಳಕ್ಕೆ ಹೋಗಿದೆ.

ಈ ಮಧ್ಯೆ, ಗಣಿ ಗುತ್ತಿಗೆದಾರರು ಎಸ್‌ಪಿವಿಗೆ ಪಾವತಿಸುತ್ತಿರುವ ಶೇ. 10ರ ವಂತಿಗೆಯನ್ನು ಸ್ಥಗಿತಗೊಳಿಸುವಂತೆ 'ಭಾರತೀಯ ಗಣಿ ಉದ್ಯಮಿಗಳ ಒಕ್ಕೂಟ'ವು (ಫಿಮಿ) ಸುಪ್ರೀಂ ಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿತ್ತು. ಗಣಿ ಮತ್ತು ಖನಿಜ ಅಭಿವೃದ್ಧಿ ಕಾಯ್ದೆಯಡಿ ಖನಿಜ ನಿಧಿ (ಡಿಎಂಎಫ್) ಗೂ ರಾಜಧನದ ಮೂರನೇ ಒಂದು ಭಾಗಕ್ಕಿಂತ ಹೆಚ್ಚು ವಂತಿಗೆ ಪಾವತಿಸಬೇಕಿರುವುದರಿಂದ ಎಸ್‌ಪಿವಿಗೆ ಪಾವತಿಸುತ್ತಿರುವ ಶೇ.10ರ ವಂತಿಗೆಯಿಂದ ವಿನಾಯಿತಿ ನೀಡುವಂತೆ ಕೋರಿಕೊಂಡಿತು. ಆದರೆ 'ಪರಿಸರ ಪುನರುಜ್ಜೀವನ ಯೋಜನೆ' ಪೂರ್ಣವಾಗಿ ಹಾಗೂ ಸ್ಪಷ್ಟವಾಗಿ ರೂಪುಗೊಳ್ಳಬೇಕಿದ್ದು, ಅದಕ್ಕೆ ಭಾರೀ ಹಣದ ಅಗತ್ಯವಿದೆ ಎಂದು ಕೋರ್ಟ್ ಭಾವಿಸಿ, ಫಿಮಿ ಮನವಿಯನ್ನು ತಿರಸ್ಕರಿಸಿತು.

### ಜನ ಹೋರಾಟವೊಂದೇ ದಾರಿ

ದೇಶದ ನೈಸರ್ಗಿಕ ಸಂಪನ್ಮೂಲಗಳನ್ನು ಹಾಗೂ ಖನಿಜ ಸಂಪತ್ತನ್ನು ರಾಷ್ಟ್ರೀಯ ಸಂಪತ್ತು ಎಂದು ಹೇಳುತ್ತೇವೆ. ಆದರೆ ನಮ್ಮ ದೇಶದಲ್ಲಿ 1990ರ ದಶಕದಲ್ಲಿ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಗಳು ಜಾರಿಯಾದ ನಂತರ ಇಂತಹ ಅಮೂಲ್ಯವಾದ ಖನಿಜ ಸಂಪತ್ತನ್ನು ತಮ್ಮಿಚ್ಛೆಯಂತೆ ಲೂಟಿ ಹೊಡೆದು ಖಾಸಗಿ ಕಂಪನಿಗಳು ಕೊಬ್ಬುತ್ತಿವೆ. ಈ ಕಾರಣದಿಂದಲೇ ಬಳ್ಳಾರಿ ಜಿಲ್ಲೆಯಲ್ಲಿ ಗಣಿಗಾರಿಕೆ ಪರಿಣಾಮವಾಗಿ ಕೇವಲ ಬೆರಳೆಣಿಕೆಯಷ್ಟು ಗಣಿ ಮಾಲೀಕರು ಸಹಸ್ರ ಕೋಟಿಗಳ ಒಡೆಯರಾದರು. ಅಕ್ರಮ ಗಣಿಗಾರಿಕೆಯನ್ನು ತಡೆಯಲು, ದುಷ್ಪರಿಣಾಮಗಳನ್ನು ನಿಯಂತ್ರಿಸಲು ಬೇಕಾಗಿರುವ ಅನೇಕ ಕಾನೂನುಗಳೂ ಇವೆ. ಅನುಷ್ಠಾನಗೊಳಿಸಲು ಸರ್ಕಾರಿ ಇಲಾಖೆಗಳಿವೆ. ಆದರೆ ಇವು ಕೂಡ ಭ್ರಷ್ಟವಾಗಿದ್ದು, ಕಾನೂನು ಕಟ್ಟಳೆಗಳು ಕಾಗದದಲ್ಲಿ ಇರುತ್ತವೆ ಹೊರತಾಗಿ, ಕಾರ್ಯಗತವಾಗುವುದಿಲ್ಲ. ಗಣಿಗಾರಿಕೆಯಿಂದ ಅತಿ ಹೆಚ್ಚು ಸಮಸ್ಯೆಗೀಡಾಗಿರುವ ಬಳ್ಳಾರಿ ಜಿಲ್ಲೆಯಲ್ಲಿ 125 ಗ್ರಾಮಗಳು ಪುನರ್ವಸತಿ ನಿರೀಕ್ಷೆಯಲ್ಲಿವೆ, ವಿಜಯನಗರ ಜಿಲ್ಲೆಯಲ್ಲಿ 66 ಗ್ರಾಮಗಳು, ಚಿತ್ರದುರ್ಗ ಜಿಲ್ಲೆಯ 60 ಹಾಗೂ ತುಮಕೂರು ಜಿಲ್ಲೆಯ ಸುಮಾರು 50 ಗ್ರಾಮಗಳು ಸಂಪೂರ್ಣ ನಲುಗಿವೆ. ಅಲ್ಲದೇ ಇಲ್ಲಿಯ ಪ್ರತಿಯೊಂದು ಮನೆಯೂ ಅಕ್ರಮ ಗಣಿಗಾರಿಕೆಯ ಹಲವು ಕರಾಳ ಕಥೆಗಳನ್ನು ಬಿಚ್ಚಿಡುತ್ತದೆ. ಈ ಜಿಲ್ಲೆಗಳ ಇನ್ನೂ ಹಲವಾರು ಹಳ್ಳಿಗಳು ತೀವ್ರ ಸಂಕಷ್ಟಕ್ಕೊಳಗಾಗಿವೆ. ಈ ಭಾಗದ ಬೀದಿಗೆ ಬಿದ್ದ ಜನರ ಬದುಕು ಕಟ್ಟಿ ಕೊಡುವ ಕೆಲಸವಾಗಬೇಕು, ಆರೋಗ್ಯ–ಶಿಕ್ಷಣಕ್ಕೆ ಒತ್ತು ನೀಡಬೇಕು, ಸುಸಜ್ಜಿತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ಮಾತ್ರ ಕಟ್ಟಿ ಉಪಯೋಗವಿಲ್ಲ, ಅಗತ್ಯ ವೈದ್ಯರು, ಸಿಬ್ಬಂದಿ ನೇಮಕವಾಗಬೇಕು, ಬೀದಿಗೆ ಬಿದ್ದ ಕಾರ್ಮಿಕರ ಪುನರುಜ್ಜೀವನಕ್ಕೆ ಯೋಜನೆ ರೂಪಿಸಬೇಕು, ಗ್ರಾಮಸ್ಥರನ್ನು ಆರ್ಥಿಕವಾಗಿ ಸ್ವಾವಲಂಬಿಗಳಾಗಿ ರೂಪಿಸುವ ಕೆಲಸ ಆಗಬೇಕು. ಈ ಎಲ್ಲಾ ಅಗತ್ಯತೆಗಳನ್ನು ನೈಜ ಗ್ರಾಮ ಸಭೆಗಳ ಮೂಲಕ ಆಯಾ ಪ್ರದೇಶದ ಅಗತ್ಯತೆಗನುಸಾರವಾಗಿ ನಿರ್ಧಾರ ಮಾಡಬೇಕು, ಕಾಡಂಚಿನ ಸಾಗುವಳಿದಾರರಿಗೂ ಯೋಜನೆ ರೂಪಿಸಿ ಪರಿಸರ ಕಾಪಾಡುವಲ್ಲಿ ಅವರನ್ನೂ ತೊಡಗಿಸಿಕೊಳ್ಳಬೇಕು. ಆದರೆ ಈ ನಿಧಿಯ ಲೂಟಿಗಾಗಿ ತಮ್ಮದೇ ಅಜೆಂಡಾ ಇಟ್ಟುಕೊಂಡು ಜೊಲ್ಲು ಸುರಿಸುತ್ತಾ ಕಾಯುತ್ತಿರುವ ಎಲ್ಲಾ ಪಕ್ಷಗಳ ರಾಜಕಾರಣಿಗಳ ದಂಡು ನೋಡಿದರೆ ಈ ಸಮಸ್ಯೆ ಬಗೆಹರಿಸಲು ಯಾವುದೇ ಇಚ್ಛಾಶಕ್ತಿಯನ್ನು ಈ ಸರ್ಕಾರಗಳು ಹೊಂದಿಲ್ಲ ಅನ್ನುವುದು ಸರ್ವವಿದಿತ.

ಆದ್ದರಿಂದ ಜನ ಹೋರಾಟವೊಂದೇ ದಾರಿ. ಈಗಾಗಲೇ ಜನಸಂಗ್ರಾಮ ಪರಿಷತ್, ರೈತ ಸಂಘಟನೆಗಳು, ಎಸ್‌ಯುಸಿಐ(ಸಿ), ಎಐಯುಟಿಯುಸಿ ಯಂತಹ ಹಲವು ಸಂಘಟನೆಗಳು ಹಾಗೂ ಸಂಡೂರು ಭಾಗದ ಹಲವಾರು ಯುವಜನರು ಸೇರಿ ಪಕ್ಷಾತೀತವಾದ ಗಣಿಬಾಧಿತ ಜನರ ಹೋರಾಟಕ್ಕಾಗಿ ಜನಸಮಿತಿಯನ್ನು ರಚಿಸಿದ್ದಾರೆ. ಈ ಹೋರಾಟಕ್ಕೆ ಹಲವಾರು ಹಿರಿಯರು ಬೆನ್ನೆಲುಬಾಗಿ ನಿಂತಿದ್ದಾರೆ. ಜನಸಮಿತಿಗಳನ್ನು ರಚಿಸಿಕೊಂಡು ಜನಹೋರಾಟ ಕಟ್ಟುವ ಮೂಲಕ ಮಾತ್ರ ಈ ಆಳ್ವಿಕರ ಹುನ್ನಾರಗಳನ್ನು ತಡೆಯಬಹುದು.

## ರಾಷ್ಟ್ರೀಯ ಸೌಹಾರ್ದ ದಿನ

ರಾಜ್ಯದ ಎಡ ಪಕ್ಷಗಳಾದ ಎಸ್‌ಯುಸಿಐ(ಸಿ), ಸಿಪಿಐ(ಎಂ), ಫಾರ್ವರ್ಡ್ ಬ್ಲಾಕ್, ಸಿಪಿಐ(ಎಂಎಲ್) ಒಗ್ಗೂಡಿ ಜೂನ್ 17ನ್ನು ರಾಷ್ಟ್ರೀಯ ಸೌಹಾರ್ದ ದಿನವನ್ನಾಗಿ ಆಚರಿಸಿದವು.

ಎಸ್‌ಯುಸಿಐ(ಸಿ)ನ ಕರ್ನಾಟಕ ರಾಜ್ಯ ಸಮಿತಿಯ ಸದಸ್ಯರಾದ ಕಾ|| ಎಂ. ಎನ್. ಶ್ರೀರಾಮ್‌ರವರು ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ಭಾರತ ಅಲಿಪ್ತ ರಾಷ್ಟ್ರಗಳ ಚಳುವಳಿಯ ಮುಂಚೂಣಿಯಲ್ಲಿದ್ದಾಗ ವಿಶ್ವ ಶಾಂತಿಯ ಮಂತ್ರ ಪಠಿಸುತ್ತಿತ್ತು, ಏಕೆಂದರೆ, ಅದು ಆಗ ತಾನೆ ಸ್ವಾತಂತ್ರ್ಯ ಗಳಿಸಿದ್ದು, ಯುದ್ಧವು ದೇಶದ ಬೆಳವಣಿಗೆಗೆ ಅಡಚಣೆಯಾಗಿತ್ತು. ಆದರೆ ಈಗ ಜಾಗತಿಕ ಮಟ್ಟದಲ್ಲಿ ಸಮಾಜವಾದಿ ಬಣ ಇಲ್ಲದೆ ಇರುವ ಸಂದರ್ಭದಲ್ಲಿ, ಅಮೇರಿಕ ನಡೆಸುತ್ತಿರುವ ಯಾವುದೇ ಯುದ್ಧಗಳನ್ನು ಭಾರತ ಸರ್ಕಾರ ಖಂಡಿಸುತ್ತಿಲ್ಲ. ವಿಶ್ವ ಶಾಂತಿಯ ಪರವಾಗಿ, ರಾಷ್ಟ್ರಮಟ್ಟದಲ್ಲಾಗಲಿ ಅಥವ ಅಂತರರಾಷ್ಟ್ರೀಯ ಮಟ್ಟದಲ್ಲಾಗಲಿ, ಚಳುವಳಿಗಳನ್ನು ಅಥವಾ ಕಾರ್ಯಕ್ರಮಗಳನ್ನು ರೂಪಿಸುತ್ತಿಲ್ಲ. ಬದಲಿಗೆ ತಾನೂ ಸಹ ಇತರೆ ನೆರೆಹೊರೆಯ ದೇಶಗಳ ಮೇಲೆ ಸಾಮ್ರಾಜ್ಯಶಾಹಿ ಧೋರಣೆ ತೋರುತ್ತಿದೆ. ಹೀಗಾಗಿ ಇಂದು ಎಲ್ಲಾ ಎಡಪಕ್ಷಗಳು ಒಂದಾಗಿ ಯುದ್ಧವಿರೋಧಿ ಶಾಂತಿಪರ ಚಳುವಳಿಗಳನ್ನು ಕಟ್ಟುವುದು ಅನಿವಾರ್ಯವಾಗಿದೆ ಎಂದರು.

ಸಿ.ಪಿ.ಐನ ರಾಜ್ಯ ಕಾರ್ಯದರ್ಶಿಗಳಾದ ಕಾ|| ಸಾತಿ ಸುಂದರೇಶ್ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

...5ನೇ ಪುಟದಿಂದ

## ಟ್ರಂಪ್‌ರವರ ಸುಂಕ ಯುದ್ಧ :

ವಿಧಿಸುತ್ತಿರುವ ಹೊಸ ಸುಂಕಗಳ ಪರಿಣಾಮವಾಗಿ ಅಮೆರಿಕಾದಲ್ಲಿನ ಉದ್ಯೋಗ ನಷ್ಟ, ಹಣದುಬ್ಬರ, ಆರ್ಥಿಕ ಹಿಂಜರಿತದ ಹೆಚ್ಚಳ ಮತ್ತು ತೆರಿಗೆ ಹೊರೆಯನ್ನು ಬಡವರು ಮತ್ತು ಮಧ್ಯಮ ವರ್ಗದವರ ಮೇಲೆ ಹೇರಲಾಗುತ್ತದೆ. ವಾಸ್ತವದಲ್ಲಿ ಈ ವ್ಯಾಪಾರಿ ಯುದ್ಧವು ಅಮೆರಿಕ ಮತ್ತು ಚೀನಾ ಎರಡರಲ್ಲೂ ಒಟ್ಟು ನೈಜ ಆದಾಯವನ್ನು ಕಡಿಮೆ ಮಾಡಿದೆ.

ಪ್ರಸಕ್ತ ಕಾಲಘಟ್ಟದಲ್ಲಿ ಬಂಡವಾಳಶಾಹಿ ಮಾರುಕಟ್ಟೆಯು ಗಣನೀಯವಾಗಿ ಕುಸಿದಿದೆ ಎಂಬುದನ್ನು ಮರೆಯಬಾರದು. ಆದರೂ ವಿಶ್ವ ಮಾರುಕಟ್ಟೆಯ ಪಾಲನ್ನು ಕಸಿದುಕೊಳ್ಳಲು ಬಂಡವಾಳಶಾಹಿಗಳು ಎರಡು ವಿಶ್ವ ಯುದ್ಧಗಳಿಗಿಂತ ಕಡಿಮೆಯಿಲ್ಲದಂತೆ ಈ ವ್ಯಾಪಾರಿ ಯುದ್ಧವನ್ನು ಪ್ರಾರಂಭಿಸಿದರು. ಲಾಭವನ್ನು ಗರಿಷ್ಠಗೊಳಿಸುವ ಮತ್ತು ಜಾಗತಿಕ ವ್ಯಾಪಾರದಲ್ಲಿ ಪ್ರತಿಸ್ಪರ್ಧಿಗಳನ್ನು ಮೀರಿಸುವ ಗುರಿಯನ್ನು ಹೊಂದಿರುವ ಸಾಮ್ರಾಜ್ಯಶಾಹಿ ಆಳ್ವಿಕರ ಈ ತೀವ್ರವಾದ ವ್ಯಾಪಾರಿ ಯುದ್ಧದಿಂದಾಗಿ ಎಲ್ಲಾ ದೇಶಗಳ ಶೋಷಿತ ದುಡಿಯುವ ಜನಸಾಮಾನ್ಯರು ಮತ್ತಷ್ಟು ದುಃಸ್ಥಿತಿಗೆ ತಳ್ಳಲ್ಪಡುತ್ತಿದ್ದಾರೆ.

### ಬಂಡವಾಳಶಾಹಿಯ ಬಗ್ಗೆ ಮಾರ್ಕ್ಸ್‌ರ ಮುನ್ಸೂಚನೆ ನಿಜವಾಗಿದೆ!

ಈ ಬಿಕ್ಕಟ್ಟು ಒಟ್ಟಾರೆ ಸಾಮ್ರಾಜ್ಯಶಾಹಿ–ಬಂಡವಾಳಶಾಹಿ ಆರ್ಥಿಕತೆಯ ಸಮಸ್ಯೆಯಾಗಿದ್ದು, ಇಲ್ಲಿ ಉತ್ಪಾದನೆಯ ಉದ್ದೇಶವು ಬೆರಳೆಣಿಕೆಯ ಬಂಡವಾಳಶಾಹಿ ಮಾಲೀಕರಿಗೆ ಗರಿಷ್ಠ ಲಾಭವನ್ನು ಗಳಿಸುವುದಾಗಿದೆ ಮತ್ತು ಎಲ್ಲಾ ನೀತಿಗಳನ್ನು ಆ ನಿಟ್ಟಿನಲ್ಲಿ ರೂಪಿಸಲಾಗಿದೆ; ಇದು ಶೋಷಿತ ಲಕ್ಷಾಂತರ ಜನರ ಹೆಚ್ಚುತ್ತಿರುವ ಬಡತನಕ್ಕೆ ಕಾರಣವಾಗುತ್ತದೆ. ಕಾಮ್ರೇಡ್ ಶಿವದಾಸ್ ಘೋಷ್ ಅವರು ಹೇಳಿದಂತೆ: "ಈ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಉತ್ಪಾದನೆಯ ಅಭಾದಿತ ಅಭಿವೃದ್ಧಿಗೆ ಇನ್ನು ಮುಂದೆ ಅವಕಾಶವಿಲ್ಲ. ಈ ಬಂಡವಾಳಶಾಹಿ ವ್ಯವಸ್ಥೆ ಬಿಕ್ಕಟ್ಟಿನಲ್ಲಿ ಸಿಲುಕಿದೆ... ಉತ್ಪಾದನೆ ಸ್ಥಗಿತಗೊಂಡಿದೆ, ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಲಾಗುತ್ತಿದೆ... ಕೆಲಸವಿಲ್ಲ..... ಯಾವುದೇ ದೇಶದ ಬಂಡವಾಳವಾದಕ್ಕೆ ತಡೆರಹಿತ ಮಾರುಕಟ್ಟೆಯ ವಿಸ್ತರಣೆಯನ್ನು ಮಾಡಲು ಸಾಧ್ಯವಿಲ್ಲ."

ಈ ಸುಂಕ ಯುದ್ಧವು ಸಾಮ್ರಾಜ್ಯಶಾಹಿ–ಬಂಡವಾಳಶಾಹಿಯ ಹೆಚ್ಚುತ್ತಿರುವ ಆರ್ಥಿಕ ಬಿಕ್ಕಟ್ಟಿನ ನಡುವೆ ತಾತ್ಕಾಲಿಕ ಉಪಶಮನವನ್ನು ಪಡೆಯುವ ಹತಾಶ ಪ್ರಯತ್ನವಾಗಿದೆ. ಮಾರ್ಕ್ಸ್ ಮತ್ತು ಎಂಗೆಲ್ಸ್ ಈ ಕುರಿತು ತಮ್ಮ ಕಮ್ಯುನಿಸ್ಟ್ ಪ್ರಣಾಳಿಕೆಯಲ್ಲಿ ಹೀಗೆ ಹೇಳಿದ್ದಾರೆ "ಸಮಾಜದಲ್ಲಿ ಆಳುವ ವರ್ಗವಾಗಿರಲು ಮತ್ತು ತನ್ನ ಅಸ್ತಿತ್ವಕ್ಕಾಗಿಯ ನಿಬಂಧನೆಗಳನ್ನು ಎಲ್ಲವನ್ನು ಅತಿಕ್ರಮಿಸುವ ಕಾನೂನಾಗಿ ಸಮಾಜದ ಮೇಲೆ ಹೇರಲು ಬೂರ್ಜ್ವಾ ವರ್ಗವು ಇನ್ನೆಷ್ಟು ಮಾತ್ರಕ್ಕೂ ಯೋಗ್ಯವಾಗಿಲ್ಲ... ಸಮಾಜವು ಈ ಬಂಡವಾಳಶಾಹಿ ವರ್ಗದ ಅಡಿಯಲ್ಲಿ ಇನ್ನು ಮುಂದೆ ಬದುಕಲು ಸಾಧ್ಯವಿಲ್ಲ, ಸರಳವಾಗಿ ಹೇಳಬೇಕೆಂದರೆ, ಅದರ ಅಸ್ತಿತ್ವವು ಇನ್ನು ಮುಂದೆ ಸಮಾಜದೊಂದಿಗೆ ಹೊಂದಿಕೆಯಾಗುವುದಿಲ್ಲ."

# ಎಲ್ಲಾ ರೀತಿಯ ಜೂಜು ನಿಷೇಧಿಸಲು ಎಐಡಿವೈಓ ಆಗ್ರಹ

ಆನ್‌ಲೈನ್ ಬೆಟ್ಟಿಂಗ್‌ಅನ್ನು ನಿಷೇಧಿಸಲು ಹೊಸ ಕಾನೂನನ್ನು ರೂಪಿಸಿ ಮುಂದಿನ ಅಧಿವೇಶನದಲ್ಲಿ ಚರ್ಚಿಸಿ ಜಾರಿಗೊಳಿಸಲಾಗುವುದು ಎಂದು ರಾಜ್ಯ ಸರ್ಕಾರ ಹೇಳಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇತ್ತೀಚೆಗಷ್ಟೇ ದಾವಣಗೆರೆಯಲ್ಲಿ ಯುವಕನೊಬ್ಬ ಆನ್‌ಲೈನ್‌ನಲ್ಲಿ ಬೆಟ್ಟಿಂಗ್ ಆಡಿ ಲಕ್ಷಾಂತರ ರೂಪಾಯಿ ಕಳೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಕ್ಕೆ ರಾಜ್ಯದ ಜನತೆ ದಿಗ್ಭ್ರಮೆಗೊಂಡಿದ್ದರು. ಅದೊಂದೇ ಘಟನೆಯಲ್ಲದೆ ಹಲವಾರು ವರ್ಷಗಳಿಂದ ನೂರಾರು ಯುವಜನರು ಈ ರೀತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರಿಂದಾಗಿ ಈಗಾಗಲೇ ನೂರಾರು ಕುಟುಂಬಗಳು ಬೀದಿಗೆ ಬಿದ್ದಿವೆ ಹಾಗೂ ಇದು ಸಮಾಜದಲ್ಲಿ ಅಪರಾಧಗಳು ಹೆಚ್ಚಾಗಲು ಕಾರಣವಾಗಿದೆ. ಜೂಜು ಹಾಗೂ ಆನ್‌ಲೈನ್ ಬೆಟ್ಟಿಂಗ್ ಇಂದು ಗ್ರಾಮೀಣ ಹಾಗೂ ನಗರ ಪ್ರದೇಶದ ಮೂಲೆ ಮೂಲೆಗೂ ವ್ಯಾಪಿಸಿದೆ.

ಆದರೆ, ಜೂಜಾಟವೇ ಒಂದು ಸಮಾಜ ವಿರೋಧಿ ಚಟುವಟಿಕೆಯಾಗಿರುವ ಸಂದರ್ಭದಲ್ಲಿ, ಅಧಿಕೃತ, ನೋಂದಾಯಿತ ಬೆಟ್ಟಿಂಗ್ ಜಾಲತಾಣಗಳನ್ನು ಮತ್ತು ಕೌಶಲ್ಯಾಧಾರಿತ ಬೆಟ್ಟಿಂಗ್‌ಅನ್ನು ನಿಷೇಧಿಸದೇ ಕೇವಲ ಅಕ್ರಮ ಹಾಗೂ ಅನಧಿಕೃತ ಬೆಟ್ಟಿಂಗ್ ಜಾಲಗಳ ಹಾಗೂ ಅದೃಷ್ಟ ಆಧಾರಿತ ಜೂಜಿನ ವಿರುದ್ಧ ಮಾತ್ರ ನಿಷೇಧ ಹಾಗೂ ಶಿಕ್ಷೆ ಅನ್ವಯವಾಗುವಂತೆ ಸರ್ಕಾರ ಕಾನೂನು ರೂಪಿಸಲು ಹೊರಟಿರುವುದು ಅತ್ಯಂತ ಹಾಸ್ಯಾಸ್ಪದವಾಗಿದೆ. ಮತ್ತೊಂದೆಡೆ ಬೆಟ್ಟಿಂಗ್ ಆ್ಯಪ್ ನೋಂದಾಯಿಸಿಕೊಳ್ಳಲು ಸರ್ಕಾರವೇ ಅವಕಾಶ ನೀಡುತ್ತಿದೆ. ಈ ಮೂಲಕ ಜೂಜನ್ನು ಹಿಂಬಾಗಿಲಿನ ಮೂಲಕ ಅಧಿಕೃತಗೊಳಿಸುವ ಹಾಗೂ ಇದರಿಂದ ಆದಾಯ ಹೆಚ್ಚಿಸಿಕೊಳ್ಳಲು ಹೊರಟಿರುವ ಸರ್ಕಾರದ




ಎಲ್ಲಾ ರೀತಿಯ ಆನ್‌ಲೈನ್ ಜೂಜು ಮತ್ತು ಬೆಟ್ಟಿಂಗ್ ನಿಷೇಧಕ್ಕಾಗಿ ದಾವಣಗೆರೆಯಲ್ಲಿ ಪ್ರತಿಭಟನೆ

ಈ ಹುನ್ನಾರವನ್ನು ಎಐಡಿವೈಓ ಕರ್ನಾಟಕ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸುತ್ತದೆ. ಇದರಿಂದಾಗಿ, ಎಲ್ಲಾ ಅನಧಿಕೃತ ಬೆಟ್ಟಿಂಗ್ ಆ್ಯಪ್‌ಗಳು, ಜಾಲತಾಣಗಳು ತಮ್ಮನ್ನು ಅಧಿಕೃತಗೊಳಿಸಿಕೊಂಡು ಕಾನೂನಿನಡಿಯಲ್ಲಿಯೇ ತಮ್ಮ ದಂಧೆಯನ್ನು ನಡೆಸಲು ಅವಕಾಶವಾಗುತ್ತದೆ ಮತ್ತು ಸಾಮಾಜಿಕ ಪಿಡುಗಾದ ಜೂಜನ್ನು ನಿರ್ಣಾಯಕವಾಗಿ ತೊಡೆದು ಹಾಕುವ ಆಶಯ ಈಡೇರಿದಂತಾಗುವುದಿಲ್ಲ.

ಆದ್ದರಿಂದ ರಾಜ್ಯ ಸರ್ಕಾರಕ್ಕೆ ನಿಜವಾಗಿಯೂ ಜನರ ಬಗ್ಗೆ ಕಾಳಜಿ ಇದ್ದರೆ, ಆನ್‌ಲೈನ್ ಜೂಜಾಟವನ್ನು ಸಂಪೂರ್ಣವಾಗಿ ನಿಷೇಧಿಸಲು ಅನುವಾಗುವಂತೆ ಕಾನೂನನ್ನು ರೂಪಿಸಲು ಮುಂದಾಗಬೇಕು ಎಂದು ಎಐಡಿವೈಓ ಆಗ್ರಹಿಸುತ್ತದೆ. ಸರ್ಕಾರ ಈ ನಿಟ್ಟಿನಲ್ಲಿ ಸಮಗ್ರ ಕಾನೂನು ರೂಪಿಸುವವರೆಗೂ ರಾಜ್ಯದ ಯುವಜನರು ಸಂಘಟಿತರಾಗಿ ಹೋರಾಟಗಳನ್ನು ಬೆಳೆಸಲು ಮುಂದೆ ಬರಬೇಕೆಂದು ಎಐಡಿವೈಓ ಕರೆ ನೀಡುತ್ತದೆ.

## ಮನಸೂರೆಗೊಂಡ

# ಬಳ್ಳಾರಿ ಹಾಗೂ ವಿಜಯನಗರ ಸಾಂಸ್ಕೃತಿಕ ಜನೋತ್ಸವಗಳು

ಇಂದಿನ ಕೊಳೆತ ಸಮಾಜದ ಪತನಗೊಂಡ ಮೌಲ್ಯಪ್ರಜ್ಞೆ, ನೀತಿ-ನೈತಿಕತೆಗಳು ಸಾಂಸ್ಕೃತಿಕ ರಂಗವನ್ನು ಸಂಪೂರ್ಣವಾಗಿ ಕಲುಷಿತಗೊಳಿಸಿವೆ. ಸಾಮಾಜಿಕ ಜಾಲತಾಣಗಳಿಂದ ಮನರಂಜನಾ ಮಾಧ್ಯಮದವರೆಗೂ ಎಲ್ಲಾ ಮಾಧ್ಯಮಗಳು ಅನೈತಿಕತೆ, ಅಶ್ಲೀಲತೆ, ಲೈಂಗಿಕ ದುರ್ಭಾವನೆಗಳನ್ನು ಬಿತ್ತುತ್ತಿವೆ. ಇದಕ್ಕೆ ಯುವ ಸಮೂಹ ಬಲಿಯಾಗಿದೆ. ಸ್ವಾತಂತ್ರ್ಯ ನಂತರದಲ್ಲಿ ಇದ್ದ ಅಲ್ಪಸ್ವಲ್ಪ ಆದರ್ಶದ ಆಕರ್ಷಣೆ, ಮೌಲ್ಯ-ನೀತಿಗಳ ಪಾಲಿಸುವಿಕೆ, ಸಮಾಜಮುಖಿ ಚಿಂತನೆಗಳು ಬಂಡವಾಳಶಾಹಿ ಆರ್ಥಿಕ-ಸಾಮಾಜಿಕ ವ್ಯವಸ್ಥೆಯ ಅಂತ್ಯಕಾಲದಲ್ಲಿ ಕಣ್ಮರೆಯಾಗಿವೆ. ಅತ್ಯಾಚಾರ, ಅನಾಚಾರಗಳು ಸರ್ವೇ ಸಾಮಾನ್ಯ ಎನ್ನುವಂತಾಗಿ, ಸೂಕ್ಷ್ಮ ಸಂವೇದನೆಗಳು ಸತ್ತು ಹೋಗುತ್ತಿವೆ. ಇಂತಹ ಸಂದರ್ಭದಲ್ಲಿ ಇವುಗಳಿಗೆ ಕಾರಣವಾದವುಗಳ ವಿರುದ್ಧದ ಹೋರಾಟದ ಜೊತೆಗೆ ಉದಾತ್ತ ವಿಚಾರಧಾರೆಗಳನ್ನು ಹರಡುವ ಸಾಂಸ್ಕೃತಿಕ ಆಂದೋಲನ, ಪರ್ಯಾಯವಾಗಿ ದುಡಿಯುವ ಜನರ ಪರವಾದ, ಸಮಾಜದ ಏಳಿಗೆಗೆ ಅಗತ್ಯವಾದ ಮೌಲ್ಯ, ನೀತಿಗಳನ್ನು ಹರಡುವ ಅಗತ್ಯ ತೀವ್ರವಾಗಿದೆ. ಈ ಹಿನ್ನೆಲೆಯಲ್ಲಿ ಆವಿಷ್ಕಾರ ಪ್ರಗತಿಪರ ಸಾಂಸ್ಕೃತಿಕ ತಂಡವು, ಇನ್ನಿತರ ಸಂಘಟನೆಗಳ ಜೊತೆಗೂಡಿ ಸಂಘಟಿಸುತ್ತಿರುವ ಸಾಂಸ್ಕೃತಿಕ ಕಾರ್ಯಕ್ರಮಗಳು ಮಹತ್ವಪೂರ್ಣವಾಗಿವೆ.

### ಬಳ್ಳಾರಿ ಸಾಂಸ್ಕೃತಿಕ ಜನೋತ್ಸವ




ಶ್ರೀ ಚಂದ್ರಕಾಂತ್ ವಡ್ಡು ಅವರಿಂದ ಉದ್ಘಾಟನಾ ಭಾಷಣ, ವೇದಿಕೆಯ ಮೇಲಿರುವವರು ಎಡದಿಂದ ಡಾ. ಪ್ರಮೋದ್, ಡಾ. ಮಧುಸೂಧನ್ ಕಾರಿಗನೂರು, ಶ್ರೀ ಭಾನುಪ್ರಕಾಶ್ ಕಡಗತ್ತೂರು ಹಾಗೂ ಕಾ॥ ಕೆ. ಎಂ. ಈಶ್ವರಿ

ಈ ನಿಟ್ಟಿನಲ್ಲಿ, ಜೂನ್ 7 ಹಾಗೂ 8, 2025 ರಂದು ಆವಿಷ್ಕಾರ ಪ್ರಗತಿಪರ ಸಾಂಸ್ಕೃತಿಕ ವೇದಿಕೆಯಿಂದ ಸಂಘಟಿತ 9ನೇ ಬಳ್ಳಾರಿ ಸಾಂಸ್ಕೃತಿಕ ಜನೋತ್ಸವ ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ನಡೆಯಿತು. ಖ್ಯಾತ ಬರಹಗಾರರು ಹಾಗೂ ಅಂಕಣಕಾರರು ಆಗಿರುವ ಶ್ರೀ ಚಂದ್ರಕಾಂತ್ ವಡ್ಡು ಅವರು ಜನೋತ್ಸವವನ್ನು ಉದ್ಘಾಟಿಸಿದರು. ಅವರು ಮಾತನಾಡುತ್ತಾ, "ಇಂದು ಪರಿಸರ ಮಾಲಿನ್ಯದ ಬಗ್ಗೆ ನಾವೆಲ್ಲರೂ ಮಾತನಾಡುತ್ತಿದ್ದೇವೆ. ಆದರೆ ಮಾಲಿನ್ಯ ಎಂಬುದು ಕೇವಲ ಪ್ರಕೃತಿಯನ್ನಾವರಿಸಿಕೊಂಡಿರುವ ಸಂಗತಿಯಲ್ಲ. ಬದಲಿಗೆ ರಾಜಕೀಯ, ಸಾಮಾಜಿಕ, ಕೌಟುಂಬಿಕ, ಸ್ನೇಹ, ವೃತ್ತಿ ಹೀಗೆ ಬದುಕಿನ ಬಹುತೇಕ ಕ್ಷೇತ್ರಗಳು ಮಲಿನಗೊಂಡ ಸಂದರ್ಭದಲ್ಲಿ ನಾವಿದ್ದೇವೆ. ಈ ಎಲ್ಲಾ ಪರಿಸರ ನಾಶದ ಮೂಲವಿರುವುದು ನಾಗರಿಕ ಮನುಷ್ಯನ ಮನಸ್ಸಿನಲ್ಲಿ. ಸ್ವಾರ್ಥ, ಲೋಭ, ಲಾಲಸೆ, ನಿಷ್ಕರುಣೆ, ತೋರಿಕೆ, ಸಮಯ ಸಾಧಕತನ ತುಂಬಿಕೊಂಡಿರುವ ಮನಸ್ಸುಗಳನ್ನು ನಿಭಾಯಿಸುವ, ನಿರ್ಮಲಗೊಳಿಸುವ ನಿಟ್ಟಿನಲ್ಲಿ ನಾವು ಗಂಭೀರವಾಗಿ ಯೋಚಿಸಬೇಕಿದೆ. ಪರಿಸರ ಮಾಲಿನ್ಯದ ವಿರುದ್ಧವಷ್ಟೇ ಅಲ್ಲ, ಜೊತೆ ಜೊತೆಯಲ್ಲಿ ಮನದ ಮಾಲಿನ್ಯದ ವಿರುದ್ಧ ನಾವೆಲ್ಲಾ ಒಗ್ಗೂಡಿ ಯುದ್ಧ ಮಾಡಬೇಕಿದೆ. ನಮ್ಮ ಪ್ರಚಲಿತ ರಾಜಕೀಯ, ಸಂಸ್ಕೃತಿಗಳಲ್ಲಿ ಆವರಿಸಿರುವ ಮಾಲಿನ್ಯಗಳಿಗೆ ವೈಚಾರಿಕ ನೆಲೆಯಲ್ಲಿ ಪರಿಹಾರೋಪಾಯಗಳನ್ನು ಕಂಡುಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ. ಮನದ ಮಾಲಿನ್ಯ ತೊಲಗಿಸುವ ಕೆಲಸ ವ್ಯಕ್ತಿಗತ ನೆಲೆಯಲ್ಲೂ ಆಗಬೇಕಿದೆ. ಇದು ಕಾರ್ಯಗತವಾದರೆ ಕೇವಲ ಪರಿಸರ ಮಾಲಿನ್ಯವಷ್ಟೇ ಅಲ್ಲ ಎಲ್ಲಾ ಬಗೆಯ ಮಾಲಿನ್ಯಗಳನ್ನು ತೊಲಗಿಸಬಹುದು, ನಿರ್ಮೂಲನೆಗೊಳಿಸಬಹುದು" ಎಂದು ಹೇಳಿದರು.

ಇಂಡಿಯನ್ ಮೆಡಿಕಲ್ ಅಸೋಸಿಯೇಷನ್‌ನ (IMA-KPSS) ಅಧ್ಯಕ್ಷರಾಗಿರುವ ಡಾ. ಮಧುಸೂದನ್ ಕಾರಿಗನೂರು ಅವರು ಸೂಕ್ತಿ ಮತ್ತು ಛಾಯಾಚಿತ್ರ ಪ್ರದರ್ಶನವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅವರು ಮಾತನಾಡುತ್ತಾ, "ಇಂದಿನ ವೇಗದ ಜೀವನದಲ್ಲಿ ಕಲೆಗೆ ಪ್ರಾಮುಖ್ಯತೆ ಕೊಡುವುದು ಕಡಿಮೆಯಾಗುತ್ತಿದೆ. ಕಲೆಗಳು ಕಾಣೆಯಾಗುತ್ತಿರುವ ಈ ದಿನಗಳಲ್ಲಿ ನಮ್ಮ ಜೀವನಕ್ಕೆ ದಾರಿದೀಪವಾಗುವ ಸೂಕ್ತಿಗಳನ್ನು ಪ್ರದರ್ಶನ ಮಾಡುವ ಈ ಕಾರ್ಯಕ್ರಮಗಳು ಅದ್ಭುತ" ಎಂದು ಹೇಳಿದರು.

ರಂಗ ನಿರ್ದೇಶಕರು, ನೀನಾಸಂ ಕಲಾವಿದರಾದ ಶ್ರೀ ಭಾನುಪ್ರಕಾಶ್ ಕಡಗತ್ತೂರು ಆಶಯ ನುಡಿಗಳನ್ನಾಡಿದರು. ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ಜಿಲ್ಲಾಧ್ಯಕ್ಷರಾಗಿರುವ ಕಾಮ್ರೇಡ್ ಈಶ್ವರಿ ಕೆ.ಎಂ. ಪ್ರಾಸ್ತಾವಿಕವಾಗಿ ಮಾತನಾಡಿದರು. ಸಾಮಾಜಿಕ ಹೋರಾಟಗಾರರಾದ ಡಾ. ಪ್ರಮೋದ್ ಎನ್. ಅವರು ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು.

ನಂತರ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಶ್ರೀ ದೊಡ್ಡಬಸಪ್ಪ ಗವಾಯಿ ಅವರಿಂದ ಸಂಗೀತ ರಸಾಯನ, ಇಂದ್ರಾಣಿ ನಾಟ್ಯಕಲಾ ಟ್ರಸ್ಟ್ ವತಿಯಿಂದ ಸಮೂಹ ನೃತ್ಯ, ವಿಜಯನಗರದ ಆವಿಷ್ಕಾರ ವೇದಿಕೆಯಿಂದ ಪ್ರಗತಿಪರ ಗೀತೆಗಳು, ಸುಜಾತ ಕಲಾ ಟ್ರಸ್ಟ್ ವತಿಯಿಂದ ನೃತ್ಯ ರೂಪಕ, ಡಾ. ರಾಮ್ ಕಿರಣ್ ಅವರಿಂದ ವಾದ್ಯ ಸಂಗೀತ, ಕೊನೆಯದಾಗಿ ಭಾನುಪ್ರಕಾಶ್ ಕಡಗತ್ತೂರು ನಿರ್ದೇಶನದ ಓ ಹೆನ್ರಿ ಅವರ ಕಥೆ ಆಧಾರಿತ 'ಕೊನೆ ಎಲೆ' ಎಂಬ ನಾಟಕ ಪ್ರಸ್ತುತಗೊಂಡಿತು. ವಿವಿಧ ತಂಡಗಳಿಂದ ಪ್ರಸ್ತುತಗೊಂಡ ಸಾಂಸ್ಕೃತಿಕ ಕಾರ್ಯಕ್ರಮಗಳು ತುಂಬಾ ಮನೋಜ್ಞವಾಗಿದ್ದವು.

ಆವಿಷ್ಕಾರ ಸಂಘಟಿತ 9ನೇ ಬಳ್ಳಾರಿ ಜನೋತ್ಸವದ ಎರಡನೇ ದಿನದ ಕಾರ್ಯಕ್ರಮಗಳು ಸಹ ಯಶಸ್ವಿಯಾಗಿ ಜರುಗಿದವು. ಆರಂಭದಲ್ಲಿ ಯುವಜನ ಸಾಂಸ್ಕೃತಿಕ ವೇದಿಕೆಯಿಂದ 'ಗೋಸುಂಬೆ' ಎಂಬ ಕಿರು ನಾಟಕ ಪ್ರಸ್ತುತಗೊಂಡಿತು. ಪೌರ ಕಾರ್ಮಿಕರ ಜೀವನವನ್ನು ಆಧರಿಸಿದ 'ಅಮರಾವತಿ' ಸಿನಿಮಾ ಪ್ರದರ್ಶನ ನಡೆಯಿತು. ಸಿನಿಮಾ ಸಂವಾದವನ್ನು ಆವಿಷ್ಕಾರದ ರಾಜ್ಯ ಸಂಘಟನಾಕಾರರು ಶ್ರೀ ಎಸ್.ಎನ್.ಸ್ವಾಮಿಯವರು ನಡೆಸಿಕೊಟ್ಟರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಐಎಂಎಸ್‌ಎಸ್, ಜಿಲ್ಲಾ ಕಾರ್ಯದರ್ಶಿ ಕಾ॥ ವಿಜಯಲಕ್ಷ್ಮಿ ವಹಿಸಿಕೊಂಡಿದ್ದರು.

### ವಿಜಯನಗರ ಸಾಂಸ್ಕೃತಿಕ ಜನೋತ್ಸವ




ಡಾ. ಎಂ. ಚಂದ್ರ ಪೂಜಾರಿಯವರು ಜನೋತ್ಸವ ಉದ್ಘಾಟಿಸಿ ಮಾತನಾಡುತ್ತಿರುವುದು. ವೇದಿಕೆಯ ಮೇಲಿರುವವರು ಎಡದಿಂದ ಡಾ. ಪಂಪಾಪತಿ, ಕಾ॥ ಎಂ.ಎನ್. ಮಂಜುಳಾ ಮತ್ತು ಡಾ. ಪ್ರಶಾಂತ್ ಬಡಿಗೇರ್

ದಿನಾಂಕ 14.06.2025 ರಂದು ಸಂಜೆ ಆವಿಷ್ಕಾರ ಪ್ರಗತಿಪರ ಸಾಂಸ್ಕೃತಿಕ ವೇದಿಕೆ ವತಿಯಿಂದ ಎರಡು ದಿನಗಳ ಕಾಲ ವಿಜಯನಗರ ಜಿಲ್ಲಾ ಸಾಂಸ್ಕೃತಿಕ ಜನೋತ್ಸವವನ್ನು ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಉನ್ನತ ಶಿಕ್ಷಣ ಅಕಾಡೆಮಿಯ ನಿರ್ದೇಶಕರಾದ ಡಾ. ಎಂ. ಚಂದ್ರಪೂಜಾರಿಯವರು ಸಾವಿತ್ರಿಭಾಯಿ ಫುಲೆ ಅವರ ಭಾವಚಿತ್ರವನ್ನು ಅನಾವರಣಗೊಳಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಇವರು ಮಾತನಾಡುತ್ತಾ, "ಹಲವು ಭಾಷೆ, ಸಂಸ್ಕೃತಿಗಳಿರುವ ರಾಜ್ಯದಲ್ಲಿ, ದೇಶದಲ್ಲಿ ಸಾಂಸ್ಕೃತಿಕ ಉತ್ಸವಗಳು ನಡೆಯುತ್ತಲೇ ಇರಬೇಕು. ಏಕೆಂದರೆ ಸಾಂಸ್ಕೃತಿಕ ಉತ್ಸವಗಳು ಮನಸ್ಸನ್ನು ಬೆಸೆಯುವ, ಜನರನ್ನು ಜೋಡಿಸುವ ಕಾರ್ಯಕ್ರಮಗಳು. ಹಾಡು, ಕುಣಿತ, ಕಲೆ, ಸಾಹಿತ್ಯ, ಸಂಗೀತ, ನಾಟಕ ಸಿನಿಮಾಗಳು ಎಲ್ಲರನ್ನೂ ಒಂದಾಗಿಸುತ್ತವೆ. ಜನರಲ್ಲಿ ಉತ್ತಮ ಬಾಂಧವ್ಯ ಬೆಸೆಯುವಂತಹ ವಾತಾವರಣ ಸೃಷ್ಟಿಯಾಗಬೇಕು. ಇದಕ್ಕೆ ಪ್ರೀತಿ, ಪ್ರೇಮ, ಪರಸ್ಪರ ನಂಬಿಕೆ ಇವೆಲ್ಲಾ ಸಹಕಾರ ಸಹಬಾಳ್ವೆಯ ಮೂಲ ದ್ರವ್ಯಗಳಾಗುತ್ತವೆ. ಇಂತಹವುಗಳನ್ನು ಹೆಚ್ಚಿಸುವಲ್ಲಿ ಈ ತರಹದ ಸಾಂಸ್ಕೃತಿಕ ಜನೋತ್ಸವಗಳ ಅಗತ್ಯ ತುಂಬಾ ಇದೆ" ಎಂದರು..

ಸೂಕ್ತಿ ಪ್ರದರ್ಶನದ ಉದ್ಘಾಟನೆಯನ್ನು ಮಾಡಿದ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ರಾಜ್ಯಾಧ್ಯಕ್ಷರಾದ ಕಾ॥ ಎಂ.ಎನ್.ಮಂಜುಳಾ ಅವರು ಮಾತನಾಡುತ್ತಾ, ಸಾಂಸ್ಕೃತಿಕ ಜನೋತ್ಸವವನ್ನು ದೇಶದ ಮೊದಲ ಶಿಕ್ಷಕಿಯಾದ ಸಾವಿತ್ರಿಭಾಯಿ ಫುಲೆಯವರಿಗೆ ಸಮರ್ಪಿಸಿರುವುದು ತುಂಬಾ ಸಂತೋಷದ ಸಂಗತಿಯಾಗಿದೆ. ಏಕೆಂದರೆ ಇವರು 19ನೇ ಶತಮಾನದ ಸಮಾಜ ಸುಧಾರಕಿಯಾಗಿದ್ದಾರೆ. ಮಹಿಳಾ ಶಿಕ್ಷಣ ಮತ್ತು ವಿಮೋಚನೆಯ ಕುರಿತಾದ ಅವರ ಆಲೋಚನೆಗಳು ಕ್ರಾಂತಿಕಾರಿಯಾಗಿದ್ದವು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ. ಪ್ರಶಾಂತ್ ಬಡಿಗೇರ ಅವರು ಸಾಂಸ್ಕೃತಿಕ ಜನೋತ್ಸವದ ಮಹತ್ವದ ಕುರಿತು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಪಂಪಾಪತಿ ವಹಿಸಿದ್ದರು.

ಉದ್ಘಾಟನಾ ಕಾರ್ಯಕ್ರಮದ ನಂತರ ಅಂಜಲಿ ಭರತನಾಟ್ಯ ತಂಡ, ನ್ಯಾಷನಲ್ ಬಿ.ಎಡ್. ಕಾಲೇಜಿನ ವಿದ್ಯಾರ್ಥಿಗಳು, ರತಾತ್ ತಂಡ, ಕಸ್ತೂರ್ ಬಾ ಬಾಲಕಿಯರಿಂದ ಡೊಳ್ಳು ಕುಣಿತ, ಪಾಲಾಕ್ಷ ಮತ್ತು ತಂಡದವರಿಂದ ಪ್ರಗತಿಪರ ಗೀತೆಗಳು ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಜನರ ಮನಸ್ಸನ್ನು ಸೂರೆಗೊಂಡವು. ಕೊನೆಯಲ್ಲಿ ರೈತರ ಧ್ವನಿ ನಾಟಕ ಪ್ರದರ್ಶನಗೊಂಡಿತು. ಮುಖ್ಯವಾಗಿ ರೈತರ ಭೂಕಬಳಿಯ ಕುರಿತ ಕಥಾವಸ್ತುವನ್ನು ಒಳಗೊಂಡ, ಬಿ.ಎಂ.ಎಸ್.ಪ್ರಭು ನಿರ್ದೇಶಿಸಿದ 'ರೈತರ ಧ್ವನಿ' ನಾಟಕವನ್ನು ರಂಗಚೌಕಿ ಕಲಾ ಟ್ರಸ್ಟ್ ತಂಡ ಮನೋಜ್ಞವಾಗಿ ಪ್ರದರ್ಶಿಸಿತು. ವಿದ್ಯಾರ್ಥಿ-ಯುವ ಜನತೆ, ಮಹಿಳೆಯರನ್ನು ಒಳಗೊಂಡಂತೆ ಹೊಸಪೇಟೆ, ಸುತ್ತಮುತ್ತ ಹಳ್ಳಿಗಳಿಂದ ನೂರಾರು ಕಲಾಪ್ರೇಮಿಗಳು ಭಾಗವಹಿಸಿದ್ದರು.

### ಯುವ ಕವಿಗೋಷ್ಠಿ ಹಾಗೂ ಸಿನಿಮಾ ಪ್ರದರ್ಶನ:

ವಿಜಯನಗರ ಸಾಂಸ್ಕೃತಿಕ ಜನೋತ್ಸವದ ಎರಡನೇ ದಿನದ ಕಾರ್ಯಕ್ರಮದಲ್ಲಿ 'ಮಾನವೀಯತೆಯ ವಿರುದ್ಧ ಯುದ್ಧ' ಈ ವಿಷಯದ ಕುರಿತು ಯುವ ಕವಿಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿತ್ತು. ಕವಿಗೋಷ್ಠಿಯಲ್ಲಿ ಯುವ ಕವಿಗಳು ಕವನ ವಾಚನವನ್ನು ಮಾಡಿದರು. ಮುಖ್ಯ ಅತಿಥಿಗಳಾಗಿ ಮಾತನಾಡಿದ ಪ್ರೊ.ಎಸ್.ಬಿ.ಚಂದ್ರಶೇಖರ್ ಅವರು "ಎಲ್ಲಾ ದೇಶದ ಗಡಿಗಳ ನಡುವೆ ಬಡವರ ಹೆಣಗಳು ರಾಶಿ ರಾಶಿ ಬಿದ್ದಿವೆ. ಮನಸ್ಸುಗಳ ನಡುವೆ ಜಾತಿ, ಧರ್ಮ, ಲಿಂಗ ತಾರತಮ್ಯಗಳ ಗೋಡೆ ಎದ್ದು ನಿಂತು ಯುದ್ಧಕ್ಕೆ ಇಂಧನವಾಗಿವೆ. ಹೀಗೆ ಯುದ್ಧವು ಎರಡೂ ರೀತಿಯಲ್ಲಿ ಮಾನವೀಯತೆಯನ್ನು ಕೊಲೆ ಮಾಡುತ್ತಿವೆ. ಸ್ವಸ್ಥ ಸಮಾಜವೆಂಬುದು ಕೇವಲ ಆದರ್ಶದ ಮಾತಾಗಿ ಉಳಿದಿದೆ. ಈ ಆದರ್ಶದ ಮಾತನ್ನು ಕವಿಗಳು ಜೀವಂತವಾಗಿ ಇಡುತ್ತಾ, ಕವನಗಳಲ್ಲಿ ಹಾಡುತ್ತಾ, ಸಮಾಜವಾದಿ ಸಮಾಜದ ಕಡೆಗೆ ಸಾಗಬೇಕಾದ ಅಗತ್ಯವಿದೆ" ಎಂದು ಆಶಯ ವ್ಯಕ್ತಪಡಿಸಿದರು.

ಕವಿಗೋಷ್ಠಿಯ ನಂತರ ಅಮರಾವತಿ ಚಲನಚಿತ್ರವನ್ನು ಪ್ರದರ್ಶಿಸಲಾಯಿತು. ಚಲನಚಿತ್ರ ವಿಮರ್ಶಕರಾಗಿ ಆಗಮಿಸಿದ್ದ ಡಾ.ಸುಚೇತಾ ಪೈ ಅವರು ಮಾತನಾಡಿ "ಸಮಾಜದ ಕೊಳಕನ್ನು ತೆಗೆಯುವ ಕೆಲಸಗಾರರನ್ನು ಕೀಳಾಗಿ ನೋಡುವವರೇ ನಿಜವಾದ ಕೊಳಕು ಮನುಷ್ಯರು. ನಿಜವಾಗಿಯೂ ಮನುಷ್ಯರನ್ನು ಮನುಷ್ಯರನ್ನಾಗಿಯೇ ನೋಡುವಂತಹ ಮಾನವೀಯತೆಯಿಂದ ನೋಡುವ ದೃಷ್ಟಿಕೋನವನ್ನು ಎಲ್ಲರೂ ಬೆಳೆಸಿಕೊಳ್ಳಬೇಕು ಎಂದು ಹೇಳಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಶಿವಮ್ಮ ವಹಿಸಿದ್ದರು.

# ಯುವಜನ ಆಗ್ರಹ ದಿನವಾಗಿ ಎಐಡಿವೈಓ 60ನೇ ವರ್ಷಾಚರಣೆ

26/6/2025: ಬೆಂಗಳೂರು: ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಓ) ನ 60ನೇ ವರ್ಷಾಚರಣೆ ಪ್ರಯುಕ್ತ ರಾಜ್ಯ ಸಮಿತಿಯ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ, ಖಾಲಿ ಹುದ್ದೆಗಳ ಭರ್ತಿಗಾಗಿ ಆಗ್ರಹಿಸುವ ಹಾಗೂ ಸಾಂಸ್ಕೃತಿಕ ಅಧ:ಪತನದ ವಿರುದ್ಧದ ರಾಜ್ಯಮಟ್ಟದ ಯುವಜನರ ಆಗ್ರಹ ದಿನದಲ್ಲಿ ಅತಿಥಿಗಳಾಗಿ ಖ್ಯಾತ ಸಿನಿಮಾ ನಿರ್ದೇಶಕರಾದ ಶ್ರೀ.ಬಿ.ಸುರೇಶ್, ಮುಖ್ಯ ಭಾಷಣಕಾರರಾಗಿ ಎಐಡಿವೈಓ ಅಖಿಲ ಭಾರತ ಉಪಾಧ್ಯಕ್ಷರಾದ ಡಾ. ಜಿ. ಎಸ್. ಕುಮಾರ್, ಖ್ಯಾತ ಮನೋವೈದ್ಯರಾದ ಡಾ. ಶಶಿಧರ್ ಬೀಳಗಿ, ಹಾಗೂ ಎಐಡಿವೈಓ ರಾಜ್ಯ ನಾಯಕರು ಮಾತನಾಡಿದರು. ನಂತರ ಈ ಕೆಳಗಿನ ಹಕ್ಕೊತ್ತಾಯಗಳ ಮನವಿ ಪತ್ರವನ್ನು ಮುಖ್ಯಮಂತ್ರಿಗಳಿಗೆ ನಿಯೋಗದ ಮೂಲಕ ಸಲ್ಲಿಸಲಾಯಿತು.

- ಕೇಂದ್ರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ 10 ಲಕ್ಷ ಹುದ್ದೆಗಳನ್ನು ಹಾಗೂ ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 2.75 ಲಕ್ಷ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು.
- ಸಾಮಾಜಿಕ ಜಾಲತಾಣಗಳು ಮತ್ತು ಸಮೂಹ ಮಾಧ್ಯಮಗಳಲ್ಲಿನ ಅಶ್ಲೀಲ ವಿಡಿಯೋಗಳು, ಹಿಂಸೆ, ಕ್ರೌರ್ಯವನ್ನು ನಿಷೇಧಿಸಬೇಕು. ಯುವಜನರನ್ನು ವ್ಯಸನಕ್ಕೀಡುಮಾಡುತ್ತಿರುವ ಆನ್‌ಲೈನ್ ಗೇಮ್, ಬೆಟ್ಟಿಂಗ್ ಹಾಗೂ ಮಾದಕ ದ್ರವ್ಯಗಳನ್ನು ನಿಷೇಧಿಸಬೇಕು.
- ಜನತೆಯ ಐಕ್ಯತೆಯನ್ನು ಮುರಿಯುವ ಜಾತಿವಾದಿ ಮತ್ತು ಕೋಮುವಾದಿ ಶಕ್ತಿಗಳನ್ನು ನಿಯಂತ್ರಿಸಬೇಕು.
- ಉದ್ಯೋಗ ಖಾತ್ರಿ ಯೋಜನೆಯಲ್ಲಿ ಬಜೆಟ್ ಅನುದಾನವನ್ನು ಹೆಚ್ಚಿಸಬೇಕು. ದಿನದ ಕೂಲಿಯನ್ನು ರೂ.600ಕ್ಕೆ ಹಾಗೂ ಮಾನವ ಕೆಲಸದ ದಿನಗಳನ್ನು 200ಕ್ಕೆ ಹೆಚ್ಚಿಸಬೇಕು.
- ಕೆಪಿಎಸ್‌ಸಿ ಪರೀಕ್ಷೆಗಳಲ್ಲಿ ಆಯ್ಕೆಯಾದ ಎಲ್ಲಾ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ಕೂಡಲೇ ನೀಡಬೇಕು ಹಾಗೂ ಕೆಪಿಎಸ್‌ಸಿಯಲ್ಲಿ ನಡೆಯುವ ಅಕ್ರಮ ಮತ್ತು ಭ್ರಷ್ಟಾಚಾರವನ್ನು ತಡೆಗಟ್ಟಬೇಕು. ನೇಮಕಾತಿಗಳ ಅರ್ಜಿ ಶುಲ್ಕ ಕೈಬಿಡಬೇಕು ಹಾಗೂ ನೇಮಕಾತಿ ಪ್ರವೇಶ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಉಚಿತ ಸಾರಿಗೆ ವ್ಯವಸ್ಥೆ ಮಾಡಬೇಕು.




ಮಾತನಾಡುತ್ತಿರುವವರು, ಶ್ರೀ. ಬಿ. ಸುರೇಶ್, ಖ್ಯಾತ ಚಲನಚಿತ್ರ ನಿರ್ದೇಶಕರು. ವೇದಿಕೆಯ ಮೇಲೆ: ಕಾ. ಸಿದ್ದಲಿಂಗ ಬಾಗೇವಾಡಿ, ಎಐಡಿವೈಓ ರಾಜ್ಯ ಕಾರ್ಯದರ್ಶಿಗಳು, ಕಾ. ವಿನಯ್ ಸಾರಥಿ, ಯುನೈಟೆಡ್ ಫುಡ್ ಡೆಲಿವರಿ ಪಾರ್ಟ್ನರ್ಸ್ ಯೂನಿಯನ್‌ನ ರಾಜ್ಯಾಧ್ಯಕ್ಷರು, ಡಾ. ಶಶಿಧರ್ ಬೀಳಗಿ, ಖ್ಯಾತ ಮನೋವೈದ್ಯರು, ಡಾ. ಜಿ.ಎಸ್.ಕುಮಾರ್, ಎಐಡಿವೈಓ ಅಖಿಲ ಭಾರತ ಉಪಾಧ್ಯಕ್ಷರು, ಕಾ. ಶರಣಪ್ಪ ಉದ್ಬಾಳ್, ರಾಜ್ಯಾಧ್ಯಕ್ಷರು, ಕಾ. ಜಗನ್ನಾಥ್, ರಾಜ್ಯ ಉಪಾಧ್ಯಕ್ಷರು




ಯುವಜನಾಗ್ರಹ

## ಪ್ಯಾಲೇಸ್ಟೀನ್ ಹಾಗೂ ಇರಾನ್ ಮೇಲಿನ ಸಾಮ್ರಾಜ್ಯಶಾಹಿ ದಾಳಿ ಹಾಗೂ ನರಮೇಧವನ್ನು ಖಂಡಿಸಿ ಎಡ ಪಕ್ಷಗಳ ಪ್ರತಿಭಟನೆಯಲ್ಲಿ ಎಸ್‌ಯುಸಿಐ(ಸಿ)




**ಧಾರವಾಡ: ಅಮೆರಿಕಾದ ಕುಮ್ಮಕ್ಕಿನಿಂದ ಇಸ್ರೇಲ್, ಪ್ಯಾಲೇಸ್ಟೀನ್‌ನ ಗಾಜಾದಲ್ಲಿ ನಡೆಸುತ್ತಿರುವ ಹತ್ಯಾಕಾಂಡ ಹಾಗೂ ಇರಾನ್ ಮೇಲಿನ ಬಾಂಬ್ ದಾಳಿಯನ್ನು ಖಂಡಿಸಿ ಎಡ ಪಕ್ಷಗಳಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಭಾರತ ಸರ್ಕಾರ, ಅಮೆರಿಕಾ ಹಾಗೂ ಇಸ್ರೇಲ್‌ನ ಯುದ್ಧಕೋರ ನೀತಿಯನ್ನು ಖಂಡಿಸಿ, ಯುದ್ಧ ವಿರೋಧಿ ನಿಲುವು ತೆಗೆದುಕೊಳ್ಳುವಂತೆ ಆಗ್ರಹಿಸಲಾಯಿತು.**

## ಭೂಸ್ವಾಧೀನ ವಿರೋಧಿ ಹೋರಾಟಗಾರರ ಬಂಧನಕ್ಕೆ ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷ ಖಂಡನೆ

**ಎಸ್‌ಯುಸಿಐ( ಸಿ) ನ ಕರ್ನಾಟಕ ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಕೆ. ಉಮಾರವರು ಈ ಕೆಳಕಂಡ ಹೇಳಿಕೆಯನ್ನು ನೀಡಿದ್ದಾರೆ**

ಬೆಂಗಳೂರಿನ ದೇವನಹಳ್ಳಿಯಲ್ಲಿ ಭೂಸ್ವಾಧೀನ ವಿರೋಧಿಸಿ ಕಳೆದ 1,180 ದಿನಗಳಿಂದ ಶಾಂತಿಯುತವಾಗಿ ಹೋರಾಡುತ್ತಿದ್ದ ರೈತರನ್ನು ಮತ್ತು ಜನಪರ ಹೋರಾಟಗಾರರನ್ನು ಬಂಧಿಸಿರುವ ರಾಜ್ಯ ಸರ್ಕಾರದ ಕ್ರಮವನ್ನು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯು ತೀವ್ರವಾಗಿ ಖಂಡಿಸುತ್ತದೆ.

ನಂದಿಗ್ರಾಮದ ರೈತ ಹೋರಾಟದ ಪರಿಣಾಮವಾಗಿ, ಕೃಷಿಭೂಮಿಯ ಸ್ವಾಧೀನಕ್ಕೆ ಶೇ.80ರಷ್ಟು ರೈತರ ಸಮ್ಮತಿ ಬೇಕು ಎಂಬ ಕಾನೂನನ್ನು 2013ರಲ್ಲಿ ಅಂದಿನ ಕೇಂದ್ರ ಕಾಂಗ್ರೆಸ್ ಸರ್ಕಾರವೇ ಜಾರಿ ಮಾಡಿತ್ತು.

ಈಗ ಬೆಂಗಳೂರಿನ ಹೊರವಲಯದ ದೇವನಹಳ್ಳಿಯಲ್ಲಿ ಹೈನುಗಾರಿಕೆ, ಹಾಲು ಉತ್ಪಾದನೆ, ತರಕಾರಿ ಬೆಳೆಯುವ ರೈತರನ್ನು ತಮ್ಮ 1,770 ಎಕರೆ ಭೂಮಿಯಿಂದ ಒಕ್ಕಲೆಬ್ಬಿಸಿ, ಕೈಗಾರಿಕೆಗಳಿಗೆ ನೀಡಲು ರಾಜ್ಯ ಕಾಂಗ್ರೆಸ್ ಸರ್ಕಾರ ಮುಂದಾಗಿರುವುದು ಅಪ್ಪಟ ಇಬ್ಬಗೆ ನೀತಿಯಾಗಿದೆ.

ದಿನ ಬೆಳಗಾದರೆ ಸಂವಿಧಾನ ರಕ್ಷಣೆಯ ಬಗ್ಗೆ ಮಾತನಾಡುವ ಕಾಂಗ್ರೆಸ್ ಸರ್ಕಾರ, ಸಂವಿಧಾನ ನೀಡಿರುವ ಶಾಂತಿಯುತ ಪ್ರತಿಭಟನೆಯ ಹಕ್ಕನ್ನು ಪೊಲೀಸ್ ಬಲದ ಮೂಲಕ ತುಳಿಯಲು ಮುಂದಾಗಿರುವುದನ್ನು ಖಂಡಿಸಲು ಪದಗಳೇ ಸಾಲದಾಗಿದೆ.

ಇಂತಹ ಕಡು ರೈತ ವಿರೋಧಿ ನಿರ್ಧಾರವನ್ನು ಕೈಬಿಟ್ಟು, ಬಂಧನಕ್ಕೆ ಒಳಗಾದವರನ್ನು ತಕ್ಷಣವೇ ಬಿಡುಗಡೆ ಮಾಡಬೇಕು, ರೈತರ ಸಮ್ಮತಿ ಇಲ್ಲದ ಭೂಸ್ವಾಧೀನ ಪ್ರಕ್ರಿಯೆಯನ್ನು ನಿಲ್ಲಿಸಬೇಕು ಎಂದು ಎಸ್‌ಯುಸಿಐ (ಸಿ) ಒತ್ತಾಯಿಸುತ್ತದೆ. ರೈತರ ನ್ಯಾಯಯುತ ಹೋರಾಟಕ್ಕೆ ಕೊನೆಯ ವರೆಗೂ ತನ್ನ ಬೆಂಬಲವನ್ನು ಸೂಚಿಸುತ್ತದೆ.

## ದುಡಿಯುವ ಅವಧಿ 10 ಗಂಟೆಗೆ ಏರಿಕೆಯ ಪ್ರಸ್ತಾಪ – ಎಸ್‌ಯುಸಿಐ(ಸಿ) ಖಂಡನೆ

### ಎಸ್‌ಯುಸಿಐ(ಸಿ) ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿಗಳಾದ ಕಾಮ್ರೇಡ್ ಕೆ. ಉಮಾರವರ ಪತ್ರಿಕಾ ಹೇಳಿಕೆ

ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯಿದೆಗೆ ತಿದ್ದುಪಡಿ ತಂದು, ಕೆಲಸದ ಅವಧಿಯನ್ನು 9 ರಿಂದ 10 ಗಂಟೆಗೆ ಹಾಗೂ ಹೆಚ್ಚುವರಿ ಅವಧಿಯನ್ನು (ಓಟಿ) 10 ರಿಂದ 12 ಗಂಟೆಗೆ ಏರಿಕೆ ಮಾಡಲು ರಾಜ್ಯ ಸರ್ಕಾರ ಮುಂದಾಗಿರುವುದನ್ನು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷವು ತೀವ್ರವಾಗಿ ಖಂಡಿಸುತ್ತದೆ.

8 ಗಂಟೆ ದುಡಿತ, 8 ಗಂಟೆ ವಿಶ್ರಾಂತಿ, 8 ಗಂಟೆ ಖಾಸಗಿ ಬದುಕು ಎಂಬ ವೈಜ್ಞಾನಿಕ ನೀತಿ, ಕಾರ್ಮಿಕರ ರಕ್ತಸಿಕ್ತ ಹೋರಾಟದ ಫಲವಾಗಿ ಜಗತ್ತಿನಾದ್ಯಂತ ಒಪ್ಪಿತವಾಗಿದೆ. ಆದರೆ ಉದಾರೀಕರಣ, ಖಾಸಗೀಕರಣ ಜಾರಿಯಾದ ನಂತರ ಬಂಡವಾಳಶಾಹಿಗಳ ಗರಿಷ್ಠ ಲಾಭದ ದಾಹವನ್ನು ಪೂರೈಸಲು ಕಾರ್ಮಿಕರನ್ನು ಮಿತಿ ಮೀರಿ ಶೋಷಣೆ ಮಾಡಲು ಸರ್ಕಾರಗಳು ಅವಕಾಶ ಮಾಡಿಕೊಡುತ್ತಿವೆ.

ಈ ರೀತಿ ಕೆಲಸದ ಅವಧಿಯನ್ನು ಹೆಚ್ಚಿಸುವುದರಿಂದ ಕಾರ್ಯಕ್ಷಮತೆ ಕಡಿಮೆಯಾಗುತ್ತದೆ, ಆರೋಗ್ಯದ ಮೇಲೆ ವ್ಯತಿರಿಕ್ತವಾದ ಪರಿಣಾಮ ಬೀರುತ್ತದೆ ಮತ್ತು ಉದ್ಯೋಗಗಳು ನಷ್ಟವಾಗುತ್ತವೆ ಎಂಬುದು ನೀತಿ ನಿರೂಪಕರಿಗೆ ಅರ್ಥವಾಗದ ವಿಷಯವಲ್ಲ. ಆದಾಗ್ಯೂ, ಇಂತಹ ನೀತಿ ಬರಲು ಇಂದು ಚಿಲ್ಲರೆ ವ್ಯಾಪಾರದ ಮೇಲೆ ಹಿಡಿತ ಸಾಧಿಸುತ್ತಿರುವ ದೇಶ ವಿದೇಶಗಳ ಬೃಹತ್ ಮಾಲ್‌ಗಳ ಒಡೆಯರ ಪ್ರಭಾವವೇ ಕಾರಣ ಎಂಬುದು ದುಡಿಯುವ ಜನರ ಆಕ್ಷೇಪವಾಗಿದೆ.

ಜೊತೆಗೆ 10ಕ್ಕಿಂತ ಕಡಿಮೆ ಕಾರ್ಮಿಕರು ಇರುವ ಅಂಗಡಿಗಳನ್ನು ಈ ಕಾಯ್ದೆಯ ವ್ಯಾಪ್ತಿಯಿಂದಲೇ ಹೊರಗಿಡುವ ಪ್ರಸ್ತಾಪವು, ಈ ಸರ್ಕಾರಕ್ಕೆ ದುಡಿಯುವ ಜನರ ಕುರಿತಾದ ನಿಷ್ಕಾಳಜಿಯನ್ನು ತೋರಿಸುತ್ತದೆ.

ಆದ್ದರಿಂದ, ಇಂತಹ ಅಪ್ಪಟ ಕಾರ್ಮಿಕ ವಿರೋಧಿ ನೀತಿಯನ್ನು ತಕ್ಷಣವೇ ಕೈಬಿಡಬೇಕೆಂದು ಎಸ್‌ಯುಸಿಐ (ಸಿ) ಕರ್ನಾಟಕ ರಾಜ್ಯ ಸಮಿತಿಯು ಒತ್ತಾಯಿಸುತ್ತದೆ.

Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

# 50 ಲಕ್ಷ ಸಹಿ ಸಂಗ್ರಹ ಅಭಿಯಾನ

ರಾಜ್ಯದಾದ್ಯಂತ ಸರ್ಕಾರಿ ಶಾಲೆಗಳನ್ನು ರಕ್ಷಿಸಿ ಬಲಪಡಿಸಿ, ಸಾರ್ವಜನಿಕ ಶಿಕ್ಷಣ ಉಳಿಸಿ ಎಂಬ ಘೋಷಣೆಯೊಂದಿಗೆ ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆಯು 50 ಲಕ್ಷ ಸಹಿ ಸಂಗ್ರಹ ಅಭಿಯಾನಕ್ಕೆ ಕರೆ ನೀಡಿದ್ದು, ಎಲ್ಲೆಡೆ ವಿದ್ಯಾರ್ಥಿಗಳು–ಶಿಕ್ಷಕರು–ಪೋಷಕರಿಂದ ಅಭೂತಪೂರ್ವವಾದ ಪ್ರತಿಕ್ರಿಯೆ ದೊರೆಯುತ್ತಿದೆ. ಈಗಾಗಲೇ ರಾಜ್ಯಾದ್ಯಂತ 25 ಲಕ್ಷಕ್ಕೂ ಹೆಚ್ಚು ಸಹಿ ಸಂಗ್ರಹಣೆಯಾಗಿದ್ದು, 10,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ವಯಂ ಸೇವಕರಾಗಿ ಸರ್ಕಾರಿ ಶಾಲೆಗಳನ್ನು ಉಳಿಸುವ ಈ ಅಭಿಯಾನದಲ್ಲಿ ಭಾಗವಹಿಸಿದ್ದಾರೆ. ವಿದ್ಯಾರ್ಥಿಗಳು ತಮ್ಮ ಊರು–ಕೇರಿ ಎನ್ನದೇ ಎಲ್ಲೆಡೆ ಜನರಿಗೆ ಸಾರ್ವಜನಿಕ ಶಿಕ್ಷಣ ಉಳಿಸಿ ಘೋಷಣೆಯ ಮಹತ್ವವನ್ನು ತಿಳಿಸುತ್ತಾ, ಸಹಿಯನ್ನು ಸಂಗ್ರಹಿಸುತ್ತಿದ್ದಾರೆ. ಸಹಿ ಸಂಗ್ರಹಣೆಯೊಂದಿಗೆ ಸರ್ಕಾರಿ ಶಾಲೆಗಳನ್ನು ಬಲಪಡಿಸುವಲ್ಲಿ ಹಲವು ಯಶಸ್ವಿ ಹೋರಾಟಗಳು ಎಐಡಿಎಸ್‌ಓ ನೇತೃತ್ವದಲ್ಲಿ ಜರುಗಿವೆ.




# ಸರ್ಕಾರಿ ಶಾಲೆಗೆ ಮೂಲಭೂತ ಸೌಕರ್ಯ ಆಗ್ರಹಿಸಿ ಪ್ರತಿಭಟನೆ

ಮೈಸೂರು ಜಿಲ್ಲೆ ಎಚ್.ಡಿ ಕೋಟೆ ತಾಲೂಕಿನ ಆನೆಮಾಳದ ಹಾಡಿ, ಗೋಳೂರು ಹಾಡಿ ಮತ್ತು ಬಳ್ಳೇ ಹಾಡಿಗಳ ಸರ್ಕಾರಿ ಶಾಲೆಗಳಿಗೆ ಕಟ್ಟಡಗಳನ್ನು ನಿರ್ಮಿಸಿ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕೆಂದು ಆಗ್ರಹಿಸಿ ಎಐಡಿಎಸ್‌ಓ ಮೈಸೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ವಿದ್ಯಾರ್ಥಿಗಳನ್ನೂ ಸೇರಿದಂತೆ ಹಾಡಿ ಜನರನ್ನು ಸಂಘಟಿಸಿ ಪ್ರತಿಭಟನೆ ನಡೆಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಪ್ರತಿಭಟನೆಯ ನಂತರ ಎಚ್.ಡಿ ಕೋಟೆ ತಾಲೂಕಿನ ಆನೆಮಾಳದಹಾಡಿ, ಗೋಳೂರು ಹಾಡಿ, ಬಳ್ಳೆ ಹಾಡಿ, ಸೋನಹಳ್ಳಿ ಹಾಡಿ, ಮಾರನ ಹಾಡಿ, ಬಾವಲಿಹಾಡಿ ಸೇರಿದಂತೆ ಒಟ್ಟು ಏಳು ಹಾಡಿಗಳಿಗೆ 9 ಹೊಸ ಕೊಠಡಿಗಳ ನಿರ್ಮಾಣಕ್ಕೆ ಅನುಮೋದನೆ ಸಿಕ್ಕಿದೆ. ಇದು ಜನ ಚಳುವಳಿಗೆ ಸಿಕ್ಕ ಜಯವಾಗಿದೆ.




# ಸ್ವಾತಂತ್ರ್ಯ ಪೂರ್ವದ ಶಾಲೆಗೆ ಹೋರಾಟದಿಂದ ಕಟ್ಟಡ ಭಾಗ್ಯ!

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಕಂಚುಗಾರನ ಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸ್ವಂತ ಸುಸಜ್ಜಿತ ಕಟ್ಟಡ ಒದಗಿಸಲು ಶಾಲೆಯ ವಿದ್ಯಾರ್ಥಿಗಳು, ಊರಿನ ಗ್ರಾಮಸ್ಥರು ಹಾಗೂ ಪಾಲಕರು ಎಐಡಿಎಸ್‌ಓ ನೇತೃತ್ವದಲ್ಲಿ "ಸಾರ್ವಜನಿಕ ಶಿಕ್ಷಣ ಉಳಿಸಿ ಪಾಲಕರ ಹೋರಾಟ ಸಮಿತಿ" ರಚಿಸಿ ಪ್ರತಿಭಟನೆ ನಡೆಸಿದರು. ಹೊಸ ಕಟ್ಟಡ ನೀಡುವವರೆಗೂ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ ಎಂದು ಗ್ರಾಮಸ್ಥರು ಇಡೀ ಶಾಲೆಯ ಗೇಟ್ ಬಂದ್ ಮಾಡಿ, ಶಿಕ್ಷಕರನ್ನು ಶಾಲೆಯಿಂದ ಹೊರಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು. ಸುರಿಯುವ ಮಳೆಯಲ್ಲಿಯೂ ಪ್ರತಿಭಟನೆ ಮುಂದುವರೆಯಿತು.

1937ರಲ್ಲಿ ಸ್ವಾತಂತ್ರ್ಯ ಪೂರ್ವದಲ್ಲೇ ಆರಂಭವಾಗಿರುವ ಈ ಶಾಲೆಗೆ ಇಂದು ಕಟ್ಟಡವಿಲ್ಲವಾಗಿದೆ. ಮುಂಚೆ ಇದ್ದ ಹಳೆಯ ಕಟ್ಟಡವು ಬಳಕೆಗೆ ಯೋಗ್ಯವಿಲ್ಲದುದರಿಂದ ಒಂದೂವರೆ ವರ್ಷದ ಹಿಂದೆಯೇ ಇಲಾಖೆಯಿಂದ ಕೆಡವಲಾಗಿದೆ. ತಾತ್ಕಾಲಿಕವಾಗಿ ಪ್ರೌಢಶಾಲೆಯಲ್ಲಿ ತರಗತಿಗಳನ್ನು ನಡೆಸಲಾಗುತ್ತಿದೆಯಷ್ಟೇ. ಶಾಲೆಯ ಶೌಚಾಲಯ ಕೂಡ ಬಳಕೆಗೆ ಯೋಗ್ಯವಾಗಿಲ್ಲ. ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರು ಬಯಲಿನಲ್ಲಿಯೇ ಶೌಚ ಮಾಡುವ ಪರಿಸ್ಥಿತಿ ಇದೆ! ಕಟ್ಟಡದ ಕೊರತೆಯಿಂದಾಗಿ ಪಾಠ–ಪ್ರವಚನಗಳಿಗೆ ತೊಂದರೆಯಾಗುತ್ತಿದೆ. ಬಿಸಿಯೂಟದ ಕೊಠಡಿಯೂ ಸೋರುತ್ತಿದೆ. ಈ ಸಮಸ್ಯೆಗಳಿಂದ ಕಳೆದ ವರ್ಷಕ್ಕಿಂತ ಈ ವರ್ಷ ಶಾಲೆಯ ದಾಖಲಾತಿ ಕಡಿಮೆಯಾಗಿದೆ. ಕೂಲಿ ಮಾಡಿ ಜೀವನ ನಡೆಸುತ್ತಿರುವ ಊರಿನ ಬಡ ಜನರ ಮಕ್ಕಳು ಈ ಶಾಲೆಯಲ್ಲಿ ಓದುತ್ತಿದ್ದಾರೆ. ಕಟ್ಟಡದ ಕೊರತೆಯೂ ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಅವರಲ್ಲಿ ಆತಂಕ ಸೃಷ್ಟಿಸಿದೆ.



ಮೊದಲ ದಿನ ಮಧ್ಯಾಹ್ನ ಸ್ಥಳಕ್ಕೆ ಆಗಮಿಸಿದ ಬಿಇಓ ಅವರಿಂದ ಪರಿಹಾರ ದೊರೆಯದಿದ್ದಾಗ ಮೇಲಾಧಿಕಾರಿಗಳು ಮತ್ತು ಶಾಸಕರನ್ನು ಕರೆಸಲು ಒತ್ತಾಯಿಸಿ ಘೆರಾವ್ ಹಾಕಲಾಯಿತು. ಎರಡನೇಯ ದಿನ ಬಿಇಓ ಮತ್ತು ಇಓ ಭೇಟಿ ನೀಡಿ ತಾತ್ಕಾಲಿಕ ಕೊಠಡಿಗಳ ವ್ಯವಸ್ಥೆ ಮಾಡುವುದಾಗಿ ಜನಸಮೂಹವನ್ನು ಸಮಾಧಾನಪಡಿಸಲು ಪ್ರಯತ್ನಿಸಿದರು. ಆದರೆ, ಗ್ರಾಮಸ್ಥರು, ವಿಶೇಷವಾಗಿ ಪೋಷಕರು ಮತ್ತು ಸ್ಥಳೀಯ ಯುವಕರು, ಹೊಸ ಕಟ್ಟಡದ ಬೇಡಿಕೆಗೆ ದೃಢವಾಗಿ ನಿಂತು, ಮೌಖಿಕ ಭರವಸೆಗಳು ಅಥವಾ ತಾತ್ಕಾಲಿಕ ವ್ಯವಸ್ಥೆಗಳನ್ನು ನಿರಾಕರಿಸಿದರು. ಎರಡನೇ ದಿನ ಕೂಡ ಪರಿಹಾರ ನೀಡದೇ ಹೊರಟ ಅಧಿಕಾರಿಗಳನ್ನು ತಾಯಂದಿರು ಹಾಗೂ ಗ್ರಾಮಸ್ಥರು ತಡೆಹಿಡಿದರು. ಜನರ ಒತ್ತಾಯಕ್ಕೆ ಮಣಿದು ಕರೆ ಮೂಲಕ ಮಾತನಾಡಿದ ಸ್ಥಳೀಯ ಶಾಸಕ ಬಸವಂತಪ್ಪ, ಸೋಮವಾರದೊಳಗೆ ಹೊಸ ಶಾಲಾ ಕಟ್ಟಡದ 2 ಕೊಠಡಿಗಳಿಗೆ ಕಾಮಗಾರಿ ಆರಂಭಿಸುವುದಾಗಿ ಭರವಸೆ ನೀಡಿದರು. ಇದು ಜನರ ಐಕ್ಯ ಹೋರಾಟಕ್ಕೆ ಸಂದ ಜಯ!!

## ರಾಯಚೂರು : ವಸತಿ ನಿಲಯಕ್ಕಾಗಿ ಆಗ್ರಹಿಸಿ ಪ್ರತಿಭಟನೆ

ರಾಯಚೂರಿನ ಪ್ರೌಢ ಶಾಲಾ ಬಾಲಕಿಯರ ವಸತಿ ನಿಲಯದಲ್ಲಿ ವಿದ್ಯಾರ್ಥಿಗಳು ಕಡಿಮೆ ಸಂಖ್ಯೆಯಲ್ಲಿದ್ದಾರೆ ಎಂಬ ನೆಪವೊಡ್ಡಿ, ಪಿಯು ವಸತಿ ನಿಲಯವನ್ನಾಗಿ ಪರಿವರ್ತಿಸಲು ತೆಗೆದುಕೊಂಡಿರುವ ತೀರ್ಮಾನವನ್ನು ಖಂಡಿಸಿ ಎಐಡಿಎಸ್‌ಓ ರಾಯಚೂರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಯಿತು.




09-06-2025: ಶಹಾಬಾದ: ನಗರದ ಎಬಿಲ್ ಕ್ರಾಸ್‌ನಿಂದ ಕನಕದಾಸ ವೃತ್ತದವರೆಗೆ ಅಪೂರ್ಣಗೊಂಡಿರುವ ರಾಜ್ಯ ಹೆದ್ದಾರಿಯನ್ನು ಹಾಗೂ ಹೆದ್ದಾರಿಯ ಎರಡು ಬದಿಗಳಲ್ಲಿ ಚರಂಡಿಯನ್ನು ವೈಜ್ಞಾನಿಕವಾಗಿ ನಿರ್ಮಿಸಬೇಕೆಂದು ಮತ್ತು ಎರಡೂ ಬದಿಗಳಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸಬೇಕೆಂದು ಒತ್ತಾಯಿಸಿ ಎಸ್‌ಯುಸಿಐ (ಸಿ) ಪಕ್ಷದ ಶಹಾಬಾದ ಸ್ಥಳೀಯ ಸಮಿತಿ ನೇತೃತ್ವದಲ್ಲಿ ನಡೆದ ಪ್ರತಿಭಟನೆ.




Published by: K.Radhakrishna on behalf of SOCIALIST UNITY CENTRE OF INDIA-COMMUNIST, Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed by him at Balaji Publications, No.16/2, Bychatura Road, Magadi Town, Magadi-562120. Website: www.sucicommunist.org EDITOR: K.RADHAKRISHNA